ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 44 | ಅಕ್ಟೋಬರ್ 29–ನವೆಂಬರ್ 4, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಉಡುಪಿಯ ಗೇಣಿ ರೈತರ ಮುಖಂಡ

ಕಮ್ಯೂನಿಸ್ಟ್ ರಾಮಣ್ಣ ಲಾಲ್ ಸಲಾಂ!



2ನೇ 'ಅಯೋಧ್ಯಾಕಾಂಡದ' ಹುನ್ನಾರ 'ವಿಮೋಚನಾ ಸಮರಂ' ಪ್ರಮಾದಗಳ

ಸವಾಲು ಎದುರಿಸೋಣ





ಸಿಬಿಐ ಕತ್ತು ಹಿಸುಕಲಾಗುತ್ತಿದೆಯೇ?


ಉಪ ಚುನಾವಣೆಯಲ್ಲಿ ಬಿಜೆಪಿ ಸೋಲಿಸಿ



ಲೋಡ್ ಶೆಡ್ಡಿಂಗ್ ಸನ್ನಿಹಿತ?

ಆರೋಗ್ಯ ಕರ್ನಾಟಕ

ಸಾರ್ವತ್ರಿಕ ಸೇವೆಯಾದೀತೆ?



'ನನ್ನ ಉದ್ಯೋಗ ಎಲ್ಲಿ?'

ಸಿಬಿಐನಲ್ಲಿನ ಪರಿಸ್ಥಿತಿ ಅನಿಷ್ಟಕಾರಿ ಬೆಳವಣಿಗೆ –ಸಿಪಿಐ(ಎಂ) ಪೊಲಿಟ್ ಬ್ಯುರೊ

ದೇಶದ ಪ್ರಧಾನ ತನಿಖಾ ಸಂಸ್ಥೆಯಾದ ಸಿಬಿಐನಲ್ಲಿನ ಇತ್ತೀಚಿನ ವಿದ್ಯಮಾನಗಳು ಕೇಂದ್ರದ ಬಿಜೆಪಿ ಸರಕಾರದ ಅಡಿಯಲ್ಲಿ ಭಾರತದಲ್ಲಿ ಸಂವಿಧಾನಿಕ ಪ್ರಾಧಿಕಾರಗಳು ಮತ್ತು ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳಿಗೆ ಎಷ್ಟರ ಮಟ್ಟಿಗೆ ಹಾನಿ ಉಂಟಾಗಿದೆ ಎಂಬುದನ್ನು ತೋರಿಸುತ್ತವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ.

ಸಂಸತ್ತನ್ನೇ ಶಿಥಿಲಗೊಳಿಸುವುದು, ನ್ಯಾಯಾಂಗದಲ್ಲಿ ಹಸ್ತಕ್ಷೇಪ ಮತ್ತು ಸಿಬಿಐನಂತಹ ಸಂಸ್ಥೆಗಳಲ್ಲಿ ಕೈಚಳಕ ಇವೆಲ್ಲ ಕಳಪೆ 'ಆಳ್ವಿಕೆ'ಯಿಂದಾಗಿ ಅಲ್ಲ, ಬದಲಾಗಿ, ಭಾರತೀಯ ಸಂವಿಧಾನದ ಜಾತ್ಯತೀತ ಜನವಾದಿ ಬುನಾದಿಗಳನ್ನು ಶಿಥಿಲಗೊಳಿಸುವ ದುಷ್ಟ ಆಶಯಗಳಿಂದಾಗಿ ನಡೆಯುತ್ತಿವೆ ಎಂದಿರುವ ಪೊಲಿಟ್‌ಬ್ಯುರೊ ಈ ಬೆಳವಣಿಗೆಗಳು ಭಾರತೀಯ ಗಣತಂತ್ರಕ್ಕೆ ಗಂಭೀರ ಹಾನಿಯುಂಟು ಮಾಡುತ್ತಿವೆ ಎಂದು ಪರಿಗಣಿಸಬೇಕು, ಇವನ್ನು ಖಡಾಖಂಡಿತವಾಗಿ ಪ್ರತಿರೋಧಿಸಬೇಕು ಎಂದು ಹೇಳಿದೆ.

ಆರೆಸ್ಸೆಸ್–ಬಿಜೆಪಿ ನಮ್ಮ ದೇಶದ ಸಂವಿಧಾನಿಕ ವ್ಯವಸ್ಥೆಗೆ ಇನ್ನಷ್ಟು ಹಾನಿಯುಂಟು ಮಾಡದಂತೆ ತಡೆಯಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಮಹಿಳೆಯರ ಗಟ್ಟಿ ನಿಲುವಿನಿಂದಾಗಿ ಎಂ ಜೆ ಅಕ್ಬರ್ ರಾಜೀನಾಮೆ – ಎಐಡಿಡಬ್ಲ್ಯುಎ ಅಭಿವಂದನೆ

ವಿದೇಶಾಂಗ ಇಲಾಖೆಯ ರಾಜ್ಯಮಂತ್ರಿ ಎಂ.ಜೆ. ಅಕ್ಬರ್ ಕೊನೆಗೂ ತನ್ನ ಹುದ್ದೆಗೆ ರಾಜೀನಾಮೆ ನೀಡಬೇಕಾಗಿ ಬಂದಿದೆ. ಆತನ ಬೇಟೆಕೋರ ವರ್ತನೆಯನ್ನು ಸಮರ್ಥಿಸಿದ ಮತ್ತು ಅನುಮೋದಿಸಿದ ಪ್ರಭುತ್ವ ಶಕ್ತಿಯೆದುರು ಗಟ್ಟಿಯಾಗಿ ನಿಂತ ಎಲ್ಲ ಮಹಿಳೆಯರಿಗೂ ಅಭಿವಂದನೆ ಎಂದು ಅಖಿಲ ಬಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಹೇಳಿದೆ.

ನ್ಯಾಯದತ್ತ ಈ ಮೊದಲ ಹೆಜ್ಜೆ ಅದರ ತಾರ್ಕಿಕ ಕೊನೆಯನ್ನು ತಲುಪುವಂತಾಗಲು ಮಹಿಳೆಯರಿಗೆ ಎಲ್ಲ ರಕ್ಷಣೆ ಮತ್ತು ಕಾನೂನು ನೆರವನ್ನು ಒದಗಿಸಬೇಕು ಎಂದು ಎಐಡಿಡಬ್ಲ್ಯುಎ ಸರಕಾರವನ್ನು ಆಗ್ರಹಿಸಿದೆ.

ಈ ಮೊಕದ್ದಮೆಗಳಲ್ಲಿ ಮುಕ್ತ ಮತ್ತು ನ್ಯಾಯಪೂರ್ಣ ತನಿಖೆ ನಡೆಯುವಂತೆ ಮಾಡಬೇಕು ಮತ್ತು ಒಂದು ನ್ಯಾಯಯುತ ವಿಚಾರಣೆಯನ್ನು ಅಡ್ಡಿಪಡಿಸಲು ಮತ್ತು ದೂರುದಾರರನ್ನು ಬೆದರಿಸಲು ಅಕ್ಬರ್ ಅವರು ತನ್ನ ರಾಜಕೀಯ ಮತ್ತು ಸಾಮಾಜಿಕ ಪ್ರಭಾವವನ್ನು ಬಳಸದಂತೆ ಮಾಡಬೇಕು ಎಂದು ಅದು ಸರಕಾರಕ್ಕೆ ಕರೆ ನೀಡಿದೆ. ಇಂತಹ ಎಲ್ಲ ಲೈಂಗಿಕ ಕಿರುಕುಳದ ಕೇಸುಗಳನ್ನು ನಿರ್ವಹಿಸಲು ಕಾನೂನಿನ ಅಗತ್ಯ ಪ್ರಕ್ರಿಯೆಯನ್ನು ಅನುಸರಿಸುವಂತೆ ಆಡಳಿತದ ಮೇಲೆ ಸಾರ್ವಜನಿಕ ಒತ್ತಡವನ್ನು ಹಾಕುತ್ತಿರಬೇಕು ಎಂದು ಎಐಡಿಡಬ್ಲ್ಯುಎ ತನ್ನ ಎಲ್ಲ ಸದಸ್ಯರಿಗೆ ಕರೆ ನೀಡಿದೆ.

ಈಗ ಸುಭಾಷ್ ಬೋಸ್‌ರನ್ನು ಅಪಹರಿಸುವ ಆರೆಸ್ಸೆಸ್–ಬಿಜೆಪಿ ಪ್ರಯತ್ನ

ಭಾರತೀಯ ಸ್ವಾತಂತ್ರ್ಯ ಹೋರಾಟವನ್ನು ಕೈವಶ ಮಾಡಿಕೊಳ್ಳುವ ಹತಾಶೆ ಈಗ ಬಿಜೆಪಿಯನ್ನು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರನ್ನು ತಮ್ಮ ಪ್ರತಿಮೆಯಾಗಿ ಅಪಹರಿಸುವ ಪ್ರಯತ್ನಕ್ಕೆ ಕೈಹಾಕುವಂತೆ ಮಾಡಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಬ್ರಿಟಿಶ್ ಆಳ್ವಿಕೆಯಿಂದ ಸ್ವಾತಂತ್ರ್ಯಕ್ಕಾಗಿ ಭಾರತೀಯ ಜನತೆ ನಡೆಸಿದ ಮಹಾನ್ ಹೋರಾಟದ ಗಾಥೆಯಲ್ಲಿ ಆರೆಸ್ಸೆಸ್ ಮತ್ತು ಅದರ ರಾಜಕೀಯ ಅಂಗಗಳ ಪಾತ್ರ ಏನೇನೂ ಇರಲಿಲ್ಲ ಎಂಬುದು ಸಾಬೀತಾಗಿರುವ ಸಂಗತಿ. ಅವರು ಭಾಗವಹಿಸಲಿಲ್ಲ ಮಾತ್ರವಲ್ಲ, ಅವರ ಚಟುವಟಿಕೆಗಳು ಬ್ರಿಟಿಶರ ಪ್ರಯತ್ನಗಳಿಗೆ ಪೂರಕವಾಗಿದ್ದವು. ಆ ಕಳಂಕಿತ ಪಾತ್ರವನ್ನು ಅಳಿಸಿ ಬಿಡುವ ಪ್ರಯತ್ನದಲ್ಲಿ ಅವರು ಸರ್ದಾರ್ ಪಟೇಲ್ ಅವರನ್ನು ಕೈವಶ ಮಾಡಿಕೊಳ್ಳಲು ಪ್ರಯತ್ನಿಸಿದರು. ಈಗ ಸುಭಾಷ್ ಚಂದ್ರ ಬೋಸ್ ಅವರನ್ನು ಅಪಹರಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಮಹಾತ್ಮ ಗಾಂಧಿಯವರ ಹತ್ಯೆಯ ನಂತರ ಸ್ವತಃ ಸರ್ದಾರ್ ಪಟೇಲರೇ ಆರೆಸ್ಸೆಸ್ ಮೇಲೆ ನಿಷೇಧ ಹಾಕಿದವರು ಮತ್ತು ಸ್ವತಃ ಸುಭಾಷ್ ಚಂದ್ರ ಬೋಸ್ ರವರೇ, ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷರಾಗಿ, ಕಾಂಗ್ರೆಸ್ ಹಾಗೂ ಅವರು ಕೋಮುವಾದಿ ಸಂಘಟನೆಗಳು ಎಂದು ವರ್ಣಿಸಿದ ಹಿಂದೂ ಮಹಾಸಭಾ ಮತ್ತು ಮುಸ್ಲಿಂ ಲೀಗ್ ನಂತಹ ಸಂಘಟನೆಗಳ ದ್ವಂದ್ವ ಸದಸ್ಯತ್ವವನ್ನು ನಿಷೇಧಿಸಿದವರು ಎಂದು ನೆನಪಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸರ್ದಾರ್ ಪಟೇಲ್ ಮತ್ತು ಸುಭಾಷ್ ಚಂದ್ರ ಬೋಸ್ ಇವರಿಬ್ಬರೂ ಕೋಮುವಾದಿ ರಾಜಕೀಯವನ್ನು ತಿರಸ್ಕರಿಸಲು ಭಾರತೀಯ ಜನತೆಯನ್ನು ಅಣಿನೆರೆಸುವಲ್ಲಿ ಒಂದು ಮಹತ್ವಪೂರ್ಣ ಪಾತ್ರ ವಹಿಸಿದರು ಎಂದಿದೆ.

ಭಾರತೀಯ ಸ್ವಾತಂತ್ರ್ಯ ಹೋರಾಟದ ಕೆಲವು ಪ್ರತಿಮೆಗಳನ್ನು ಅಪಹರಿಸಿ ತಮ್ಮ ಕೈವಶ ಮಾಡಿಕೊಳ್ಳುವ ಆರೆಸ್ಸೆಸ್–ಬಿಜೆಪಿ ಪ್ರಯತ್ನಗಳನ್ನು ಭಾರತೀಯ ಜನತೆ ತುಚ್ಛೀಕಾರದಿಂದ ತಿರಸ್ಕರಿಸುತ್ತಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಕಾಶ್ಮೀರದಲ್ಲಿ ಭದ್ರತಾ ಪಡೆಗಳಿಂದ, ಕೇರಳದಲ್ಲಿ ಬಲಪಂಥೀಯ ಮಂದಿಗಳಿಂದ ಪತ್ರಕರ್ತರ ಮೇಲೆ ಹಲ್ಲೆ–ದಿಲ್ಲಿ ಪತ್ರಕರ್ತರ ಸಂಘದ ಖಂಡನೆ

ಪತ್ರಕರ್ತರ ಮೇಲೆ ಅವಳಿ ದಾಳಿಗಳಾಗುತ್ತಿವೆ. ಕೇರಳದಲ್ಲಿ ಪತ್ರಕರ್ತೆಯರು ಬಲಪಂಥೀಯ ಹಿಂಸಾಚಾರಿ ಜನಜಂಗುಳಿಗಳ ದಾಳಿಗಳಿಗೆ ಗುರಿಯಾಗಿದ್ದರೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಪತ್ರಕರ್ತರು ಭದ್ರತಾಪಡೆಗಳ ಹಲ್ಲೆಗಳಿಗೆ ಗುರಿಯಾಗಿದ್ದಾರೆ ಎಂಬುದನ್ನು ಅತ್ಯಂತ ಗಂಭೀರ ಭಾವದಿಂದ ಗಮನಿಸಿರುವುದಾಗಿ ದಿಲ್ಲಿ ಪತ್ರಕರ್ತರ ಸಂಘ(ಡಿಯುಜೆ) ಹೇಳಿದೆ.

ಶಬರಿಮಲೆ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶವನ್ನು ವಿರೋಧಿಸುತ್ತಿರುವ ಬಲಪಂಥೀಯ ಜನಜಂಗುಳಿಗಳು ವಿವಿಧ ವಾಹಿನಿಗಳ ಮತ್ತು ಮಾಧ್ಯಮಗಳ ವರದಿಗಾರರ ಮೇಲೆ, ಅದರಲ್ಲೂ ಮಹಿಳಾ ವರದಿಗಾರರ ಮೇಲೆ ನಡೆಸಿರುವ ಬಹಿರಂಗ ಹಲ್ಲೆಗಳು ಆಘಾತಕಾರಿ ಎಂದು ಡಿಯುಜೆ ವರ್ಣಿಸಿದೆ. ಅಕ್ಟೋಬರ್ 17ರಂದು ಶಬರಿಮಲೆಯಲ್ಲಿ ಹಲವಾರು ಟಿವಿ ವಾಹನಗಳ ಮೇಲೆ ಹಿಂಸಾಚಾರಿ ಜನಜಂಗುಳಿಗಳು ದಾಳಿ ಮಾಡಿದವು.

ನೀಲಕ್ಕಳ್‌ನಲ್ಲಿ ಸಿಎನ್‌ಎನ್ ನ್ಯೂಸ್ ವರದಿಗಾರ್ತಿ ರಾಧಿಕಾ ರಾಮಸ್ವಾಮಿರವರ ಕಾರನ್ನು ಸುತ್ತುವರಿದ ಜನಜಂಗುಳೀ ಕಾರನ್ನು ಬಲವಾಗಿ ಅಲುಗಾಡಿಸಿತು. ಸಿಎನ್‌ಎನ್ ನ್ಯೂಸ್‌ನ ನೀತು ರಘುಕುಮಾರ್ ಅವರಿಗೆ ಪಂಬಾದಲ್ಲಿ ಜನಜಂಗುಳಿ ಬಹಿರಂಗವಾಗಿಯೇ ಬೆದರಿಕೆ ಹಾಕಿತು. ಇತರ ಮೂವರು ಮಹಿಳಾ ವರದಿಗಾರರನ್ನು ಬೆದರಿಸುತ್ತಿದ್ದಾಗ ಪೋಲೀಸರು ಮೂಕಪ್ರೇಕ್ಷಕಕರಾಗಿದ್ದರು ಎಂದು ಆಕೆ ವರದಿ ಮಾಡಿದ್ದಾರೆ. ಟೈಮ್ಸ್ ನೌ ನ ಕಾಜಲ್ ಕೆ ಐಯರ್ ವರದಿ ಮಾಡುತ್ತಿದ್ದಾಗ ಆಕೆಯನ್ನು, ಕ್ಯಾಮರಾ ಸಿಬ್ಬಂದಿಯನ್ನು ಸುತ್ತುವರಿದು ಆ ಪ್ರದೇಶದಿಂದ ನೇರ ಪ್ರಸಾರ ಮಾಡಬಾರದೆಂದು ಬೆದರಿಸಿದರು. ನ್ಯೂಸ್ ಮಿನಿಟ್‌ನ್ ಸರಿತಾ ಬಾಲನ್ ಮೇಲೆ ಹಲ್ಲೆ ನಡೆಸಲಾಯಿತು. ರಿಪಬ್ಲಿಕ್ ಟಿವಿಯ ಪೂಜಾ ಪ್ರಸನ್ನ, ಎನ್‌ಡಿಟಿವಿಯ ಸ್ನೇಹಾ ಮೇರಿ ಕೋಶಿ ಮತ್ತು ಆಜ್‌ತಕ್‌ನ ಮೌಶಮಿ ಸಿಂಗ್ ಮೇಲೂ ಹಿಂಸಾಚಾರಿ ಜನಜಂಗುಳಿ ತೀವ್ರ ಹಲ್ಲೆ ನಡೆಸಿತು ಎಂದಿರುವ ಡಿಯುಜೆ ಕೇರಳ ಸರಕಾರ ಆದಷ್ಟು ಬೇಗನೇ ಈ ಜನಜಂಗುಳಿಗಳ ಮುಖಂಡರನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿದೆ.

ಕಾಶ್ಮೀರದಲ್ಲಿ ಅಕ್ಟೋಬರ್ 17ರಂದು ಭದ್ರತಾ ಪಡೆಗಳು ಕಾರ್ಯನಿರತರಾಗಿದ್ದ ಸುಮಾರು 20 ಪತ್ರಕರ್ತರ ಮೇಲೆ ಹಲ್ಲೆ ಮಾಡಿವೆ. ಅವರಲ್ಲಿ ಕೆಲವರಿಗೆ ಗಂಭೀರ ಗಾಯಗಳಾಗಿದ್ದು, ಶುಶ್ರೂಷೆ ಪಡೆಯುತ್ತಿದ್ದಾರೆ. ಈ ಹಿಂಸಾಚಾರದಲ್ಲಿ ತೊಡಗಿರುವ ಪೋಲೀಸರ ವಿರುದ್ಧ ಶಿಕ್ಷೆಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಡಿಯುಜೆ ಆಗ್ರಹಿಸಿದೆ.

ಪತ್ರಕರ್ತರ ಮೇಲೆ ಹೆಚ್ಚುತ್ತಿರುವ ದಾಳಿಗಳು ಮತ್ತು ದಾಳಿಕೋರರು ಶಿಕ್ಷೆಯಿಲ್ಲದೆ ಪಾರಾಗುತ್ತಿರುವ ಪ್ರವೃತ್ತಿಯನ್ನು ಡಿಯುಜೆ ಬಲವಾಗಿ ಖಂಡಿಸಿದೆ. ಕೇಂದ್ರ ಸರಕಾರ ಪತ್ರಕರ್ತರ ರಕ್ಷಣೆಗೆ ಒಂದು ಕಾನೂನನ್ನು ತರಬೇಕು ಮತ್ತು ಪತ್ರಕರ್ತರ ಮೇಲೆ ಹಲ್ಲೆ ಮಾಡುವವರನ್ನು ಶಿಕ್ಷಿಸಬೇಕು ಎಂದು ಡಿಯುಜೆ ಸರಕಾರವನ್ನು ಆಗ್ರಹಿಸಿದೆ.

ದೇಶ 2019ರ ಸಾರ್ವತ್ರಿಕ ಚುನಾವಣೆಗಳಿಗೆ ಸಿದ್ಧಗೊಳ್ಳುತ್ತಿರುವಾಗ ಪತ್ರಕರ್ತರ ಮೇಲೆ ಮತ್ತು ಪತ್ರಿಕಾ ಸ್ವಾತಂತ್ರ್ಯದ ಮೇಲೆ ದಾಳಿಗಳು ದೊಡ್ಡಪ್ರಮಾಣದಲ್ಲಿ ಹೆಚ್ಚುತ್ತಿರುವುದು "ಅತ್ಯಂತ ಕುತೂಹಲಕಾರಿ" ಎಂದು ಡಿಯುಜೆ ಹೇಳಿದೆ.

ಕೇರಳದಲ್ಲಿ ಮಹಿಳೆಯರು, ಮಹಿಳಾ ಮುಖಂಡರಿಗೆ ಮತ್ತು ಕಾರ್ಯಕರ್ತೆಯರಿಗೆ ಬಹಿರಂಗ ಬೆದರಿಕೆ ಹಾಕುತ್ತಿರುವ ಎಲ್ಲ ಬಿಜೆಪಿ–ಆರೆಸ್ಸೆಸ್ ಮುಖಂಡರನ್ನು ತಕ್ಷಣವೇ ಬಂಧಿಸಬೇಕು–ಎಐಡಿಡಬ್ಲ್ಯುಎ ಆಗ್ರಹ

ಶಬರಿಮಲೆ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಜಾರಿಯ ವಿರುದ್ಧ ಒಂದು ಕೋಮುವಾದಿ ಭಾವೋದ್ರೇಕವನ್ನು ಸೃಷ್ಟಿಸಲು ಬಿಜೆಪಿ–ಆರೆಸ್ಸೆಸ್ ಬೆಂಬಲಿತ ಬಲಪಂಥೀಯ ಗುಂಪುಗಳು ಪ್ರಯತ್ನಿಸುತ್ತಿವೆ. ಈ ಪ್ರಕ್ರಿಯೆಯಲ್ಲಿ ಒಟ್ಟಾರೆಯಾಗಿ ಮಹಿಳೆಯರು, ನಿರ್ದಿಷ್ಟವಾಗಿ ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ)ದ ಮುಖಂಡರು ತೀವ್ರ ದಾಳಿಗಳಿಗೆ ಒಳಗಾಗಿದ್ದಾರೆ. ಕೆಲವು ಆರೆಸ್ಸೆಸ್–ಬಿಜೆಪಿ ಮುಖಂಡರು ಶಬರಿಮಲೆ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲು ಪ್ರವೇಶಿಸುವ ಮಹಿಳೆಯರ ಮಾನಾಪಹರಣ ಮಾಡುತ್ತೇವೆ, ಅವರನ್ನು "ಸಿಗಿದು ಹಾಕುತ್ತೇವೆ" ಎಂದು ಬೆದರಿಸುವ ಮಟ್ಟಕ್ಕೂ ಇಳಿದಿದ್ದಾರೆ. ಇದನ್ನು ಎಐಡಿಡಬ್ಲ್ಯುಎ ಬಲವಾಗಿ ಖಂಡಿಸಿದೆ.

ನ್ಯಾಯಾಲಯ ಸಂವಿಧಾನದ 25ನೇ ವಿಧಿಯ ಅಡಿಯಲ್ಲಿ ಮಹಿಳೆಯರಿಗೆ ಇರುವ ಸಮಾನ ಪೂಜಾ ಸ್ವಾತಂತ್ರ್ಯವನ್ನು ಎತ್ತಿ ಹಿಡಿದಂದಿನಿಂದ ಆರೆಸ್ಸೆಸ್ ಮತ್ತು ಅದರ ಅಂಗ ಸಂಘಟನೆಗಳು ಸುಪ್ರಿಂ ಕೋರ್ಟಿನ ಮೇಲೆ ಮತ್ತು ಅದರ ತೀರ್ಪನ್ನು ಗೌರವಿಸಿರುವ ಎಲ್‌ಡಿಎಫ್ ಸರಕಾರದ ಮೇಲೆ ದಾಳಿಗಳನ್ನು ನಡೆಸುತ್ತಿವೆ. ಈ ಸಂಬಂಧದಲ್ಲಿ ಎಡಪಂಥೀಯರು ಮತ್ತು ಎಐಡಿಡಬ್ಲ್ಯುಎ ಸೇರಿದಂತೆ ಹಲವು ಸಾಮೂಹಿಕ ಸಂಘಟನೆಗಳು ಈ ತೀರ್ಪನ್ನು ಮಹಿಳೆಯರಿಗೆ ವಿವರಿಸುವ,. ಈ ಮೂಲಕ ಅವರು ಪ್ರತಿಗಾಮಿ ರಾಜಕೀಯ ಶಕ್ತಿಗಳ ವಿಚಾರಹೀನ ಮತ್ತು ಭಾವುಕ ಮಾತುಗಳಿಗೆ ಬಲಿ ಬೀಳದಂತೆ ಮಾಡುವ ಒಂದು ಬಡಮಟ್ಟದ ಪ್ರಚಾರಾಂದೋಲನವನ್ನು ಆರಂಭಿಸಿವೆ. ಇದರಿಂದ ಕುಪಿತಗೊಂಡ ಬಿಜೆಪಿ–ಆರೆಸ್ಸೆಸ್ ನಿರ್ದಿಷ್ಟವಾಗಿ ಎಐಡಿಡಬ್ಲ್ಯುಎ ಮುಖಂಡರ ಮೇಲೆ ದಾಳಿ ಮಾಡುತ್ತಿವೆ ಎಂದು ಅದು ಹೇಳಿದೆ.

ಎಐಡಿಡಬ್ಲ್ಯುಎ ಕೇರಳ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಪಿ. ಸತಿದೇವಿಯವರಿಗೆ ಒಬ್ಬ ಬಿಜೆಪಿ ಮುಖಂಡ ಟಿವಿ ಕಾರ್ಯಕ್ರಮವೊಂದರಲ್ಲಿ ಸಾರ್ವಜನಿಕವಾಗಿಯೇ ಬೆದರಿಕೆ ಹಾಕಿದ್ದಾನೆ, ಆಕೆ ಅಯ್ಯಪ್ಪನ ಬಳಿ ಕ್ಷಮೆ ಕೋರಬೇಕು, ಇಲ್ಲವಾದರೆ ಆಕೆಯನ್ನು ತುಂಡು–ತುಂಡುಮಾಡಿ ಹೆಣವೂ ಸಿಗದಂತೆ ಮಾಡುವುದಾಗಿ ಹೇಳಿದ್ದಾನೆ. ಅಲ್ಲದೆ ಜನಗಳನ್ನು ದಾರಿ ತಪ್ಪಿಸಲು ಬಿಜೆಪಿ ಮುಖಂಡರು ಎಐಡಿಡಬ್ಲ್ಯುಎ ರಾಷ್ಟ್ರೀಯ ಖಜಾಂಚಿ ಮತ್ತು ಸಂಸತ್ ಸದಸ್ಯರೂ ಆಗಿರುವ ಪಿ.ಶ್ರೀಮತಿ ಟೀಚರ್ ಅವರ ಒಂದು ಭಾಷಣವನ್ನು ವಿಕೃತಗೊಳಿಸಿ ಪ್ರಚಾರ ಮಾಡುತ್ತಿದ್ದಾರೆ. ಎಐಡಿಡಬ್ಲ್ಯುಎ ಮುಖಂಡರ ಮೇಲೆ ಈ ದಾಳಿಗಳು ಆರೆಸ್ಸೆಸ್–ಬಿಜೆಪಿ ಭಾವೋನ್ಮಾದವನ್ನು ಹರಿಯಬಿಡಲು ನಡೆಸಿರುವ ಪ್ರಯತ್ನದ ಭಾಗ ಎಂದು ಎಐಡಿಡಬ್ಲ್ಯುಎ ಹೇಳಿದೆ. ಒಬ್ಬ ಬಿಜೆಪಿ ಬೆಂಬಲಿಗ ಮತ್ತು ನಟ ತುಳಸಿ ದೇವಸ್ಥಾನಕ್ಕೆ ಹೋಗುವ ಮಹಿಳೆಯರನ್ನು ಎರಡಾಗಿ ಸಿಗಿದು ಒಂದು ಭಾಗವನ್ನು ಮುಖ್ಯಮಂತ್ರಿಗಳಿಗೆ, ಇನ್ನೊಂದು ಭಾಗವನ್ನು ಸುಪ್ರಿಂ ಕೋರ್ಟಿಗೆ ಕಳಿಸುವುದಾಗಿ ಹೇಳಿರುವುದು ಇದನ್ನು ತೋರಿಸುತ್ತದೆ. ದೇವಸ್ವಂ ಮಂಡಳಿಯ ಮಾಜಿ ಅಧ್ಯಕ್ಷ ಪ್ರಯರ್ ಗೋಪಾಲಕೃಷ್ಣನ್ "ಶಬರಿಮಲೆ ದೇವಸ್ಥಾನವನ್ನು ಪ್ರವೇಶಿಸುವ ಮಹಿಳೆಯರ ಮೇಲೆ ಹುಲಿಗಳು ಮತ್ತು ಗಂಡಸರು ಎರಗುತ್ತಾರೆ" ಎಂದಿದ್ದಾರೆ.

ಪ್ರಗತಿಪರ ಶಬರಿಮಲೆ ತೀರ್ಪನ್ನು ಬುಡಮೇಲು ಮಾಡಲು ಪ್ರಯತ್ನಿಸುತ್ತಿರುವ ಬಿಜೆಪಿ ಮತ್ತು ಕಾಂಗ್ರೆಸ್‌ನಂತಹ ರಾಜಕೀಯ ಪಕ್ಷಗಳನ್ನು ಮತ್ತು ಆರೆಸ್ಸೆಸ್ ನಂತಹ ಪ್ರತಿಗಾಮಿ ಶಕ್ತಿಗಳನ್ನು ಬಲವಾಗಿ ವಿರೋಧಿಸುತ್ತೇವೆ ಎಂದಿರುವ ಎಐಡಿಡಬ್ಲ್ಯುಎ, ತೀರ್ಪನ್ನು ಜಾರಿಗೊಳಿಸುವ ಮತ್ತು ಮಹಿಳೆಯಲ್ಲಿರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಸಂವಾದ ನಡೆಸುವ ಎಲ್‌ಡಿಎಫ್ ಸರಕಾರದ ನಿರ್ಧಾರವನ್ನು ಬೆಂಬಲಿಸಿದೆ. ಮಹಿಳೆಯರು, ಮಹಿಳಾ ಮುಖಂಡರಿಗೆ ಮತ್ತು ಕಾರ್ಯಕರ್ತೆಯರಿಗೆ ಬಹಿರಂಗ ಬೆದರಿಕೆಗಳನ್ನು ಹಾಕುತ್ತಿರುವ, ಮತ್ತು ಎಡ ಚಳುವಳಿ ಪೋಷಿಸಿ ಬೆಳೆಸಿರುವ ಶಾಂತಿ ಮತ್ತು ಸಾಮರಸ್ಯದ ವಾತಾವರಣವನ್ನು ಕದಡಿಸುತ್ತಿರುವ ಎಲ್ಲ ಬಿಜೆಪಿ–ಆರೆಸ್ಸೆಸ್ ಮುಖಂಡರನ್ನು ತಕ್ಷಣವೇ ಬಂಧಿಸಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.

ನವದೆಹಲಿಯಲ್ಲಿ ಅಕ್ಟೋಬರ್ 24 ರಂದು ರಫೆಲ್ ಹಗರಣದ ಮೇಲೆ 'ಸಾರ್ವಜನಿಕ ವಿಚಾರಣೆ' ಕಾರ್ಯಕ್ರಮ ನಡೆಯಿತು. ಇದನ್ನು ಎಡಪಕ್ಷಗಳು ಏರ್ಪಡಿಸಿದ್ದವು. ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)–ಲಿಬರೇಶನ್ ಮತ್ತು ಇತರ ಪಕ್ಷಗಳ ಮುಖಂಡರಲ್ಲದೆ ಹಿರಿಯ ಸುಪ್ರಿಂ ಕೋರ್ಟ್ ವಕೀಲ ಪ್ರಶಾಂತ ಭೂಷಣ್, ಧೋರಣಾ ವಿಶ್ಲೇಷಕ ರವಿ ನಾಯರ್ ಮತ್ತು ರಕ್ಷಣಾ ಪರಿಣಿತ ಡಿ.ರಘುನಂದನ್ ಮಾತನಾಡಿದರು.




ಸಂಪಾದಕೀಯ

ಲೋಡ್ ಶೆಡ್ಡಿಂಗ್ ಸನ್ನಿಹಿತ ?

ನಗರದಲ್ಲಾಗಲಿ, ಗ್ರಾಮೀಣ ಪ್ರದೇಶಗಳಲ್ಲಾಗಲಿ ಆಗಾಗ ಯಾವುದೇ ಕಾರಣ ಕೊಡದೆ ಕರೆಂಟ್ ತೆಗೆಯುವುದು ಸಾಮಾನ್ಯ. ಆಗೊಮ್ಮೆ ಈಗೊಮ್ಮೆ ಲೈನು ಅಥವಾ ಉಪಕರಣಗಳ ದುರಸ್ತಿಗೆ ಮೊದಲೇ ಘೋಷಣೆ ಮಾಡಿ ಕರೆಂಟ್ ತೆಗೆಯುವುದು ಅಪರೂಪದ ವಿಚಾರ. ಇಡೀ ದಿನ ಕರೆಂಟ್ ತೆಗೆದಾಗ ಮಾತ್ರ ಅಂತಹ ಘೋಷಣೆ ಬರಬಹುದು. 1–2 ಗಂಟೆ ಕರೆಂಟ್ ತೆಗೆಯುವುದು ಎಷ್ಟು ಸಾಮಾನ್ಯವಾಗಿ ಬಿಟ್ಟಿದೆಯೆಂದರೆ ಆ ಬಗ್ಗೆ ಯಾರೂ ದೂರುವುದಿಲ್ಲ. ಕೆಲವು ದಿನಗಳಿಂದ 'ಅಧಿಕೃತವಾಗಿ ಲೋಡ್ ಶೆಡ್ಡಿಂಗ್ ಸದ್ಯದಲ್ಲೇ ಘೋಷಣೆಯಾಗಲಿದೆ,', "ಕತ್ತಲ ದೀಪಾವಳಿ ಬರಲಿದೆ" ಇತ್ಯಾದಿ ವರದಿಗಳು ಮಾಧ್ಯಮದಲ್ಲಿ ಕಾಣಿಸಿಕೊಂಡಿವೆ. ಇದನ್ನು ನಿರಾಕರಿಸುತ್ತಾ ಮುಖ್ಯಮಂತ್ರಿ 'ಸಮಸ್ಯೆ ಇದೆ' ಆದರೆ ಲೋಡ್ ಶೆಡ್ಡಿಂಗ್ ಮಾಢುವುದಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಆದರೆ ಅಘೋಷಿತ ಲೋಡ್ ಶೇಡ್ಡಿಂಗ್ ಹೆಚ್ಚು ಕಡಿಮೆ ಜಾರಿಯಯಲ್ಲಿದೆ ಎಂದು ಹಲವು ವರದಿಗಳು ಹೇಳಿವೆ.

ಮುಖ್ಯಮಂತ್ರಿ, ಇಲಾಖೆ ಎಸ್ಕಾಂ ಅಧಿಕಾರಿಗಳೂ ಮತ್ತಿತರರ ಹೇಳಿಕೆಗಳು, ಇತರ ಮಾಹಿತಿಗಳು–ವರದಿಗಳನ್ನು ಪರಿಶೀಲಿಸಿದರೆ ಸಮಸ್ಯೆ ಇರುವುದು ಖಂಡಿತ ನಿಜ. ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಮತ್ತು ಲಭ್ಯತೆ ಮಧ್ಯೆ ವ್ಯತ್ಯಯ ತಲೆದೋರಿದೆ. ಬೆಳಿಗ್ಗೆ 6 ರಿಂದ 9 ಗಂಟೆ (8600–9200 ಮೆಗಾವಾಟ್), ಮಧ್ಯಾಹ್ನ 2 ರಿಂದ 5 ಗಂಟೆ (8100–10,200 ಮೆಗಾವಾಟ್) ಮತ್ತು ರಾತ್ರಿ 10ರಿಂದ ಬೆಳಿಗ್ಗೆ 6ಗಂಟೆಯ (7400–8600 ಮೆಗಾವಾಟ್) ಅವಧಿಗಳಲ್ಲಿ ಬೇಡಿಕೆ ಮತ್ತು ಪೂರೈಕೆ ಹೊಂದಾಣಿಕೆಯಾಗುತ್ತಿದ್ದು, ಹೆಚ್ಚಿನ ಸಮಸ್ಯೆ ಇಲ್ಲ. ಆದರೆ ಸಂಜೆ 5 ರಿಂದ 10ರ ಅವಧಿಯಲ್ಲಿ ಬೇಡಿಕೆ 8600–9100 ಮೆಗಾವಾಟ್ ಇದ್ದರೆ, ಪೂರೈಕೆ 8400–8700 ಇರುತ್ತದೆ. ಅಂದರೆ 200–400 ಮೆಗಾವಾಟ್ ಕೊರತೆಯಾಗುತ್ತಿದೆ. ಈಗ ವಿದ್ಯುತ್ ಉತ್ಪಾದನೆಯಲ್ಲಿ ಸೌರ ಮೂಲದಿಂದ ಸುಮಾರು 2000–2500 ಮೆಗಾ ವಾಟ್ ಬರುತ್ತಿದೆ ಮತ್ತು ಇದು ಸಂಜೆಯ ನಂತರ ಲಭ್ಯವಿರುವುದಿಲ್ಲ. ಬೇಸಗೆಯ ಬ್ಯಾಕ್–ಅಪ್ ಆಗಿ ಇಟ್ಟುಕೊಂಡು, ಜಲಮೂಲವನ್ನು ಈಗ ವಿದ್ಯುತ್ ಉತ್ಪಾದನೆಗೆ ಬಳಸಲಾಗುತ್ತಿಲ್ಲ. ಪ್ರಮುಖವಾಗಿ ಕಲ್ಲಿದ್ದಲು ಆಧಾರಿತ ಥರ್ಮಲ್ ವಿದ್ಯುತ್ ಉತ್ಪಾದನಾ ಘಟಕಗಳಿಂದ ಪೂರೈಕೆಯಾಗುತ್ತಿದ್ದು ಇದರಲ್ಲಿ ಕಲ್ಲಿದ್ದಲು ಪೂರೈಕೆಯ ಸಮಸ್ಯೆಗಳಿಂದ ಭಾರಿ ವ್ಯತ್ಯಯ ಉಂಟಾಗಿದೆ.



ಕಲ್ಲಿದ್ದಲು ಪೂರೈಕೆಯಲ್ಲಿ 6 ಲಕ್ಷ ಮೆಟ್ರಿಕ್ ಟನ್ ಕೊರತೆಯುಂಟಾಗಿದೆ. ಪ್ರತಿ ದಿನ 18–20 ಮೆಟ್ರಿಕ್ ಟನ್ ಕಲ್ಲಿದ್ದಲು ಬೇಕಾಗಿದ್ದು 12 ಮೆಟ್ರಿಕ್ ಟನ್ ಮಾತ್ರ ಲಭ್ಯವಾಗುತ್ತಿದೆ. ಆದ್ದರಿಂದ 11 ಥರ್ಮಲ್ ಘಟಕಗಳ ಪೈಕಿ 6ರಲ್ಲಿ ಉತ್ಪಾದನೆ ಸ್ಥಗಿತಗೊಳಿಸಲಾಗಿದೆ. ಇದು ಸಮಸ್ಯೆಯ ಮೂಲವೆಂದು ಹೇಳಲಾಗಿದೆ. ಕಲ್ಲಿದ್ದಲು ಪೂರೈಕೆಯಲ್ಲಿ ವ್ಯತ್ಯಯ ಕರ್ನಾಟಕವನ್ನು ಮಾತ್ರವಲ್ಲ, ದೇಶದ ಹೆಚ್ಚಿನ ಥರ್ಮಲ್ ಘಟಕಗಳನ್ನು ಕಾಡುತ್ತಿದೆ. ಗಣಿಗಳ ಹಂಚಿಕೆಯಲ್ಲಿ ವಿಳಂಬ, ಗಣಿಗಾರಿಕೆ ಎದುರಾಗಿರುವ ನಾನಾ ಸವಾಲುಗಳು, ತಿತ್ಲಿ ಚಂಡಮಾರುತದಿಂದ ರೈಲು ಸಾಗಾಣಿಕೆಯಲ್ಲಿ ಏರುಪೇರು – ಹೀಗೆ ಹಲವು ಕಾರಣಗಳಿಂದ ಕಲ್ಲಿದ್ದಲು ಪೂರೈಕೆಯಲ್ಲಿ ಏರು ಪೇರು ಆಗಿದೆ. ಕಲ್ಲಿದ್ದಲು ಗಣಿಯ ಹತ್ತಿರವೇ ಇರುವ ಘಟಕಗಳನ್ನು ಬಿಟ್ಟರೆ ದೇಶದ ಹೆಚ್ಚಿನ ಥರ್ಮಲ್ ಘಟಕಗಳಲ್ಲಿ ಕಲ್ಲಿದ್ದಲು ಸ್ಟಾಕ್ 1–2ದಿನಗಳ ಅಗತ್ಯಕ್ಕೇ ಸೀಮಿತಗೊಂಡಿದೆ. ಇದು ದೇಶದ ಹಲವು ಕಡೆ ಥರ್ಮಲ್ ಘಟಕಗಳ ವಿದ್ಯುತ್ ಉತ್ಪಾದನೆಯ ಘಟಕಕ್ಕೆ ಹೊಡೆತ ಕೊಟ್ಟಿದ್ದು ಕೇಂದ್ರ ಗ್ರಿಡ್ ನಿಂದ ರಾಜ್ಯಕ್ಕೂ ಬರುವ ವಿದ್ಯುತ್ ಪೂರೈಕೆಗೂ ಸಂಚಕಾರ ತಂದಿದೆ.

ಇವೆಲ್ಲಾ ಸೇರಿ ಬಿಕ್ಕಟ್ಟಿನಂತಹ ಪರಿಸ್ಥಿತಿ ಸೃಷ್ಟಿಸಿದ್ದು, ರಾಜ್ಯ ಸರಕಾರ ಕಲ್ಲಿದ್ದಲು ಪೂರೈಕೆ, ಸಾಗಾಣಿಕೆ ಮತ್ತು ಕೇಂದ್ರ ಗ್ರಿಡ್ ನಿಂದ ವ್ಯತ್ಯಯ ಸರಿ ಪಡಿಸುವಂತೆ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಿದ್ದಲ್ಲದೆ, ಹಲವು ಇಲಾಖೆಗಳ ಜತೆ ರಾಜ್ಯ ಸರಕಾರ ಮತ್ತು ಕೆಪಿಸಿಟಿಎಲ್ ಅಧಿಕಾರಿಗಳು ಸತತ ಸಂಪರ್ಕದಲ್ಲಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಜನವರಿಯಲ್ಲಿ 5 ಲಕ್ಷ ಟನ್ ಕಲ್ಲಿದ್ದಲು ಆಮದು ಮಾಡಿಕೊಳ್ಳಲು ಅಲ್ಪಾವಧಿ ಟೆಂಡರ್ ಕರೆಯಲು ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿ) ಮಂಡಳಿ ಸಭೆಯಲ್ಲಿ ನಿರ್ಧರಿಸಲಾಗಿದೆ, ಎಂದೂ ಅವರು ಹೇಳಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಬೇಸಗೆ ತಿಂಗಳುಗಳಲ್ಲಿ ವಿದ್ಯುತ್ ಪೂರೈಕೆಯ ಸಮಸ್ಯೆ ತೀವ್ರ ಬಿಕ್ಕಟ್ಟು ಆಗುವವರೆಗೆ ಕಾದು ಖಾಸಗಿ ವಿದ್ಯುತ್ ಉತ್ಪಾದಕರಿಂದ ದುಬಾರಿ ಬೆಲೆಯಲ್ಲಿ ತುರ್ತು ಖರೀದಿ ಭ್ರಷ್ಟಾಚಾರದ ಹೊಸ ತಂತ್ರವಾಗಿ ಬಿಟ್ಟಿತ್ತು. ಈ ಹಿನ್ನೆಲೆಯಲ್ಲಿ ವಿದ್ಯುತ್ ಖರೀದಿ ಮಾಡುವುದಿಲ್ಲ ಮತ್ತು ಲೋಡ್ ಶೆಡ್ಡಿಂಗ್ ಮಾಡುವುದಿಲ್ಲವೆಂದು ಖಡಾಖಂಡಿತವಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಲೋಡ್ ಶೆಡ್ಡಿಂಗ್ ಗೆ ಸಹ ಬೇಕೋ ಬೇಡವೋ ಚುನಾವಣಾ ರಾಜಕೀಯದ ಬಣ್ಣವೂ ಬಂದು ಬಿಟ್ಟಿದೆ. ಉಪ ಚುನಾವಣಾ ಪ್ರಚಾರ ತಾರಕಕ್ಕೇ ಏರಿದ್ದು, 'ಕತ್ತಲ ದೀಪಾವಳಿ ಮೈತ್ರಿ ಸರಕಾರದ ಉಡುಗೊರೆ' ಇತ್ಯಾದಿ ಮಾತುಗಳು ಕೇಳಿ ಬಂದಿವೆ. ವಿದ್ಯುತ್ ಸಮಸ್ಯೆಯನ್ನು ಉಪ ಚುನಾವಣೆಯ ದಾಳವಾಗಿಸಬಾರದು. ಆದರೆ ಅದೇ ಸಮಯದಲ್ಲಿ ಲೋಡ್ ಶೆಡ್ಡಿಂಗ್ ಮಾಡುವುದಿಲ್ಲವೆಂದು ಹೇಳುತ್ತಾ, ಅನಧಿಕೃತವಾಗಿ ಅದನ್ನು ಮಾಡುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಇಂದಿನ ವಿದ್ಯುತ್ ಬೇಡಿಕೆ–ಪೂರೈಕೆ ಗಳ ನಡುವಿನ ಅಂತರ, ಅದಕ್ಕೆ ಕಾರಣ ಪರಿಹಾರಗಳ ಬಗ್ಗೆ ಮೈತ್ರಿ ಸರಕಾರ ಪ್ರಾಮಾಣಿಕವಾಗಿ ಪಾರದರ್ಶಕವಾಗಿ ಜನತೆಗೆ ತಿಳಿಸಬೇಕು. ಕೇಂದ್ರದಿಂದ ಕಲ್ಲಿದ್ದಲು ಪೂರೈಕೆ ಮುಖ್ಯ ಕಾರಣವಾದರೆ ಮತ್ತು ಅದು ಉಪಚುನಾವಣೆಯ ಸಂದರ್ಭದಲ್ಲಿ ರಾಜಕೀಯ ದುರುದ್ದೇಶಪೂರಿತವೂ ಆಗಿದ್ದರೆ ಅದನ್ನು ಜನರ ಮುಂದೆ ಬಯಲಿಗೆಳೆಯಬೇಕು. ಬಿಕ್ಕಟ್ಟನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಇವೆಲ್ಲಾ ಈಡೇರುತ್ತವೆಯೇ ಅಥವಾ ಬಿಜೆಪಿ ಇದನ್ನೇ ಚುನಾವಣಾ ದಾಳ ಮಾಡುತ್ತೋ ಅಥವಾ ಉಪಚುನಾವಣೆ ನಡೆಯುವವ ವರೆಗೆ ಸುಮ್ಮನಿದ್ದು, ಆ ನಂತರ ಸರಕಾರ ಲೋಡ್ ಶೆಡ್ಡಿಂಗ್ ಅಥವಾ ವಿದ್ಯುತ್ ಖರೀದಿ ಮಾಡುತ್ತೋ ಎಂದು ಕಾದು ನೋಡಬೇಕಾಗಿದೆ.

ಉಪಚುನಾವಣೆಗಳಲ್ಲಿ ಬಿಜೆಪಿಯನ್ನು ಸೋಲಿಸಿ: ಸಿಪಿಐ(ಎಂ)

ರಾಜ್ಯದಾದ್ಯಂತ ನವೆಂಬರ್ 3, 2018 ರಂದು ನಡೆಯುತ್ತಿರುವ 3 ಪಾರ್ಲಿಮೆಂಟ್ ಹಾಗೂ 2 ವಿಧಾನ ಸಭಾ ಉಪ ಚುನಾವಣೆಗಳಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ಲೂಟಿಗೆ ನೆರವಾಗುತ್ತಿರುವ ಮತ್ತು ದುಡಿಯುವ ಜನತೆಯ ವಿರೋಧಿಯಾದ ಹಾಗೂ ಹಿಂದೂ ಮತಾಂಧತೆಗೆ ಕುಮ್ಮಕ್ಕು ನೀಡುತ್ತಾ ಜನತೆಯನ್ನು ಒಡೆದಾಳುವ ಭ್ರಷ್ಟ ಬಿಜೆಪಿಯನ್ನು ಸೋಲಿಸುವಂತೆ ರಾಜ್ಯದ ಮತದಾರರಿಗೆ ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ. ಆಯಾ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಸೋಲಿಸಬಲ್ಲ ಅಭ್ಯರ್ಥಿಗಳಿಗೆ ಮತ್ತು ಪಕ್ಷಗಳಿಗೆ ಮತದಾರರು ಮತ ನೀಡಲು ಮನವಿ ಮಾಡಿದೆ. ಇದಕ್ಕಾಗಿ ಆಯಾ ಕ್ಷೇತ್ರಗಳ ಸಿಪಿಐ(ಎಂ) ಪಕ್ಷದ ಘಟಕಗಳು ಸ್ವತಂತ್ರವಾಗಿ, ವ್ಯಾಪಕವಾದ ಪ್ರಚಾರದಲ್ಲಿ ತೊಡಗಲು ರಾಜ್ಯ ಸಮಿತಿ ಕರೆ ನೀಡಿದೆ.

ಬಿಜೆಪಿ ಕಳೆದ ಲೋಕಸಭಾ ಚುನಾವಣೆಯಲ್ಲಿ ದೇಶದ ಜನತೆಗೆ ನೀಡಲಾಗಿದ್ದ ಒಂದೇ ಒಂದು ಭರವಸೆಯನ್ನು ಅದು ಈಡೇರಿಸಲಿಲ್ಲವೆಂದು ಅದು ಟೀಕಿಸಿದೆ. ಎಲ್ಲರಿಗೂ ಶುಭ ದಿನಗಳನ್ನು ತರುವುದಾಗಿ ಹೇಳಿದ್ದ ಬಿಜೆಪಿ ದೇಶದ ಎಲ್ಲಾ ದುಡಿಯುವ ಜನತೆಗೆ ಅತ್ಯಂತ ಸಂಕಷ್ಟದ ದಿನಗಳನ್ನು ತಂದಿದೆ.

ರೈತರ ಆತ್ಮಹತ್ಯೆಗಳನ್ನು ತಡೆಯಲು ಅವರ ಸಾಲ ಮನ್ನಾ ಮಾಡುವುದಾಗಿ ಮತ್ತು ಅವರು ಸಾಲಗಾರರಾಗದಂತೆ ತಡೆಯಲು ಡಾ. ಎಂ.ಎಸ್ ಸ್ವಾಮಿನಾಥನ್ ರವರ ಕೃಷಿ ಆಯೋಗದ ಸಲಹೆಯಂತೆ ಕೃಷಿ ಉತ್ಪನ್ನಗಳ ವೆಚ್ಚದ ಒಂದೂವರೆ ಪಟ್ಟು ಬೆಲೆ ನೀಡುವುದಾಗಿ ಹೇಳಿದ್ದ ಬಿಜೆಪಿ, ಅಧಿಕಾರಕ್ಕೆ ಬಂದ ನಂತರ ಹಾಗೆ ನೀಡಲಾಗದೆಂದು ಸುಪ್ರಿಂ ಕೋರ್ಟ ಮುಂದೆ ಪ್ರಮಾಣ ವಚನ ಸಲ್ಲಿಸಿ ರೈತರ ಬೆನ್ನಿಗೆ ಚೂರಿ ಹಾಕಿದೆಯೆಂದು ಬಲವಾಗಿ ಖಂಡಿಸಿದರು. ಪರಿಣಾಮವಾಗಿ, ದೇಶದಾದ್ಯಂತ ಪ್ರತಿ ದಿನ ಸಾಲಬಾಧಿತ ರೈತರ ಆತ್ಮಹತ್ಯೆಯೆಂಬ ಹೆಸರಿನ ಈ ಕಗ್ಗೊಲೆಗಳು ಮುಂದುವರೆದಿವೆ.

ಈ ಅವಧಿಯಲ್ಲಿ ಕೇಂದ್ರ ಸರಕಾರದ ಮೂಲಕ ಜನತೆಯಿಂದ ಒಂದು ಕೋಟಿ ಕೋಟಿಯಷ್ಟು ತೆರಿಗೆ ಸಂಗ್ರಹಿಸಿದ ಬಿಜೆಪಿ ಅದನ್ನು ಕಾರ್ಮಿಕರ ಕನಿಷ್ಟ ವೇತನ ಹೆಚ್ಚಳಕ್ಕೆ ಹಾಗೂ ರೈತರ– ಕೂಲಿಕಾರರ ಕಲ್ಯಾಣಕ್ಕೆ ಬಳಸುವ ಬದಲು ಬಹುರಾಷ್ಟ್ರೀಯ ಕಂಪನಿಗಳ ಲಕ್ಷಾಂತರ ಕೋಟಿ ರೂ ತೆರಿಗೆ ಬಾಕಿ ಮನ್ನಾ ಮಾಡಲು ಹಾಗು ಈ ಕಂಪನಿಗಳ ಬ್ಯಾಂಕ್ ಸಾಲ ಮನ್ನಾ ಮಾಡಲು ದುರುಪಯೋಗ ಪಡಿಸಿ ಕೊಂಡಿದೆ. ಅಲ್ಲದೇ, ಅಗತ್ಯ ವಸ್ತುಗಳ ಬೆಲೆ ಏರಿಕೆ ಮೂಲಕ ಕಂಪನಿಗಳು ಜನತೆಯನ್ನು ಲೂಟಿ ಮಾಡಲು ಬಿಡಲಾಗಿದೆ ಎಂದರು.

ತಾನು ಭ್ರಷ್ಟಾಚಾರ ಮಾಡುವುದಿಲ್ಲ. ಮಾತ್ರವಲ್ಲ, ಭ್ರಷ್ಟಾಚಾರ ನಡೆಯಲು ಬಿಡುವುದಿಲ್ಲ ಎಂದು ಹೇಳಿದ್ದ ಬಿಜೆಪಿ ಸ್ವತಹ ಈಗ ಅದರ ಪ್ರಧಾನ ಮಂತ್ರಿಗಳೇ ಸುಮಾರು 40,000 ಕೋಟಿ ಮೌಲ್ಯದ ಯುದ್ಧ ವಿಮಾನ ಖರೀದಿಯ ರಫೇಲ್ ಹಗರಣದ ಆರೋಪ ಹೊತ್ತಿದ್ದಾರೆ. ಲಕ್ಷಾಂತರ ಕೋಟಿ ರೂ ಗಣಿ ಲೂಟಿಯಲ್ಲಿ ಪಾಲ್ಗೊಂಡ ಬಿಜೆಪಿ ಮುಖಂಡರು ಸುಪ್ರಿಂ ಕೋರ್ಟ ಪರವಾನಿಗೆ ಇಲ್ಲದೇ ಸ್ವಂತ ಊರಿಗೆ ತೆರಳಲಾಗದ ದುಸ್ಥಿತಿಯಲ್ಲಿದ್ದಾರೆ.

ರಾಜ್ಯದಾದ್ಯಂತ ಹತ್ತಾರು ಸಾವಿರ ಎಕರೆಗಳಷ್ಟು ಜಮೀನನ್ನು ಬಲವಂತವಾಗಿ ಹಾಗೂ ಅತ್ಯಂತ ಕಳಪೆ ಬೆಲೆಗೆ ಸ್ವಾಧೀನ ಮಾಡಿ, ಬಹುರಾಷ್ಟ್ರೀಯ ಸಂಸ್ಥೆಗಳಾದ ಮಿತ್ತಲ್, ಜಿಂದಾಲ್, ಬ್ರಾಹ್ಮಿಣಿ ಮುಂತಾದ ಕಂಪೆನಿಗಳ ಕೊಳ್ಳೆಗೆ ನೆರವಾಗಿ ಹತ್ತಾರು ಸಾವಿರ ರೈತ ಕುಟುಂಬಗಳನ್ನು ವಂಚಿಸಿದ್ದು ಇದೀಗ ರಾಜ್ಯದ ಬಿಜೆಪಿ ಆಡಳಿತದ ಇತಿಹಾಸವಾಗಿದೆ.

ಅದೇ ರೀತಿ, ದೇಶದಾದ್ಯಂತ ದಲಿತರು ಮತ್ತು ಅಲ್ಪಸಂಖ್ಯಾತರು ಮತ್ತು ಪ್ರಗತಿಪರರ ಮೇಲೆ ಹಿಂದೂ ಮತಾಂಧ ಕ್ರಿಮಿನಲ್‌ಗಳು, ಗುಂಡಾಗಳು, ಕೊಲೆಗಡುಕರು, ನಗ್ನವಾಗಿ ದಾಳಿನಡೆಸಲು ಕೊಲೆಗೈಯ್ಯಲು ಬಿಡಲಾಗಿದೆ.

ಗೋಸಂರಕ್ಷಣೆಯ ಹೆಸರಿನಲ್ಲಿ ದೇಶದಾದ್ಯಂತ ಇದುವರೆಗೆ 35 ಜನ ಅಲ್ಪಸಂಖ್ಯಾತ ಹೈನುಗಾರರನ್ನು ಮತ್ತು ದಲಿತ ಚಮ್ಮಾರರನ್ನು ಕೊಲೆ ಮಾಡಲಾಗಿದೆ.

ಜನತೆಯ ದುಡಿಯುವ, ಬದುಕುವ ಹಾಗೂ ಅಹಾರದ ಹಕ್ಕು, ವೈವಾಹಿಕ ಹಕ್ಕು, ಮತಾಂತರದ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ ದ ಮುಂತಾದ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ದಾಳಿ ಮಾಡಲು ಬಿಡಲಾಗಿದೆ. ಮಾತ್ರವಲ್ಲಾ, ಅವುಗಳನ್ನು ಸಮರ್ಥಿಸುವ ಉದ್ಧಟತನವನ್ನು ತೋರಲಾಗಿದೆ.

ಆದ್ದರಿಂದ, ಇಂತಹ ಪ್ರಜಾಪ್ರಭುತ್ವ ವಿರೋಧಿ ಬಿಜೆಪಿಯನ್ನು ಹೀನಾಯವಾಗಿ ಸೋಲಿಸಿ ಅದಕ್ಕೆ ಪಾಠ ಕಲಿಸುವುದು ಅಗತ್ಯವಾಗಿದೆಯೆಂದು ರಾಜ್ಯ ಸಮಿತಿ ಮತದಾರರಿಗೆ ಕರೆ ನೀಡಿದೆ.

ಸಂಘಟಿತ ಚಳುವಳಿಯಲ್ಲಿ ತೊಡಗಲು ಕರೆ

ಈ ಉಪ ಚುನಾವಣೆಯಲ್ಲಿ ಮಾತ್ರವಲ್ಲ, ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಯೂ ಬಿಜೆಪಿಯನ್ನು ಸೋಲಿಸಬೇಕಾಗಿದೆ. ಅದೇ ರೀತಿ, ಈ ಚುನಾಣೆಗಳಲ್ಲಿ ಯಾರೇ ಗೆದ್ದರೂ ಮುಂದಿನ ದಿನಗಳಲ್ಲಿ ಜನ ವಿರೋಧಿ ಜಾಗತೀಕರಣದ ಮತ್ತು ಜನತೆಯನ್ನು ಒಡೆದಾಳುವ ನೀತಿಗಳೆ ಮುಂದುವರೆಯಲಿವೆ ಎಂಬುದನ್ನು ಮತದಾರರು ಗಮನಿಸಬೇಕಾಗಿದೆ.

ಜನರ ಪರವಾದ ಪರ್ಯಾಯ ಆರ್ಥಿಕ ಮತ್ತು ಸೌಹಾರ್ದ ನೀತಿಗಳನ್ನು ಜಾರಿಗೆ ತರುವ ಎಡ ಮತ್ತು ಪ್ರಗತಿಪರ ರಾಜಕೀಯ ಪರ್ಯಾಯ ಇಲ್ಲದೇ ಇರುವುದರಿಂದ, ಎಲ್ಲ ದುಡಿಯುವ ಜನತೆ ವ್ಯಾಪಕವಾಗಿ ಸಂಘಟಿತರಾಗಿ, ಗಂಭೀರವಾಗಿ ಚಳುವಳಿಯಲ್ಲಿ ತೊಡಗಿಸಿಕೊಂಡು ತನ್ನನ್ನು ರಕ್ಷಿಸಿಕೊಳ್ಳಲು ಮುಂದಾಗುವುದು ಅನಿವಾರ್ಯವಾಗಿದೆ ಎಂದು ಸಿಪಿಐ(ಎಂ) ಪ್ರತಿಪಾದಿಸಿದೆಯಲ್ಲದೇ ಎಲ್ಲ ದುಡಿಯುವ ಜನತೆ ವ್ಯಾಪಕವಾಗಿ ಸಂಘಟಿತರಾಗಿ ಪರ್ಯಾಯ ಆರ್ಥಿಕ ನೀತಿಗಳಾಗಾಗಿ ಚಳುವಳಿಯಲ್ಲಿ ತೊಡಗಲು ಮತ್ತು ದೇಶದ ಸಮಗ್ರತೆ ಐಕ್ಯತೆ ಸೌಹಾರ್ದತೆ ಕಾಪಾಡಿಕೊಳ್ಳಲು ಮುಂದಾಗ ಬೇಕೆಂದಿದೆ. ಇಂತಹ ಹೋರಾಟ ನಿರತ ಜನತೆಯ ಜೊತೆ ಸದಾ ಇರುವುದಾಗಿ ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ. ●

ವಾಸುದೇವ ಉಚ್ಚಿಲ

ಕಡಲ ಕಡೆ



ಬೀಡಿ ಕಾರ್ಮಿಕರ ಮುಷ್ಕರ ಹಿಂತೆಗೆತ ಹಗಲು ರಾತ್ರಿ ಧರಣಿ ಮುಂದುವರಿಕೆ

ಬೀಡಿ ಮಾಲಕರು, ಕಾರ್ಮಿಕರು ಹಾಗೂ ಸರಕಾರದೊಂದಿಗೆ ಚರ್ಚಿಸಿ ಬಳಿಕ ಸರಕಾರ 1000 ಬೀಡಿಗಳಿಗೆ ಕನಿಷ್ಟ ರೂ.210/– ಕೂಲಿ ನಿಗದಿಗೊಳಿಸಿ ಹೊರಡಿಸಿದ ಆದೇಶವನ್ನು ಜಾರಿ ಮಾಡದೇ ಇರುವ ಬಗ್ಗೆ ಬೀಡಿ ಮಾಲಕರನ್ನು ರಾಜ್ಯದ ಸಿಐಟಿಯು ಮುಖಂಡರಾದ ವಿ.ಜೆ.ಕೆ.ನಾಯರ್ ಟೀಕಿಸಿದರು.

ಅವರು ಕನಿಷ್ಟ ಕೂಲಿ ಹಾಗೂ ಬಾಕಿ ಇರುವ ಹೆಚ್ಚುವರಿ ತುಟ್ಟಿಭತ್ತೆಯನ್ನು ನೀಡುವಂತೆ ಆಗ್ರಹಿಸಿ ಸಿಐಟಿಯು ಮತ್ತು ಎಐಟಿಯುಸಿ ಸಂಯೋಜಿತ ದ.ಕ.ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್‌ಗಳ ಜಂಟಿ ಆಶ್ರಯದಲ್ಲಿ ಮಂಗಳೂರು ಕದ್ರಿಯ ಭಾರತ್ ಬೀಡಿ ವರ್ಕ್ಸ್ ಕಚೇರಿ ಎದುರು ಆರಂಭವಾದ ಬೀಡಿ ಕಾರ್ಮಿಕರ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

2015 ಎಪ್ರಿಲ್ 1 ರಿಂದ ಬೀಡಿ ಕಾರ್ಮಿಕರಿಗೆ 1000 ಬೀಡಿಗಳಿಗೆ ಹೆಚ್ಚಿಸಿದ ರೂ.12.75 ತುಟ್ಟಿಭತ್ತೆಯನ್ನು ಕೂಡಾ ಬೀಡಿ ಮಾಲಕರು 3 ವರ್ಷಗಳಿಗೂ ಮೀರಿ ಬಾಕಿ ಇರಿಸಿಕೊಂಡಿರುವುದು ಖಂಡನೀಯ. ಬಡ ಬೀಡಿ ಕಾರ್ಮಿಕರಿಗೆ ಸಕಾಲದಲ್ಲಿ ಅವರ ದುಡಿಮೆಯ ಕನಿಷ್ಟ ಕೂಲಿ ಹಾಗೂ ಹೆಚ್ಚುವರಿ ತುಟ್ಟಿಭತ್ತೆಯನ್ನು ನೀಡದೆ ವಂಚಿಸಿರುವುದು ಹಾಗೂ ಪಾವತಿ ವಿಳಂಬ ಮಾಡುವ ದೃಷ್ಟಿಯಿಂದ ಸರಕಾರೀ ಆದೇಶದ ವಿರುದ್ಧ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವ ಬೀಡಿ ಮಾಲಕರ ಪಲಾಯನವಾದೀ ಕ್ರಮ ಅತ್ಯಂತ ಅಮಾನವೀಯ ಎಂದು ವಿ.ಜೆ. ಕೆ.ನಾಯರ್ ಖಂಡಿಸಿದರು.

ಬೀಡಿ ಕಾರ್ಮಿಕರ ನ್ಯಾಯಬದ್ಧ ಬೇಡಿಕೆಗಳನ್ನು ವಿಳಂಬ ಮಾಡದೆ ಪಾವತಿಸುವಂತೆ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಎಐಟಿಯುಸಿ ಮುಖಂಡ ವಿಜಯ ಭಾಸ್ಕರ್ ನುಡಿದರು.

ಈ ಪ್ರತಿಭಟನೆಯೊಂದಿಗೆ ದಕ.ಜಿಲ್ಲೆಯಾದ್ಯಂತ ಬೀಡಿ ಕಾರ್ಮಿಕರು ಬೀಡಿ ಕಟ್ಟುವ ದುಡಿಮೆಯನ್ನು ಸ್ಥಗಿತಗೊಳಿಸಿರುತ್ತಾರೆ. ಪ್ರತಿಭಟನೆಯಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಬೀಡಿ ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿರುತ್ತಾರೆ.

ಬೀಡಿ ಮಾಲಕರು ಸರಕಾರದ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಅನಿದಿಷ್ಟಾವಧಿ ಮುಷ್ಕರವನ್ನು ಹಿಂತೆಗೆಯುವುದಾಗಿ ಘೋಷಿಸಿದ ಪ್ರತಿಭಟನಾ ಸಂಘಟಕರು, ಆದರೆ ಸದ್ರಿ ಧರಣಿ ಸತ್ಯಾಗ್ರಹದ ಸ್ಥಳದಲ್ಲಿ ಸೀಮಿತ ಸಂಖ್ಯೆಯ ಕಾರ್ಮಿಕರು ಸರದಿಯಲ್ಲಿ ಧರಣಿ ಸತ್ಯಾಗ್ರಹ ಮುಂದುವರಿಸುವುದಾಗಿ ತಿಳಿಸಿದರು.

ಸಿಐಟಿಯು ಸಂಘಟನೆಯ ಜಿಲ್ಲಾ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಯು.ಬಿ.ಲೋಕಯ್ಯ, ಎಐಟಿಯುಸಿ ಸಂಘಟನೆಯ ಸೀತಾರಾಮ ಬೇರಿಂಜ, ಕರುಣಾಕರ ಮತ್ತಿತರ ಮುಖಂಡರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಪ್ರತಿಭಟನೆಯಲ್ಲಿ ಸಿಐಟಿಯು ಬೀಡಿ ಕಾರ್ಮಿಕ ಮುಖಂಡರಾದ ರಮಣಿ ಮೂಡಬಿದರೆ, ಸದಾಶಿವ ದಾಸ್, ಕೃಷ್ಣಪ್ಪ ಸಾಲಿಯಾನ್, ಜಯಂತ ನಾಯ್ಕ್, ಜಯಂತಿ ಬಿ.ಶೆಟ್ಟಿ, ಪದ್ಮಾವತಿ ಶೆಟ್ಟಿ, ಭಾರತಿ ಬೋಳಾರ್, ಸಂಜೀವ ಬಂಗೇರ, ಶಿವಕುಮಾರ್, ರಾಮಣ್ಣ ವಿಟ್ಲ, ರಾಬರ್ಟ್ ಡಿಸೋಜ, ರೋಹಿಣಿ, ನೋಣಯ್ಯ ಗೌಡ, ಲೋಲಾಕ್ಷಿ, ಎಐಟಿಯುಸಿಯ ವಿ.ಕುಕ್ಯಾನ್, ಸುರೇಶ್, ಸರಸ್ವತಿ, ಶಿವಪ್ಪ, ಭಾಸ್ಕರ, ಸುಲೋಚನಾ, ಚಿತ್ರಾಕ್ಷಿ, ಹರ್ಷಿತ, ರಾಮಣ್ಣ ಕಡಬ ಮುಂತಾದವರು ಭಾಗವಹಿಸಿದ್ದರು.

ಮಂಗಳೂರಿನ ಕದ್ರಿ ಭಾರತ್ ಬೀಡಿ ವರ್ಕ್ಸ್ ಕಚೇರಿಯ ಮುಂದೆ ನಡೆಯುತ್ತಿರುವ ಧರಣಿ ಮುಷ್ಕರ ಮೂರನೇ ದಿನಕ್ಕೂ ಅಹೋರಾತ್ರಿ ಧರಣಿ ಸತ್ಯಾಗ್ರಹವಾಗಿ ಮುಂದುವರಿದಿದ್ದು, ರಾತ್ರಿ ಮಹಿಳೆಯರನ್ನೊಳಗೊಂಡ ಮೂವತ್ತರಷ್ಟು ಕಾರ್ಮಿಕರು ಉಪಸ್ಥಿತರಿದ್ದರು. ಹಗಲು ವೇಳೆ ಧರಣಿ ನಿರತರ ಸಂಖ್ಯೆ 150 ರಷ್ಟು ಆಗುತ್ತಿದ್ದು, ಸಿಐಟಿಯು ಹಾಗೂ ಎಐಟಿಯುಸಿಯ ಬೀಡಿ ಕಾರ್ಮಿಕ ಮುಖಂಡರು ಅವರನ್ನು ಉದ್ದೇಶಿಸಿ ಮಾತನಾಡಿದ್ದಾರೆ. •

ಸುರತ್ಕಲ್ ಟೋಲ್‌ಗೇಟ್ ವಿರುದ್ಧದ ಧರಣಿ ಮುಂದುವರಿಕೆ:



ಮಂಗಳೂರು ಮುಂಬಯಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುರತ್ಕಲ್‌ನಲ್ಲಿ ಗುತ್ತಿಗೆದಾರರು ನಿರ್ಮಿಸಿರುವ ಟೋಲ್‌ಗೇಟ್ ಅಗತ್ಯವಿರಲಿಲ್ಲ ಎಂಬುದನ್ನು ಒಪ್ಪಿಕೊಂಡು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು, ಟೋಲ್‌ಗೇಟ್ ಗುತ್ತಿಗೆ ಹರಾಜು ನಡೆಸಲು ಟೆಂಡರು ಪ್ರಕ್ರಿಯೆಯನ್ನು ಆರಂಭಿಸಿರುವುದನ್ನು ವಿರೋಧಿಸಿ ಸುರತ್ಕಲ್ ಟೋಲ್‌ಗೇಟ್ ವಿರೋಧಿ ನಾಗರಿಕ ಹೋರಾಟ ಸಮಿತಿಯು ಅಕ್ಟೋಬರ್ 22 ರಂದು ಅನಿರ್ದಿಷ್ಟ ಧರಣಿಯನ್ನು ಹಮ್ಮಿಕೊಂಡಿದೆ. ಪ್ರಾಧಿಕಾರವು ಟೆಂಡರ್ ಪ್ರಕ್ರಿಯೆಯನ್ನು ಹಿಂತೆಗೆದು, ಟೋಲ್‌ಗೇಟನ್ನು ರದ್ದುಗೊಳಿಸುವವರೆಗೆ ಧರಣಿ ಸತ್ಯಾಗ್ರಹ ಮುಂದುವರಿಯಲಿದೆ ಎಂಬುದಾಗಿ ಧರಣಿ ನಿರತರು ಘೋಷಿಸಿದ್ದಾರೆ.

ಅಕ್ಟೋಬರ್ 30ಕ್ಕೆ ಸುರತ್ಕಲ್ ಟೋಲ್ ಸಂಗ್ರಹದ ಗುತ್ತಿಗೆ ಅವಧಿ ಮುಕ್ತಾಯಗೊಳ್ಳುತ್ತಿದ್ದು, ಆ ಬಳಿಕ ಗುತ್ತಿಗೆಯನ್ನು ನವೀಕರಿಸವುದಿಲ್ಲ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಭೆಯಲ್ಲಿ ಸಂಸದ ನಳಿನ್ ಕುಮಾರ್ ಕಟೀಲ್ ಭರವಸೆ ನೀಡಿದ್ದರು. ಹಾಗಿದ್ದರೂ ಹೆದ್ದಾರಿ ಪ್ರಾಧಿಕಾರ ಅಕ್ರಮ ಟೋಲ್‌ಗೇಟ್ ಮುಂದುವರಿಸಲು ಟೆಂಡರ್ ಪ್ರಕ್ರಿಯೆ ಆರಂಭಿಸಿರುವುದು ಖಂಡನೀಯ ಎಂದು ಪ್ರತಿಭಟನಾಕಾರರು ಟೀಕಿಸಿದರು.

ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿಯು ಮೂರನೇ ದಿನಕ್ಕೂ ಮುಂದುವರಿದಿದ್ದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಗುತ್ತಿಗೆದಾರರಿಂದ ಟೋಲ್ ಸಂಗ್ರಹವನ್ನು ನಿಲ್ಲಿಸುವವರೆಗೂ ಧರಣಿ ಮುಂದುವರಿಸಲಿದೆ. ಮುನೀರ್ ಕಾಟಿಪಳ್ಳ ಅವರು ಟೋಲ್‌ಗೇಟ್ ವಿರೋಧಿ ನಾಗರಿಕ ಹೋರಾಟ ಸಮಿತಿಯ ಸಂಚಾಲಕರಾಗಿದ್ದಾರೆ.

ಧರಣಿ ಸತ್ಯಾಗ್ರಹದಲ್ಲಿ ಮಾಜಿ ಶಾಸಕ ವಿಜಯ ಕುಮಾರ್ ಶೆಟ್ಟಿ, ಮಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ದಯಾನಂದ ಶೆಟ್ಟಿ, ರೇವತಿ ಪುತ್ರನ್, ಪುರುಷೋತ್ತಮ ಚಿತ್ರಾಪುರ, ಜೆಡಿಎಸ್ ಮುಖಂಡರಾದ ಮಹಮ್ಮದ್ ಕುಂಞ, ವಸಂತ ಪೂಜಾರಿ, ಮುನೀರ್ ಮುಕ್ಕಚ್ಚೇರಿ, ಕಾಂಗ್ರೆಸ್ ಮುಖಂಡರಾದ ಫಾರೂಕ್ ಉಳ್ಳಾಲ್, ಸದಾಶಿವ ಶೆಟ್ಟಿ, ದಸಂಸ ಮುಖಂಡರಾದ ರಘು ಎಕ್ಕಾರ್, ಸಾಮಾಜಿಕ ಕಾರ್ಯಕರ್ತರಾದ ಎಂ.ಜಿ.ಹೆಗ್ಡೆ, ಡಿವೈಎಫ್ಐನ ಬಿ.ಕೆ.ಇಮ್ತಿಯಾಜ್, ಸಂತೋಷ್ ಬಜಾಲ್, ಕರ್ನಾಟಕ ಪ್ರಾಂತ ರೈತ ಸಂಘದ ಯಾದವ ಶೆಟ್ಟಿ, ಸಿಪಿಐ(ಎಂ)ನ ಸುನಿಲ್ ಕುಮಾರ್ ಬಜಾಲ್ ಹಾಗೂ ವಿವಿಧ ಸಾಮಾಜಿಕ ಸಂಘಟನೆಗಳ ಮುಖಂಡರುಗಳು ಈ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. •

ತಂಬಾಕು ಉತ್ಪನ್ನಗಳ ಮಾರಾಟಕ್ಕೆ ಪ್ರತ್ಯೇಕ ಪರವಾನಿಗೆ ಪ್ರಸ್ತಾವಕ್ಕೆ ಪ್ರತಿಭಟನೆ

ಕೋಟ್ಪಾ ಕಾಯಿದೆಯ ಜಾರಿ ಮೂಲಕ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಂಪೂರ್ಣ ಧೂಮಪಾನ ನಿಷೇಧ ಜಾರಿಗೊಳಿಸಲು ಮುಂದಾಗಿದೆ. ಆದರೆ ಇದರಿಂದ ಲಕ್ಷಾಂತರ ಮಂದಿ ಬೀಡಿ ಉದ್ಯಮವನ್ನು ನಂಬಿರುವ ಕಾರ್ಮಿಕರು ಹಾಗೂ ಚಿಲ್ಲರೆ ಮಾರಾಟಗಾರರ ಬದುಕಿನ ಮೇಲೆ ಬಲವಾದ ಪ್ರಹಾರ ನಡೆದಂತಾಗಿದೆ ಎಂಬುದಾಗಿ ಸಿಐಟಿಯು ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿ ಹೇಳಿದರು.

ವಿಶೇಷ ಸಿಗರೇಟು–ತಂಬಾಕು ಉತ್ಪನ್ನಗಳ ಮಾರಾಟಕ್ಕೆ ಪ್ರತ್ಯೇಕ ಪರವಾನಿಗೆ ಪಡೆಯಬೇಕೆಂಬ ಸರಕಾರದ ಪ್ರಸ್ತಾವಿಕ ತೀರ್ಮಾನವನ್ನು ವಿರೋಧಿಸಿ ದ.ಕ.ಜಿಲ್ಲಾ ಚಿಲ್ಲರೆ ಬೀಡಿ ಸಿಗರೇಟು ಮಾರಾಟಗಾರರ ಸಂಘವು ಅಕ್ಟೋಬರ್ 22 ರಂದು ದ.ಕ. ಜಿಲ್ಲಾಧಿಕಾರಿಗಳ ಕಚೇರಿ ಎದುರು ನಡೆಸಿದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಅವರು ಮಾತನಾಡಿದರು.



ಸಿಗರೇಟ್ ಕಂಪೆನಿಗಳ ವಿರುದ್ಧ ಯಾವುದೇ ಕ್ರಮಕೈಗೊಳ್ಳದೆ, ಬಡಪಾಯಿ ಗೂಡಂಗಡಿದಾರರ ವಿರುದ್ಧ ರಾಜ್ಯ ಸರಕಾರ ಕೈಗೊಳ್ಳುತ್ತಿರುವ ದಬ್ಬಾಳಿಕೆಯನ್ನು, ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ಹಾಗೂ ಸಂಘದ ಅಧ್ಯಕ್ಷ ಸುನಿಲ್ ಕುಮಾರ್ ಬಜಾಲ್ ಖಂಡಿಸಿದರು.

ಪ್ರತಿಭಟನಾ ಪ್ರದರ್ಶನಕ್ಕೂ ಮೊದಲು 300ಕ್ಕೂ ಮೀರಿದ ಚಿಲ್ಲರೆ ಬೀಡಿ ಸಿಗರೇಟ್ ಮಾರಾಟಗಾರರು ಮಂಗಳೂರಿನ ಮಿನಿ ವಿಧಾನಸೌಧದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡ ಯೋಗೀಶ್ ಜಪ್ಪಿನಮೊಗರು ಹಾಗೂ ಸಂಘದ ಮುಖಂಡರು ಭಾಗವಹಿಸಿದ್ದರು. •






ಬಾಗೇಪಲ್ಲಿ ಆಡಳಿತದ ವೈಫಲ್ಯಗಳ ವಿರುದ್ಧ ಪ್ರತಿಭಟನೆ

ಬಾಗೇಪಲ್ಲಿಯ ವಿವಿಧ ಅಭಿವೃದ್ಧಿ ಕ್ರಮಗಳ ಜಾರಿಯಲ್ಲಿ ತಾಲೂಕು ಆಡಳಿತದ ವೈಫಲ್ಯಗಳು ಮತ್ತು ಭ್ರಷ್ಟಾಚಾರದ ವಿರುದ್ಧ ಸಿಪಿಐ(ಎಂ) ತಾಲೂಕು ಘಟಕ ಅಕ್ಟೋಬರ್ 22ರಂದು ತಾಲೂಕು ಪಂಚಾಯಿತಿ ಕಚೇರಿಯ ಮುಂದೆ ಬೃಹತ್ ಪ್ರತಿಭಟನಾ ಧರಣಿ ಸಂಘಟಿಸಿತು. ಸುಂದರಯ್ಯ ಭವನದಿಂದ ಸಿಪಿಐ(ಎಂ) ಕಾರ್ಯಕರ್ತರು ಮತ್ತು ಸಾರ್ವಜನಿಕರು ದೊಡ್ಡ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ತಾಲೂಕು ಕಚೇರಿಗೆ ತೆರಳಿದರು. ಮೆರವಣಿಗೆಯ ನಾಯಕತ್ವವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯದರ್ಶಿ ಜಯರಾಮರೆಡ್ಡಿ, ತಾಲೂಕು ಕಾರ್ಯದರ್ಶಿ ಚೆನ್ನರಾಯಪ್ಪ, ಮುಂತಾದವರು ವಹಿಸಿದ್ದರು. ಪ್ರತಿಭಟನಾ ಧರಣಿಯಲ್ಲೂ ಅವರುಗಳು ಪ್ರಮುಖ ಹಕ್ಕೊತ್ತಾಯಗಳ ಬಗ್ಗೆ ವಿವರಿಸಿದರು.

ಆಶ್ರಯ ಯೋಜನೆಯಲ್ಲಿ ನಿರ್ಮಿಸಿರುವ ಎಲ್ಲಾ ಮನೆಗಳಿಗೆ ತಕ್ಷಣ ಬಾಕಿಯಿರುವ ಅನುದಾನ ಬಿಡುಗಡೆ ಮಾಡಬೇಕು, ಸ್ವಚ್ಛ ಭಾರತ ಮಿಷನ್ ನಡಿ ನಿರ್ಮಿಸಿರುವ ಶೌಚಾಲಯಗಳಿಗೆ ತಕ್ಷಣ ಸಹಾಯಧನ ನೀಡಬೇಕು, ನಿವೇಶನರಹಿತರಿಗೆ ಭೂಮಿ ಗುರುತಿಸಿ ಮೀಸಲಿಡಬೇಕು, ಗುರುತಿಸಿರುವ ಭೂಮಿಗೆ ಹಕ್ಕು ಪತ್ರಗಳ ವಿತರಣೆ ಆಗಬೇಕು, ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಪರಿಣಾಮಕಾರಿಯಾಗಿ ಜಾರಿ ಮಾಡಬೇಕು, ಕಳೆದ 5 ವರ್ಷಗಳಿಂದ ನಡೆದಿರುವ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನ ಹಾಗೂ ಟೆಂಡರ್ ಗಳಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ತನಿಖೆ ಆಗಬೇಕು – ಇವೇ ಮುಂತಾದ ಹಕ್ಕೊತ್ತಾಯಗಳ ಬಗ್ಗೆ ಒತ್ತು ಕೊಟ್ಟು ಅವರುಗಳು ಮಾತನಾಡಿದರು. ●

ರೈತರ ಜೀವನಾಡಿಯಾಗಿದ್ದ ಕಮ್ಯುನಿಸ್ಟ್ ರಾಮಣ್ಣ ನಿಧನ



ಪಡುಬಿದ್ರಿಯಲ್ಲಿ ಕಮ್ಯುನಿಸ್ಟ್ ರಾಮಣ್ಣ ಎಂದೇ ಹೆಸರಾಗಿದ್ದ ರಾಮ ಕುಂದರ್ ರವರು ಕಾರು ಅಪಘಾತದಲ್ಲಿ ಇಂದು ನಿಧನರಾದರು. ಅವರ ನಿಧನಕ್ಕೆ ಸಿಪಿಐ (ಎಂ) ಉಡುಪಿ ಜಿಲ್ಲಾ ಮತ್ತು ತಾಲೂಕು ಸಮಿತಿಗಳು ಸಂತಾಪವನ್ನು ವ್ಯಕ್ತ ಪಡಿಸುತ್ತದೆ. ಅವರಿಗೆ 86 ವಯಸ್ಸಾಗಿತ್ತು, ಅವರು ಪತ್ನಿ, ನಾಲ್ವರು ಪುತ್ರ ಮತ್ತು ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಅಭಿಮಾನಿಗಳನ್ನು ಅಗಲಿದ್ದಾರೆ.

ಎಪ್ಪತ್ತರ ದಶಕದಲ್ಲಿ ರಾಜ್ಯದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ 'ಉಳುವವನೇ ಹೊಲದೊಡೆಯ' ಘೋಷಣೆಯಲ್ಲಿ ಭೂ ಸುಧಾರಣೆ ಗಾಗಿ ಸಮರಶೀಲ ಚಳುವಳಿ ನಡೆಯುತಿತ್ತು. ಅವಿಭಜಿತ ದ.ಕ. ಜಿಲ್ಲೆಯಲ್ಲಿ ಎಂ. ಎಚ್. ಕೃಷ್ಣಪ್ಪ, ವೀರಪ್ಪ ಸಾಲಿಯಾನ್, ಚೆನ್ನಪ್ಪ ಮೊದಲಾದವರು ಹಳ್ಳಿ ಹಳ್ಳಿಗಳಲ್ಲಿ ತಿರುಗಾಡಿ ರೈತರನ್ನು ಸಂಘಟಿಸಿದ ಸಂದರ್ಭದಲ್ಲಿ ಪಡುಬಿದ್ರಿಯಲ್ಲಿ ರಾಮ ಕುಂದರ್ ಅವರು ಕಾಳು ಮೊಯ್ಲಿ ಮೊದಲಾದ ಮುಖಂಡರೊಂದಿಗೆ ಸೇರಿ ಹೋರಾಟ ನಡೆಸಿದರು.

ನಂತರ ದೇವರಾಜ್ ಅರಸು ಸರಕಾರವು ಭೂ ಕಾಯಿದೆಯನ್ನು ಜಾರಿಗೆ ತಂದಾಗ ಗೇಣಿದಾರರಿಗೆ ಡಿಕ್ಲರೇಷನ್ ಕೊಡಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದರು. ಇದರಿಂದ ಪಡುಬಿದ್ರಿ, ನಂದಿಕೂರು, ಕಾಪು, ಮೊದಲಾದ ಪ್ರದೇಶಗಳ ಗೇಣಿದಾರರು ಭೂ ಮಾಲಕರ ದಬ್ಬಾಳಿಕೆಯನ್ನು ಎದುರಿಸಿ ಭೂಮಿಯನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಮೂಲ್ಕಿ ವಲಯದ ರೈತ ಸಂಘದ ಅಧ್ಯಕ್ಷರಾಗಿ, ನಂತರ ಉಡುಪಿ ತಾಲೂಕು ರೈತ ಸಂಘದ ಅಧ್ಯಕ್ಷರೂ ಆಗಿದ್ದರು. ಒಂದು ಅವಧಿಗೆ ಪಡುಬಿದ್ರಿ ಮಂಡಲ್ ಪಂಚಾಯತ್ ಸದಸ್ಯರಾಗಿದ್ದ ರಾಮಣ್ಣನವರು, ಮೂಲ್ಕಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರೂ ಆಗಿದ್ದರು.

ಒಟ್ಟಾರೆಯಾಗಿ ಜನರ ಪರವಾಗಿ ದುಡಿದ ರಾಮ ಕುಂದರ್ ಅವರ ಅಂತ್ಯಕ್ರಿಯೆಯಲ್ಲಿ ಹಿರಿಯ ಕಾರ್ಮಿಕ ಮುಖಂಡರಾದ ಕೆ. ಶಂಕರ್, ಬಾಲಕೃಷ್ಣ ಶೆಟ್ಟಿ, ರೈತ ಹೋರಾಟದಲ್ಲಿ ಒಡನಾಡಿಯಾಗಿದ್ದ ದಾಸು ಭಂಡಾರಿ, ಹಾಗೂ ಹೋರಾಟಗಾರಾದ ವಿಟ್ಠಲ್ ಪೂಜಾರಿ, ಲಕ್ಷ್ಮಣ್, ಗೊಡ್ವಿನ್, ಪೂವಪ್ಪ ಕೋಟ್ಯಾನ್ ಮೊದಲಾದವರು ಭಾಗವಹಿಸಿದ್ದರು. ●

SFI ರಾಜ್ಯ ಸಮಾವೇಶ

ಶಿಕ್ಷಣದ ತಾರತಮ್ಯ ವಿರೋಧಿಸಿ, ಸಮಾನ ಗುಣಮಟ್ಟದ ಶಿಕ್ಷಣಕ್ಕಾಗಿ, ಉದ್ಯೋಗಕ್ಕಾಗಿ ಒತ್ತಾಯಿಸಿ, ಕೋಮುವಾದನ್ನು ಸೋಲಿಸಿ ಎಂಬ ಬೇಡಿಕೆಯಡಿ SFI ನ ರಾಜ್ಯ ಸಮಾವೇಶ ಬಳ್ಳಾರಿಯಲ್ಲಿ ನಡೆಯಿತು. 16 ನೇ ಅಖಿಲ ಭಾರತ ಸಮ್ಮೇಳನದ ಭಾಗವಾಗಿ ಈ ಸಮಾವೇಶವನ್ನು ಸಂಘಟಿಸಲಾಗಿತ್ತು.

ಹಿರಿಯ ಚಿಂತಕ ಟಿ.ಜಿ.ವಿಠಲ್ ರವರು ಉದ್ಘಾಟಿಸಿ ಮಾತನಾಡಿದರು. ಈ ದೇಶದಲ್ಲಿ ವಿದ್ಯಾರ್ಥಿಗಳ ಚಳುವಳಿಯು ಸ್ವಾತಂತ್ರ್ಯ ಹೋರಾಟದಲ್ಲಿ ಮಹತ್ತರದ ಕೊಡುಗೆಯನ್ನು ನೀಡಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವ ಬೆಳಸಿಕೊಳ್ಳಬೇಕಿದೆ. ದೇಶದ ವಿದ್ಯಾರ್ಥಿಗಳು ಅಭ್ಯಾಸ ಮತ್ತು ಹೋಟದ ಮೂಲಕ ಸಂಘಟಿತರಾಗಬೇಕಿದೆ. ಈ ನಿಟ್ಟಿನಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ ಕೆಲಸ ಮಾಡುತ್ತ ಬರುತ್ತಿದೆ. ರಾಷ್ಟ್ರದ ಹಿತರಕ್ಷಣೆಗಾಗಿ ಮತ್ತು ಸಹೋದರತೆ ಸಹ ಬಾಳ್ವೆಗಾಗಿ ಸಮಾನ ವ್ಯವಸ್ಥೆಗಾಗಿ, ತಾರತಮ್ಯವನ್ನು ವಿರೋಧಿಸಿ ಬಹುದೊಡ್ಡ ಚಳುವಳಿಯಾಗಿ ಬೆಳೆದು ಬಂದಿದೆ, ಎಂದರು.

ನಂತರ ಮಾತನಾಡಿದ ಪಿ.ಆರ್ ವೆಂಕಟೇಶ ರವರು ಎಸ್‌ಎಫ್‌ಐ ವಿದ್ಯಾರ್ಥಿಗಳು ಪರಿಪೂರ್ಣ ವಿದ್ಯಾರ್ಥಿಗಳು, ಎಲ್ಲಾ ವಿಷಯಗಳ ಬಗ್ಗೆ ಅಧ್ಯಯನ ಮಾಡುವ ಕ್ರಿಯಾಶೀಲತೆ ಅವರಲ್ಲಿರುತ್ತದೆ. ಎಸ್. ಎಫ್.ಐ ಬಹುತ್ವಕ್ಕಾಗಿ ಮತ್ತು ದೇಶದ ಸೌಹಾರ್ದತೆಗಾಗಿ ದುಡಿಯುತ್ತಿದೆ. ಎಸ್.ಎಫ್ ಐ ಸಂಘಟನೆಯನ್ನು ಕಟ್ಟಬೇಕಿದೆ ಎಂದು ತಮ್ಮ ಆಶಯವನ್ನು ವ್ಯಕ್ತಪಡಿಸಿದರು.

ವಿ.ಅಂಬರೀಶ್, ಎಸ್.ಎಫ್.ಐ ರಾಜ್ಯ ಅಧ್ಯಕ್ಷರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗುರುರಾಜ್ ದೇಸಾಯಿ, ವಾಸುದೇವರೆಡ್ಡಿ, ಶಬ್ಬೀರ್, ಗಾಯತ್ರಿ, ಅಮರೇಶ ಕಡಗದ್, ದೊಡ್ಡಬಸವರಾಜ್, ಶಿವಕುಮಾರ ಮ್ಯಾಗಳಮನಿ ವೇದಿಕೆಯ ಮೇಲಿದ್ದರು. ವಿವಿಧ ಜಿಲ್ಲೆಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಿಮ್ಲಾದಲ್ಲಿ ನಡೆಯಲಿರುವ ಅಖಿಲ ಭಾರತ ಎಸ್.ಎಫ್.ಐ. ಸಮ್ಮೇಳನಕ್ಕೆ 15 ಜನ ಪ್ರತಿನಿಧಿಗಳನ್ನು ಆರಿಸಲಾಯಿತು. ●

ಉಡುಪಿಯಲ್ಲೂ ಬೀದಿಗಿಳಿದ ಬೀಡಿ ಕಾರ್ಮಿಕರು:

ಬೀಡಿ ಕಾರ್ಮಿಕರ ಕನಿಷ್ಠ ಕೂಲಿಗೆ ಒತ್ತಾಯಿಸಿ ಉಡುಪಿ ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನ್ (ಸಿಐಟಿಯು) ಹಾಗೂ ಎಸ್.ಕೆ.ಬೀಡಿ ವರ್ಕರ್ಸ್ ಫೆಡರೇಶನ್ (ಎಐಟಿಯುಸಿ) ನೇತೃತ್ವದಲ್ಲಿ ಬೀಡಿ ಕಾರ್ಮಿಕರು ಅಕ್ಟೋಬರ್ 23 ರಂದು ಉಡುಪಿಯ ಭಾರತ್ ಬೀಡಿ ಡಿಪೋ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು.

ಸಾವಿರ ಬೀಡಿಗೆ ರೂ.210 ಕನಿಷ್ಠ ಕೂಲಿ ನೀಡಬೇಕು. ರಾಷ್ಟ್ರೀಯ ಸಮಾನ ಕೂಲಿ ಸಾವಿರ ಬೀಡಿಗೆ ರೂ.300 ನಿಗದಿಗೊಳಿಸಬೇಕು. 2015 ಎಪ್ರಿಲ್ 1 ರಿಂದ ಬಾಕಿ ಇರುವ ತುಟ್ಟಿಭತ್ತೆ 1000 ಬೀಡಿಗೆ ರೂ.12.75 ರಂತೆ ನೀಡಬೇಕು. ಧೂಮಪಾನ ನಿಷೇಧ ಕಾಯಿದೆಯಿಂದ ಕೆಲಸ ಕಳೆದುಕೊಂಡ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ಹಾಗೂ ರೂ.5ಲಕ್ಷ ಪರಿಹಾರ ನೀಡಬೇಕು. ನಿವೃತ್ತಿ ಪಿಂಚಣಿ ರೂ.5000 ನೀಡಬೇಕು. ಬೀಡಿ ಕಾರ್ಮಿಕರಿಗೆ ಬಿಪಿಎಲ್ ಕಾರ್ಡು ಹಾಗೂ ಉಚಿತ ವಸತಿ ಯೋಜನೆ ಒದಗಿಸಬೇಕು ಎಂದು ಸತ್ಯಾಗ್ರಹಿಗಳು ಆಗ್ರಹಿಸಿದರು.

ಸಿಐಟಿಯು ಮುಖಂಡರಾದ ಪಿ.ವಿಶ್ವನಾಥ ರೈ, ಉಡುಪಿ ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನ್ (ಸಿಐಟಿಯು) ಅಧ್ಯಕ್ಷ ಮಹಾಬಲ ವಡೇರಹೋಬಳಿ, ಎಸ್.ಕೆ.ಬೀಡಿ ವರ್ಕರ್ಸ್ ಫೆಡರೇಶನ್ (ಎಐಟಿಯುಸಿ) ಉಡುಪಿ ಜಿಲ್ಲಾಧ್ಯಕ್ಷ ಕೆ.ವಿ.ಭಟ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಪ್ರತಿಭಟನಾ ಪ್ರದರ್ಶನದಲ್ಲಿ ಸಿಐಟಿಯು ಬೀಡಿ ಕಾರ್ಮಿಕ ಫೆಡರೇಶನ್ನಿನ ಕಾರ್ಯದರ್ಶಿ ಉಮೇಶ್ ಕುಂದರ್, ಕೋಶಾಧಿಕಾರಿ ಕೆ.ಲಕ್ಷ್ಮಣ್, ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಬಲ್ಕೀಸ್ ಬಾನು, ಕವಿರಾಜ್, ಸಂಜೀವ ನಾಯ್ಕ್, ಎಐಟಿಯುಸಿ ಬೀಡಿ ಕಾರ್ಮಿಕ ಫೆಡರೇಶನ್ ಮುಖಂಡರಾದ ಪಿ.ಶೇಖರ, ಶಾಂತಾ ನಾಯ್ಕ್, ಶಶಿಕಲಾ ಭಾಗವಹಿಸಿದ್ದರು. ●

ಮರಳು ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಕುಂದಾಪುರದಲ್ಲಿ ಧರಣಿ:

ಮರಳು ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ಕೂಡಲೇ ಮಧ್ಯಪ್ರವೇಶಿಸಬೇಕೆಂದು ಒತ್ತಾಯಿಸಿ ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಅಕ್ಟೋಬರ್ 23 ರಂದು ಕುಂದಾಪುರ ಶಾಸ್ತ್ರಿ ವೃತ್ತದ ಬಳಿ ಧರಣಿ ನಡೆಸಲಾಯಿತು.

ಕ್ಷುಲ್ಲಕ ಕಾರಣ ನೀಡಿ ಕಳೆದ ಎರಡು ವರ್ಷಗಳಿಂದ ಜಿಲ್ಲೆಯ ಜನರ ಮನೆ ನಿರ್ಮಾಣಕ್ಕೆ ಬೇಕಾದ ಮರಳು ಪೂರೈಸಲು ಜಿಲ್ಲಾಡಳಿತ ಸರಿಯಾದ ಕ್ರಮಕೈಗೊಂಡಿಲ್ಲ. ಕಟ್ಟಡ ನಿರ್ಮಾಣ ಕಾರ್ಮಿಕರು ಕಳೆದ ಎರಡು ವರ್ಷಗಳಿಂದ ಕೆಲಸ ಇಲ್ಲದೆ ಜೀವನ ನಿರ್ವಹಿಸಲು ಪರದಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರಕಾರವೇ ಮರಳುಗಾರಿಕೆ ನಡೆಸಿ ಎಲ್ಲರಿಗೂ ಕಡಿಮೆ ದರದಲ್ಲಿ ಮರಳು ವಿತರಣೆ ಮಾಡಬೇಕು ಎಂದು ಪ್ರತಿಭಟನೆಯಲ್ಲಿ ಆಗ್ರಹಿಸಲಾಯಿತು.

ಧರಣಿಯನ್ನುದ್ದೇಶಿಸಿ ಕಟ್ಟಡ ಕಾರ್ಮಿಕರ ಮುಖಂಡರಾದ ಸುರೇಶ ಕಲ್ಲಾಗರ, ಸಿಐಟಿಯು ಮುಖಂಡರಾದ ಎಚ್.ನರಸಿಂಹ ಮಾತನಾಡಿದರು. ಸಿಐಟಿಯು ಮುಖಂಡರಾದ ಕೆ.ಶಂಕರ, ಯು. ದಾಸು ಭಂಡಾರಿ, ಕಟ್ಟಡ ಕಾರ್ಮಿಕ ಮುಖಂಡರಾದ ರಮೇಶ ಗುಲ್ವಾಡಿ, ಸಂತೋಷ್ ಹೆಮ್ಮಾಡಿ, ಅರುಣ್ ಕುಮಾರ್, ಚಿಕ್ಕ ಮೊಗವೀರ, ಸುಧಾಕರ ಕುಂಬಾಶಿ, ಸುಶೀಲಾ ಗಂಗೊಳ್ಳಿ, ವಿಜೇಂದ್ರ ಉಪಸ್ಥಿತರಿದ್ದರು.

ಇದೇ ದಿನ ಬೈಂದೂರಿನ ಕಟ್ಟಡ ಕಾರ್ಮಿಕರು ಸಿಐಟಿಯು ಮುಖಂಡರಾದ ರಾಜೀವ ಪಡುಕೋಣೆ, ಗಣೇಶ ತೊಂಡೆಮಕ್ಕಿ, ಶ್ರೀಧರ ಉಪ್ಪುಂದ, ನಾಗರತ್ನ ನಾಡ ಮತ್ತಿತರರನ್ನು ಒಳಗೊಂಡ ನಿಯೋಗದಲ್ಲಿ ತಹಶೀಲ್ದಾರರನ್ನು ಭೇಟಿಯಾಗಿ ಸರಕಾರವು ಮರಳು ಸಮಸ್ಯೆಯನ್ನು ಶೀಘ್ರ ಪರಿಹರಿಸುವಂತೆ ಮನವಿ ಸಲ್ಲಿಸಿದರು. ●

ವಿಶೇಷ ಲೇಖನ



ಆರೋಗ್ಯ ಕರ್ನಾಟಕ ಸಾರ್ವತ್ರಿಕ ಸೇವೆಯಾದೀತೆ?

ಡಾ. ಪ್ರಕಾಶ ಸಿ. ರಾವ್

ಕರ್ನಾಟಕದಲ್ಲಿ ಇತ್ತೀಚೆಗೆ ಘೋಷಿಸಲಾದ ಆರೋಗ್ಯ ನೀತಿಗೆ ಆರೋಗ್ಯ ಕರ್ನಾಟಕ ಎಂದು ಕರೆಯಲಾಗಿದೆ. ಇದು ಸಾರ್ವತ್ರಿಕ ಆರೋಗ್ಯ ವಿಸ್ತರಣೆಯ ಮಾದರಿಯ ಆರೋಗ್ಯ ನೀತಿಯಾಗಿದೆ. ಭಾರತದಲ್ಲಿ ಕರ್ನಾಟಕ ಈ ನೀತಿಯನ್ನು ಜಾರಿಗೆ ತರಲು ಹೊರಟಿರುವ ಮೊದಲನೆಯ ರಾಜ್ಯ ಎನ್ನಲಾಗಿದೆ.

ಆರೋಗ್ಯ ಕರ್ನಾಟಕ ಹೊಸ ಆರೋಗ್ಯ ವ್ಯವಸ್ಥೆಯಾಗಿ ಜಾರಿ ಬಂದರೂ, ಇದರಲ್ಲಿ ವಿಶೇಷ ಸೌಲಭ್ಯಗಳೇನೂ ಇಲ್ಲ, ಇದಕ್ಕೆ ಕಾರಣ ಸರಕಾರ ಈ ವ್ಯವಸ್ಥೆಗೆ ಹೆಚ್ಚಿನ ಹಣಕಾಸನ್ನು ನೀಡಿಲ್ಲ ಎಂದು ಬ್ರೂಕಿಂಗ್ಸ್ ಇಂಡಿಯಾ ಸಂಶೋಧನೆಯಿಂದ ತಿಳಿದುಬಂದಿದೆ. ಆದರೆ ಈ ವ್ಯವಸ್ಥೆಯಿಂದ ಪ್ರಾಥಮಿಕ ಆರೋಗ್ಯ ವ್ಯವಸ್ಥೆಗೆ ಧಕ್ಕೆಯಾಗಿರಲು ಸಾಧ್ಯತೆ ಇದೆ. ಇದು ಖಾಸಗೀಕರಣಗೊಳ್ಳದಂತೆ ಜವಾಬ್ದಾರಿ ವಹಿಸಬೇಕು.

ಕರ್ನಾಟಕದಲ್ಲಿ ಇತ್ತೀಚೆಗೆ ಘೋಷಿಸಲಾದ ಆರೋಗ್ಯ ನೀತಿಗೆ ಆರೋಗ್ಯ ಕರ್ನಾಟಕ ಎಂದು ಕರೆಯಲಾಗಿದೆ. ಇದು ಸಾರ್ವತ್ರಿಕ ಆರೋಗ್ಯ ವಿಸ್ತರಣೆಯ ಮಾದರಿಯ ಆರೋಗ್ಯ ನೀತಿಯಾಗಿದೆ. ಈ ನೀತಿ ಈಗಾಗಲೇ ಅನೇಕ ದೇಶಗಳಲ್ಲಿ ಜಾರಿಗೆ ಬಂದಿದೆ. ಉದಾ: ನಾರ್ವೇ, ಥೈಲ್ಯಾಂಡ್, ನ್ಯೂಝಿಲ್ಯಾಂಡ್, ಜಪಾನ್, ಜರ್ಮನಿ ಇನ್ನೂ ಅನೇಕ ದೇಶಗಳು ಈ ನೀತಿಯನ್ನು ಜಾರಿಗೆ ತರಲು ತಯಾರಿ ನಡೆಸಿವೆ. ಭಾರತದಲ್ಲಿ ಕರ್ನಾಟಕ ಈ ನೀತಿಯನ್ನು ಜಾರಿಗೆ ತರಲು ಹೊರಟಿರುವ ಮೊದಲನೆಯ ರಾಜ್ಯ ಎನ್ನಲಾಗಿದೆ.

ಕರ್ನಾಟಕದ ಆರೋಗ್ಯ ಸ್ಥಿತಿಗತಿ:

ಇತರೇ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಆರೋಗ್ಯ ಸ್ಥಿತಿ ಉತ್ತಮವಾಗಿದೆ. ಇಲ್ಲಿ ಕೆಲವು ಮುಖ್ಯ ಅಂಕಿ ಅಂಶಗಳನ್ನು ನೀಡಲಾಗಿದೆ. ಶಿಶು ಮರಣ ಸಂಖ್ಯೆ 24/1000 (ಜೀವಂತ ಹುಟ್ಟುಗಳಿಗೆ) ಇದು ಇತರೆ ರಾಜ್ಯಗಳಲ್ಲಿದ್ದಷ್ಟೆ (ಕೇರಳ, ದೆಹಲಿ, ಮಹಾರಾಷ್ಟ್ರ, ಪಂಜಾಬ್, ತಮಿಳುನಾಡು) ಇದೆ.

ಕರ್ನಾಟಕ ಆರೋಗ್ಯ ಸ್ಥಿತಿ ಉತ್ತಮವಾಗಿರಲು, 2004 ರಲ್ಲಿಯೇ ಕರ್ನಾಟಕದಲ್ಲಿ ಮೊದಲ ಆರೋಗ್ಯ ನೀತಿ ಜಾರಿಗೆ ಬಂದಿತ್ತು. ನಂತರ ಆ ನೀತಿಯನ್ನು 2017ರಲ್ಲಿ ಹೆಸರು ಬದಲಿಸಿ ಕರ್ನಾಟಕ ಇಂಟಿಗ್ರೇಟೆಡ್ ಹೆಲ್ತ್ ಪಾಲಿಸಿ ಎಂದು ಕರೆಯಲಾಯಿತು.

ಕರ್ನಾಟಕದಲ್ಲಿ ಕರ್ನಾಟಕ ಮೆಡಿಕಲ್ ಎಷ್ಟಾಬ್ಲಿಷ್ಮೆಂಟ್ ಆ್ಯಕ್ಟ್ 2007 (Karnataka Medical Establishment Act 2007) ಅನ್ನು ತಿದ್ದುಪಡಿ ಮಾಡಿ 2018 ರಲ್ಲಿ ಪುನಃ ಜಾರಿಯಾಗಿದೆ. 2010 ರಲ್ಲಿ ಕರ್ನಾಟಕ ಕ್ಲಿನಿಕಲ್ ಎಷ್ಟಾಬ್ಲಿಷ್ಮೆಂಟ್ ಆ್ಯಕ್ಟ್ (Karnataka Clinical Establishment Act) ಜಾರಿಯಾಗಿ ಈಗ ಬಳಕೆಯಲ್ಲಿದೆ.

ಇದಲ್ಲದೆ ಸರಕಾರೀ ವಿಮಾ ಯೋಜನೆಯಾದ ಯಶಸ್ವಿನಿ ಯೋಜನೆಯನ್ನು 2002ರಲ್ಲಿ ಹಾಗೂ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯನ್ನು 2010ರಲ್ಲಿ ಜಾರಿಗೊಳಿಸಲಾಗಿತ್ತು.

ಆದರೆ ಈಗ 2018ರಲ್ಲಿ ಒಂದು ಸಮಗ್ರ ಆರೋಗ್ಯ ಯೋಜನೆ ಜಾರಿಗೆ ಬಂದಿದೆ.

ಆರೋಗ್ಯ ಕರ್ನಾಟಕದ ಉದ್ದೇಶವೇನು?

* ಜನರ ಆರೋಗ್ಯ ಸುಧಾರಣೆಗೆ ತಾಂತ್ರಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಕಾನೂನಾತ್ಮಕವಾಗಿ ಸದೃಢವಾಗಿರುವ ವ್ಯವಸ್ಥೆಯನ್ನು ರೂಪಿಸಿ ಅದು ಈ ಯೋಜನೆಗೆ ಮಾರ್ಗದರ್ಶನ ಹಾಗೂ ಸಲಹೆ ನೀಡುವಂತೆ ರೂಪಿಸುವುದು.
* ಈ ಯೋಜನೆಯಲ್ಲಿ ಎಲ್ಲರಿಗೂ ಆರೋಗ್ಯ ಸೌಲಭ್ಯ ದೊರೆಯುವಂತೆ ಮಾಡುವುದು. ಅವರ ಆರ್ಥಿಕ ಪರಿಸ್ಥಿತಿ ಏನೇ ಇದ್ದರೂ ಅವರಿಗೆ ಆರೋಗ್ಯ ಸೌಲಭ್ಯ ನಿರಾಕರಣೆಯಾಗದಂತೆ ಮಾಡುವುದು.
* ಈ ವ್ಯವಸ್ಥೆಯಲ್ಲಿ ಪ್ರಾಥಮಿಕ, ದ್ವಿತೀಯ, ತೃತೀಯ ಆರೋಗ್ಯ ಸೇವೆಗಳು ದೊರಕುವಂತೆ ಮಾಡುವುದು. ಆರೋಗ್ಯ ಕೇಂದ್ರಗಳಲ್ಲಿ ಎಲ್ಲಾ ಸೇವೆಗಳು ದೊರಕಿಸಿಕೊಡುವುದಲ್ಲದೆ, ಕೆಲವು ಆಯ್ದ ಆಸ್ಪತ್ರೆಗಳಲ್ಲಿ ದ್ವಿತೀಯ ಹಾಗೂ ತೃತೀಯ ಆರೋಗ್ಯ ಸೇವೆಗಳು ದೊರಕುವಂತೆ ಮಾಡುವುದು.
* ಬಡತನ ರೇಖೆಯ ಕೆಳಗಿರುವವರಿಗೆ ಸಂಪೂರ್ಣ ಉಚಿತ ಆರೋಗ್ಯ ಸೇವೆಗಳನ್ನು ನೀಡುವುದು.

ಬಡತನ ರೇಖೆಯ ಮೇಲಿರುವವರಿಗೆ ಸರಕಾರ ಈ ಯೋಜನೆಯಲ್ಲಿ ಕೇವಲ 30% ಹಣ ಸಹಾಯ ನೀಡುತ್ತದೆ, ಹಾಗೂ 70% ಹಣವನ್ನು ರೋಗಿಯೇ ಭರಿಸಬೇಕಾಗುತ್ತದೆ.

ಈ ಯೋಜನೆಯನ್ನು ಮಾರ್ಚ್ 2018 ರಲ್ಲಿ ಜಾರಿಗೆ ತರಲಾಗಿದೆ ಹಾಗೂ ಇದರ ಜವಾಬ್ದಾರಿ ಕರ್ನಾಟಕದ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಗೆ ಇರುತ್ತದೆ.

ಈ ಯೋಜನೆ ಹೇಗೆ ಜಾರಿಗೆ ಬರುತ್ತದೆ?

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (Suvarna Arogya Suraksha Trust) ಆರೋಗ್ಯ ಹಾಗೂ ಕುಟುಂಬ ಯೋಜನೆ ಕಮೀಷನರ್ ಹಾಗೂ ಆರೋಗ್ಯ ಶಿಕ್ಷಣ ನಿರ್ದೇಶಕರಿಗೆ ಈ ಯೋಜನೆಯನ್ನು ಜಾರಿಗೊಳಿಸಲು ಎಲ್ಲ ತರಹದ ಸಹಾಯವನ್ನು ನೀಡಲಿದೆ.

ಈ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಜವಾಬ್ದಾರಿಗಳು:

* ಈ ಯೋಜನೆಯ ಕಂಪ್ಯೂಟರೀಕರಣದ ಜವಾಬ್ದಾರಿ ನಿರ್ವಹಿಸುವುದು.
* ಹಣಕಾಸಿನ ನಿರ್ವಹಣೆ
* ಕೇಂದ್ರ ಸರ್ಕಾರದಿಂದ ಆರ್.ಎಸ್.ಬಿ.ವಾಯ್ ಗೆ ಹಣಕಾಸನ್ನು ಪಡೆದು ಒದಗಿಸುವುದು.
* ಪ್ರಾಥಮಿಕ ಆರೋಗ್ಯ ಸಂಸ್ಥೆ ಹಾಗೂ ಖಾಸಗೀ ಆಸ್ಪತ್ರೆಗಳನ್ನು ಸಬಲೀಕರಿಸುವುದು. ಪ್ರಾಥಮಿಕ ಆರೋಗ್ಯ ಸಂಸ್ಥೆ ಹಾಗೂ ಖಾಸಗೀ ನೋಂದಾಯಿತ ಆಸ್ಪತ್ರೆಗೆ ಹಣ ನೀಡುವುದು.
* ತಜ್ಞರ ಸಮಿತಿಗೆ ಅಗತ್ಯ ಸಹಾಯ ನೀಡುವುದು.
* ಖಾಸಗೀ (ನೋಂದಣಿಗೊಳ್ಳುವ) ಆಸ್ಪತ್ರೆಗಳಿಗೆ ಕಾರ್ಯರೂಪಕ್ಕೆ ಬರಲು ಮಾರ್ಗದರ್ಶನ ರೂಪಿಸುವುದು.
* ಆಸ್ಪತ್ರೆಗಳಿಗೆ ರೋಗಿಯನ್ನು ಕಳುಹಿಸಲು ಮಾರ್ಗದರ್ಶನ ಪಟ್ಟಿ ತಯಾರಿಸುವುದು.
* ವೈದ್ಯಕೀಯ ಆಡಿಟ್ ನೀತಿಗಳನ್ನು ರೂಪುಗೊಳಿಸುವುದು.

ಪ್ರಾಥಮಿಕ ಆರೋಗ್ಯ ಸಂಸ್ಥೆಗಳ ಆರೋಗ್ಯ ನಿರ್ವಹಣೆ ಆರೋಗ್ಯ ಹಾಗೂ ಕುಟುಂಬ ಕಲ್ಯಾಣದ ಕಮೀಷನರ್ ಜವಾಬ್ದಾರಿ. ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಾಥಮಿಕ ಆರೋಗ್ಯ ಸಂಸ್ಥೆಗಳ ನಿರ್ವಹಿಸುವ ಜವಾಬ್ದಾರಿ ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರದ್ದು.

ಹಣಕಾಸು:

ಕರ್ನಾಟಕದ ಮುಂಗಡ ಪತ್ರದಲ್ಲಿ ಮಂಜೂರು ಮಾಡಿದ ಹಣಕಾಸನ್ನು ಈ ಯೋಜನೆಗೆ ಬಳಸಲಾಗುವುದು.

ಗುರಿ:

* ಕರ್ನಾಟಕದ 1.4 ಕೋಟಿ ಜನಸಂಖ್ಯೆಗೆ ಎಲ್ಲರಿಗೂ ಆರೋಗ್ಯ ವ್ಯವಸ್ಥೆಯನ್ನು ಜಾರಿ ಮಾಡುವುದು ಬಿಪಿಎಲ್ ಕಾರ್ಡ್ ಹೊಂದಿದವರಿಗೆ ಉಚಿತ ಸೇವೆಗಳು
* ಎಪಿಎಲ್ ಕಾರ್ಡ್ ಹೊಂದಿದವರಿಗೆ ಸರಕಾರ 30% ಹಣಕಾಸಿನ ವೆಚ್ಚವನ್ನು ಭರಿಸುವುದು.

ಚಿಕಿತ್ಸೆ ಆ ಸಂಸ್ಥೆಯಲ್ಲಿ ಇಲ್ಲದಿದ್ದಲ್ಲಿ ಎಲ್ಲ ಸರಕಾರಿ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಸಂಸ್ಥೆಗಳು ತಮ್ಮ ರೋಗಿಗಳನ್ನು ನೋಂದಣಿ ಹೊಂದಿದ ಖಾಸಗೀ ಆಸ್ಪತ್ರೆಗಳಿಗೆ ಕಳುಹಿಸಬಹುದು.

ಯಾರು ಈ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು:

* ಯಾವುದೇ ವಯಸ್ಸಿನ ಕರ್ನಾಟಕದ ಎಲ್ಲ ನಿವಾಸಿಗಳು ಸೌಲಭ್ಯಗಳನ್ನು ಪಡೆಯಬಹುದು. (ಬಿಪಿಎಲ್, ಎಪಿಎಲ್ ಕಾರ್ಡ್ ಹೊಂದಿದವರು ಕೂಡ).
* ಎಲ್ಲ ನೋಂದಣಿ ಹೊಂದಿದ ವ್ಯಕ್ತಿಗೆ ಒಂದು ಆರೋಗ್ಯ ಕಾರ್ಡ್ ನೀಡಲಾಗುವುದು.
* ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಮೊದಲಿದ್ದ ಎಲ್ಲ ಆರೋಗ್ಯ ಯೋಜನೆಗಳನ್ನು ಸೇರಿಸಿಕೊಳ್ಳಲಾಗಿದೆ. ಆ ಯೋಜನೆಗಳು ಈ ರೀತಿ ಇವೆ. – ಯಶಸ್ವಿನಿ ಯೋಜನೆ, ವಾಜಪೇಯಿ, ರಾಜೀವ್ ಆರೋಗ್ಯ ಭಾಗ್ಯ, ರಾಷ್ಟ್ರೀಯ ಸ್ವಾಸ್ಥ ಭೀಮಾ ಯೋಜನೆ(ಖಖಃಙ), ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ, ಮುಖ್ಯಮಂತ್ರಿ ಸ್ವಾಸ್ಥ್ಯ ಹರೀಶ ಯೋಜನೆ, ಇಂದಿರಾ ಸುರಕ್ಷ ಯೋಜನೆ,

ರೋಗಿಗಳನ್ನು ದಾಖಲಾತಿ ಮಾಡುವುದು:

ಈ ವ್ಯವಸ್ಥೆ ಪಡೆಯಲು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಲ್ಲಿ ಒಮ್ಮೆ ದಾಖಲಾತಿ ಮಾಡಿಸಿಕೊಳ್ಳಬೇಕು. ತುರ್ತು ಆರೋಗ್ಯ ಪರಿಸ್ಥಿತಿ ಇದ್ದರೆ ಖಾಸಗೀ ಆಸ್ಪತ್ರೆಯಲ್ಲೂ ದಾಖಲಾತಿ ಮಾಡಿಸಿಕೊಳ್ಳಬಹುದು. ದಾಖಲಾತಿಗೆ ಆಧಾರ್‌ಕಾರ್ಡ್ ಹಾಗೂ ಪಿಡಿಎಸ್ ಕಾರ್ಡ್(ರೇಷನ್ ಕಾರ್ಡ್) ಬೇಕಾಗುತ್ತದೆ. ನಂತರ ಆರೋಗ್ಯ ಕರ್ನಾಟಕ ಕಾರ್ಡ್ ನೀಡಲಾಗುವುದು. ಆ ಕಾರ್ಡ್ ಕಳೆದುಹೋದಲ್ಲಿ ನಕಲಿ ಕಾರ್ಡ್‌ಗೆ 20 ರೂ ತೆಗೆದುಕೊಳ್ಳಲಾಗುವುದು. ಚಿಕಿತ್ಸೆಯ ವೆಚ್ಚವನ್ನು ಸರಕಾರ ಭರಿಸುವುದು.

ಚಿಕಿತ್ಸಾ ವೆಚ್ಚಗಳು:

* ದ್ವಿತೀಯ ಆರೋಗ್ಯ ಸೇವೆಗಳಿಗೆ ರೂ. 30,000.00 5 ಜನರ ಒಂದು ಕುಟುಂಬಕ್ಕೆ
* ತೃತೀಯ ಆರೋಗ್ಯ ಸೇವೆಗಳು ರೂ. 30,000 ರೂ.ಗಳು ಅದನ್ನು ಅಗತ್ಯಬಿದ್ದರೆ ರೂ. 1,500,00 ರೂ.ಗೆ ಹೆಚ್ಚಿಸಲಾಗುವುದು.
* ದ್ವಿತೀಯ ಆರೋಗ್ಯ ಚಿಕಿತ್ಸೆಗಳ ನಂತರವೂ ವ್ಯಕ್ತಿ ಗುಣ ಹೊಂದದಿದ್ದರೆ ವಿಶೇಷ ಆಸ್ಪತ್ರೆಗಳಿಗೆ ಕಳಿಸಲಾಗುವುದು.

ಈ ನೋಂದಣಿ ಹೊಂದಿದ ಆಸ್ಪತ್ರೆಗಳಿಗೆ ಸುವರ್ಣ ಟ್ರಸ್ಟ್ ಚಿಕಿತ್ಸಾ ವೆಚ್ಚವನ್ನು ನೀಡುತ್ತದೆ. ಆದರೆ ಈ ಆಸ್ಪತ್ರೆಗಳು ನಿಗದಿತ ವೆಚ್ಚಕ್ಕಿಂತ ಹೆಚ್ಚು ಹಣವನ್ನು ರೋಗಿಯಿಂದ ಪಡೆಯುವಂತಿಲ್ಲ.

ಆದರೆ ನೋಂದಣಿ ಹೊಂದಲಾರದ ವ್ಯಕ್ತಿ ಕೂಡ ಚಿಕಿತ್ಸೆ ಪಡೆಯಬಹುದು. ಆದರೆ ಸರಕಾರ ಕೇವಲ 30% ಹಣವನ್ನು ನೀಡುವುದು. ಬಾಕಿ 70% ಹಣವನ್ನು ರೋಗಿಯೇ ಭರಿಸಬೇಕಾಗುತ್ತದೆ.

ರೋಗಿಯನ್ನು ಆಸ್ಪತ್ರೆಗೆ ಕಳುಹಿಸುವುದರ ಬಗ್ಗೆ:

ಯಾವ ಆಸ್ಪತ್ರೆಗೆ ಹೋಗಬೇಕೆಂಬುದನ್ನು ರೋಗಿಯೇ ಪಟ್ಟಿಯಿಂದ ಆರಿಸಿಕೊಳ್ಳಬಹುದು. ಪ್ರಾಥಮಿಕ ಆರೋಗ್ಯ ಸಂಸ್ಥೆಯನ್ನು ಆರೋಗ್ಯ ಹಾಗೂ ಕುಟುಂಬ ಕಲ್ಯಾಣದ ಕಮೀಷನರ್ ಜವಾಬ್ದಾರಿ ತೆಗೆದುಕೊಳ್ಳುವುದು.

ಪ್ರಾಥಮಿಕ ಆರೋಗ್ಯ ಸೇವೆಗಳು:

ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಪ್ರಾಥಮಿಕ ಆರೋಗ್ಯ ಸಂಸ್ಥೆಗಳಲ್ಲಿ ನೀಡಲಾಗುವುದು. ವೈದ್ಯಕೇತರ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತರನ್ನು ರೋಗಿ ಮನೆಗೆ ಕಳುಹಿಸಿ ಮಹಿಳೆಯ ಆರೋಗ್ಯ ಸುಧಾರಿಸಲು ಪ್ರಯತ್ನ ಮಾಡಲಾಗುವುದು.

ಚರ್ಚೆ

ಆರೋಗ್ಯ ಕರ್ನಾಟಕ ಹೊಸ ಆರೋಗ್ಯ ವ್ಯವಸ್ಥೆಯಾಗಿ ಜಾರಿ ಬಂದರೂ, ಇದರಲ್ಲಿ ವಿಶೇಷ ಸೌಲಭ್ಯಗಳೇನೂ ಇಲ್ಲ, ಇದಕ್ಕೆ ಕಾರಣ ಸರಕಾರ ಈ ವ್ಯವಸ್ಥೆಗೆ ಹೆಚ್ಚಿನ ಹಣಕಾಸನ್ನು ನೀಡಿಲ್ಲ ಎಂದು ಬ್ರೂಕಿಂಗ್ಸ್ ಇಂಡಿಯಾ ಸಂಶೋಧನೆಯಿಂದ ತಿಳಿದುಬಂದಿದೆ.

ಕರ್ನಾಟಕ	:	ರೂ. 791.00
ಆಂಧ್ರಪ್ರದೇಶ	:	ರೂ. 1022.00
ತಮಿಳುನಾಡು	:	ರೂ. 849.00
ಕೇರಳ	:	ರೂ. 1070.00

ಮೊದಲು ಹಲವಾರು ವಿಮಾ ಯೋಜನೆಗಳು ಜಾರಿಯಲ್ಲಿದ್ದವು. 2014ರಲ್ಲಿ ನ್ಯಾಷನಲ್ ಸ್ಯಾಂಪಲ್ ಸರ್ವೆ ಪ್ರಕಾರ ಕೇವಲ 10.5% ರಾಜ್ಯ ಜನಸಂಖ್ಯೆ ಮಾತ್ರ ಈ ವಿಮಾ ಯೋಜನೆಯಡಿ ಬರುತ್ತಿದ್ದರು. ಆದರೆ ರಾಜ್ಯದಲ್ಲಿ ಜನರು ಆರೋಗ್ಯದ ಮೇಲೆ ಮಾಡುತ್ತಿರುವ ಖರ್ಚು 74.9%. ಅದು ಮೊದಲಿನಂತೆಯೇ ಮುಂದುವರೆಯುವಂತಿದೆ.

ಈ ಯೋಜನೆ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಕಡೆಗಣಿಸಿದೆ, ಹಿರಿಯ ನಾಗರಿಕರ ಆರೋಗ್ಯವನ್ನು ಕಡೆಗಣಿಸಿದೆ.


ಅಗತ್ಯ ಔಷಧಿಗಳು, ಆರೋಗ್ಯ ಶಿಕ್ಷಣ ವೈದ್ಯರಿಗೆ ಮುಂದುವರೆದ ವೈದ್ಯಕೀಯ ಶಿಕ್ಷಣ ರೋಗ, ತಡೆಗಟ್ಟುವಿಕೆ ಮುಂತಾದ ಸೌಲಭ್ಯಗಳನ್ನು ಕಡೆಗಣಿಸಿದೆ.

ಆರೋಗ್ಯ ಕರ್ನಾಟಕ ಜಾರಿಗೆ ಬಂದು, ಅದರ ಲಾಭ ಜನರು ಪಡೆಯುವ ತನಕ, ಅದರ ಬಗ್ಗೆ ಹೆಚ್ಚಿನ ವಿವರ ದೊರಕದು. ಕಾದು ನೋಡೋಣ. ಅದು ಜನರಿಗೆ ಪ್ರಯೋಜಕವೇ ಎಂದು.

ಆರೋಗ್ಯ ಭಾರತದಲ್ಲಿ ಮೂಲಭೂತ ಹಕ್ಕಾಗಿಲ್ಲ. ಆರೋಗ್ಯ ಕ್ಷೇತ್ರ ತಳಹದಿ ಗಟ್ಟಿಮಾಡಲು ಭೋರ್ ಸಮಿತಿ, ಆಲ್ಮಅಟಾ ಘೋಷಣೆ, ಹಾಥೀ ಸಮಿತಿ ವರದಿ ಆಧಾರದ ಮೇಲೆ ಎಲ್ಲ ಸಲಹೆಗಳನ್ನು ಗಮನಿಸದಿದ್ದರೂ ಕೆಲವು ಆದೇಶಗಳನ್ನು ಒಪ್ಪಿಕೊಂಡು ಆರೋಗ್ಯ ನೀತಿಗಳನ್ನು ರೂಪಿಸುತ್ತ ಬಂದಿವೆ.

ಆದರೆ ಈ ವ್ಯವಸ್ಥೆಯಿಂದ:

* ಪ್ರಾಥಮಿಕ ಆರೋಗ್ಯ ವ್ಯವಸ್ಥೆಗೆ ಧಕ್ಕೆಯಾಗಿರಲು ಸಾಧ್ಯತೆ ಇದೆ.
* ಇದು ಖಾಸಗೀಕರಣಗೊಳ್ಳದಂತೆ ಜವಾಬ್ದಾರಿ ವಹಿಸಬೇಕು.



* ಇದು ಸಂಪೂರ್ಣ ಉಚಿತ ಆರೋಗ್ಯ ವ್ಯವಸ್ಥೆಯಾಗಬೇಕು. ಕೊಂಡುಕೊಳ್ಳಲು ಸಾಧ್ಯವಾಗುವ ವ್ಯವಸ್ಥೆಯಾಗಬೇಕು.


ಈ ಕಾರ್ಯಕ್ರಮದ ಮಾರ್ಗದರ್ಶನ ಮಾಡುವವರ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ. ಸರಕಾರ ಇದೆಲ್ಲವನ್ನು ಗಮನಿಸಿ, ಇದೊಂದು ಜನಪರ ಕಾರ್ಯಕ್ರಮವಾಗುವಂತೆ ಮಾಡಲು ಸಾಧ್ಯ ಎಂದು ಆಶಿಸೋಣ. ●



ಸುಪ್ರಿಂ ಕೋರ್ಟ್ 2013ರಲ್ಲಿ ಸಿಬಿಐ "ತನ್ನ ದಣಿಯ ದನಿಯಲ್ಲಿ ಮಾತಾಡುವ ಪಂಜರದ ಗಿಣಿ" ಎಂದು ಕರೆದಿತ್ತು. ಮೋದಿ ಸರಕಾರದ ಅಡಿಯಲ್ಲಿ ಈ ಪಂಜರದ ಗಿಣಿ ಗಟ್ಟಿಯಾಗಿ ಚೀರಲಾರಂಭಿಸಿದೆ. ಸಿಬಿಐ ಮತ್ತು ಇ.ಡಿ. ವಿರೋಧಿಗಳ ಮೇಲೆ ರಾಜಕೀಯ ಮುಯ್ಯಿ ತೀರಿಸಲಿಕ್ಕಾಗಿ ಗುರಿಯಿಡುವ ಉಪಕರಣಗಳಾಗಿ ಬಿಟ್ಟಿವೆ. ವ್ಯಾಪಾರಸ್ಥರನ್ನು ಬೆದರಿಸಿ ತಮ್ಮ ದಾರಿಗೆ ಬರುವಂತೆ ಮಾಡಲು ಕೂಡ ಅವನ್ನು ಬಳಸಲಾಗುತ್ತಿದೆ. ಸಿಬಿಐ ನ ಈ ದುರ್ಬಳಕೆಯೇ ಈ ಸಂಸ್ಥೆಯೊಳಗಿನವರು ವೈಯಕ್ತಿಕ ಸಮೃದ್ಧಿಗಾಗಿ ಅಧಿಕಾರದ ಉರುಪಯೋಗ ಮಾಡಲು ಪ್ರೋತ್ಸಾಹ ನೀಡಿದೆ.



ಪ್ರಕಾಶ ಕಾರಟ್



ವ್ಯಂಗ್ಯಚಿತ್ರ: ಗೋಕುಲ್,ಡೆಕ್ಕನ್ ಕ್ರಾನಿಕಲ್

ಸಿಬಿಐ ನ ಕತ್ತು ಹಿಸುಕಲಾಗುತ್ತಿದೆಯೇ?

ಪ್ರಧಾನ ಮಂತ್ರಿ ಮೋದಿಯವರು ಕೇಂದ್ರೀಯ ತನಿಖಾ ಸಂಸ್ಥೆ(ಸಿಬಿಐ)ಯ ನಿರ್ದೇಶಕರ ವಿರುದ್ಧ ಒಂದು ಕ್ಷಿಪ್ರಕ್ರಾಂತಿಯನ್ನೇ ನಡೆಸಿದ್ದಾರೆ. ನಿರ್ದೇಶಕ ಅಲೋಕ್ ವರ್ಮ ಮತ್ತು ಭ್ರಷ್ಟಾಚಾರದ ಆರೋಪ ಇರುವ ವಿಶೇಷ ನಿರ್ದೇಶಕ ರಾಕೇಶ ಅಸ್ಥಾನ ಇಬ್ಬರನ್ನೂ ಕಡ್ಡಾಯ ರಜೆಯ ಮೇಲೆ ಕಳಿಸಲಾಗಿದೆ. ಸಿಬಿಐ ನಿರ್ದೇಶಕರು ಅಸ್ಥಾನ ವಿರುದ್ಧ ವಿಚಾರಣೆ ಆರಂಭಿಸಿ ಎಫ್‌ಐಆರ್ ಹಾಕಿಸಿರುವುದರಿಂದ, ನಿರ್ದೇಶಕರನ್ನು ತೆಗೆದು ಹಾಕುವ ಅಭೂತಪೂರ್ವ ಕ್ರಮವನ್ನು ಮೋದಿ ಸರಕಾರ ಕೈಗೊಂಡಿರುವುದನ್ನು ಈ ಸಂಸ್ಥೆಯಲ್ಲಿ ಎರಡನೇ ಸ್ಥಾನದಲ್ಲಿರುವವರನ್ನು ರಕ್ಷಿಸುವ ನಡೆ ಎಂದೇ ಕಾಣಬಹುದಾಗಿದೆ. ಅಸ್ಥಾನ ಅವರು ಮೋದಿ–ಷಾ ದ್ವಯರ ಆಪ್ತರು ಎಂದು ಪರಿಗಣಿಸಲಾಗಿದೆ.

ಸಿಬಿಐನಲ್ಲಿನ ಈಗಿನ ಬಿಕ್ಕಟ್ಟಿಗೆ ಮೂಲ ಕಾರಣ ಎಲ್ಲ ಮಹತ್ವದ ಸಂಸ್ಥೆಗಳಲ್ಲಿ ಪ್ರಮುಖ ಸ್ಥಾನಗಳಲ್ಲಿ ತಮಗೆ ಬೇಕಾದವರನ್ನು ಕೂರಿಸುವ ವ್ಯವಸ್ಥಿತ ಪ್ರಯತ್ನಗಳೇ. ಈ ಉದ್ದೇಶದಿಂದಲೇ ಅಸ್ಥಾನ ಅವರನ್ನು ಸಿಬಿಐನಲ್ಲಿ ಹೆಚ್ಚುವರಿ ನಿರ್ದೇಶಕರಾಗಿ ಮಾಡಲಾಗಿತ್ತು. ಆಗಿನ ನಿರ್ದೇಶಕ ಅನಿಲ್ ಸಿನ್ಹ ಡಿಸೆಂಬರ್ 2, 2016ರಂದು ನಿವೃತ್ತರಾದಾಗ ಸರಕಾರ ಅಸ್ಥಾನ ಅವರನ್ನು ಮಧ್ಯಂತರ ನಿರ್ದೇಶಕರಾಗಿ ನೇಮಿಸಿತು. ನಂತರ ಮೋಸದಿಂದ ಅವರನ್ನು ವಿಶೇಷ ನಿರ್ದೇಶಕರಾಗಿ ಮಾಡಲಾಯಿತು. ಆಗಿನ ವಿಶೇಷ ನಿರ್ದೇಶಕ ಆರ್.ಕೆ.ದತ್ತ ಅವರನ್ನು ನಿವೃತ್ತಿಯ ಮೂರುದಿನಗಳ ಮೊದಲು ಗೃಹ ಇಲಾಖೆಗೆ ಒಬ್ಬ ವಿಶೇಷ ಜಾರ್ಯದರ್ಶಿಯಾಗಿ ವರ್ಗ ಮಾಡಿ ಅಸ್ಥಾನ ಅವರನ್ನು ಎರಡನೇ ಪ್ರಮುಖ ಸ್ಥಾನಕ್ಕೆ ಏರಿಸಲು ಅನುಕೂಲ ಕಲ್ಪಿಸಿಕೊಳ್ಳಲಾಯಿತು.

ಸಿಬಿಐ ನಿರ್ದೇಶಕರು ಈ ಬಡ್ತಿಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಏಕೆಂದರೆ 2011ರ ಆದಾಯ ತೆರಿಗೆ ಕೇಸಿನಿಂದ ಉದ್ಭವಿಸಿದ ಸ್ಟರ್ಲಿಂಗ್ ಬಯೋಟೆಕ್ ಕೇಸಿನಲ್ಲಿ ಅಸ್ಥಾನ ಹೆಸರಿದೆ ಎಂದು ಅವರು ಹೇಳಿದ್ದರು.

ಹಿರಿಯ ವಕೀಲ ಪ್ರಶಾಂತ ಭೂಷಣ್ ಅಸ್ಥಾನ ಅವರನ್ನು ವಿಶೇಷ ನಿರ್ದೇಶಕರಾಗಿ ನೇಮಿಸಿದುದರ ವಿರುದ್ಧ ಸುಪ್ರಿಂ ಕೋರ್ಟ್ ಬಳಿ ಹೋಗಿದ್ದರು. ಆದರೆ ಸುಪ್ರಿಂ ಕೋರ್ಟ್‌ಅವರ ಅರ್ಜಿಯನ್ನು ತಿರಸ್ಕರಿಸಿತು.

ಸಿಬಿಐ ನಲ್ಲಿನ ಈಗಿನ ತೊಂದರೆಗಳನ್ನು ಇಬ್ಬರು ಅತ್ಯಂತ ಹಿರಿಯ ಅಧಿಕಾರಿಗಳ ನಡುವಿನ ಜಗಳ ಎಂದು ಕಾಣುವುದು ತಪ್ಪಾಗುತ್ತದೆ. ಮಾಧ್ಯಮದ ಒಂದು ವಿಭಾಗ ಹಾಗೆಂದೇ ಬಿಂಬಿಸಲು ಪ್ರಯತ್ನಿಸುತ್ತಿದೆ. ಅಸ್ಥಾನ ವಿರುದ್ಧ ಹಾಕಿರುವ ಎಫ್‌ಐಆರ್ ಅವರ ಮೇಲೆ ಮತ್ತು ಅವರ ಸಹಾಯಕರಾದ ಡಿಎಸ್‌ಪಿ ದೇವೇಂದ್ರ ಕುಮಾರ್‌ಮೇಲೆ ಗಂಭೀರ ಆರೋಪಗಳನ್ನು ಹಾಕಿದೆ. ಮೊಯ್ನ್ ಖುರೇಶಿ ಕೇಸಿನಲ್ಲಿ ಅಸ್ಥಾನರಿಗೆ 3 ಕೋಟಿ ರೂ. ಲಂಚ ಕೇಳಲಾಗಿದೆ ಎಂಬ ಆರೋಪ ಹಾಕಲಾಗಿದೆ.

ಸಿಬಿಐ ಕೆಲಸ ಮಾಡುವುದು ಪ್ರಧಾನ ಮಂತ್ರಿಗಳು ನೋಡಿಕೊಳ್ಳುತ್ತಿರುವ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಅಡಿಯಲ್ಲಿ . ಆದ್ದರಿಂದ ಅಸ್ಥಾನ ರನ್ನು ರಜೆಯ ಮೇಲೆ ಕಳಿಸಿ, ಅಥವ ಅಮಾನತು ಮಾಡಿ, ಈ ಮೊಕದ್ದಮೆ ಕಾನೂನಿನ ಪ್ರಕಾರ ನಡೆಯಲು ಬಿಡುವ ಬದಲು ಪ್ರಧಾನ ಮಂತ್ರಿಗಳು ನಿರ್ದೇಶಕರನ್ನೇ ತೆಗೆದಿದ್ದಾರೆ, ಒಬ್ಬ ಜಂಟಿ ನಿರ್ದೇಶಕರಾದ ಎಂ. ನಾಗೇಶ್ವರ ರಾವ್ ಅವರನ್ನು ತಾತ್ಕಾಲಿಕವಾಗಿ ನೋಡಿ ಕೊಳ್ಳುವಂತೆ ಹೇಳಲಾಗಿದೆ. ಸ್ವತಃ ಇವರೂ ವಿವಾದಾತ್ಮಕ ದಾಖಲೆ ಹೊಂದಿರುವವರೇ. ಅಸ್ಥಾನ ಮೊಕದ್ದಮೆಯನ್ನು ನಿಭಾಯಿಸುತ್ತಿರುವ ವಿವಿಧ ಅಧಿಕಾರಿಗಳನ್ನು ದಿಲ್ಲಿಯಿಂದ ಹೊರಗೆ ವರ್ಗ ಮಾಡಲಾಗಿದೆ. ಈ ಮೂಲಕ ಸರಕಾರದ ಪಕ್ಷಪಾತ ಪ್ರಕಟವಾಗಿದೆ.

ಸಿಬಿಐನ ನಿರ್ದೇಶಕರ ಕಾರ್ಯಾವಧಿ ಎರಡು ವರ್ಷ ಎಂದು ನಿಗದಿತವಾದ್ದು. ಅಲೋಕ್ ವರ್ಮ ಜನವರಿ 2019ರಲ್ಲಿ ನಿವೃತ್ತರಾಗುವವರಿದ್ದರು. ಅವರನ್ನು ಈ ರೀತಿಯಲ್ಲಿ ಹುದ್ದೆಯಿಂದ ತೆಗೆದು ಮೋದಿ ಸರಕಾರ ಅಸ್ಥಾನರನ್ನು ರಕ್ಷಿಸುವ ತನ್ನ ಆಶಯವನ್ನಷ್ಟೇ ಅಲ್ಲ, ರಫೆಲ್ ವ್ಯವಹಾರದ ಮೇಲೆ ಅವರು ಪ್ರಾಥಮಿಕ ತನಿಖೆ ಆರಂಭಿಸಲು ಏನೂ ಕ್ರಮ ಕೈಗೊಳ್ಳದಂತೆ ಮೊದಲೇ ತಡೆಯಬೇಕೆಂದಿದೆ ಎಂಬುದನ್ನೂ ಬಯಲು ಗೊಳಿಸಿಕೊಂಡಿದೆ.

ಮೂರು ವಾರಗಳ ಹಿಂದೆ ಪ್ರಶಾಂತ ಭೂಷಣ್, ಯಶವಂತ ಸಿನ್ಹ ಮತ್ತು ಅರುಣ್ ಶೌರಿ ಸಿಬಿಐ ನಿರ್ದೇಶಕರನ್ನು ಭೇಟಿಯಾಗಿ 36 ರಫೇಲ್ ಯುದ್ಧವಿಮಾನಗಳ ಖರೀದಿಯಲ್ಲಿ ಎಸಗಿರುವ ಅಪರಾಧಗಳ ಪಟ್ಟಿಯೊಂದಿಗೆ ಒಂದು ವಿವರವಾದ ದೂರನ್ನು ಸಲ್ಲಿಸಿದ್ದರು. ನಿರ್ದೇಶಕರ ಮೇಲೆ ಈ ವಿಶಿಷ್ಟ ಕ್ರಮ ಕೈಗೊಂಡಿರುವುದು, ಈ ವ್ಯವಹಾರದ ತನಿಖೆಯ ಬಗ್ಗೆ ಯೋಚಿಸುವ ಮುಂಚೆಯೇ ಸಿಬಿಐ ನ ಕತ್ತು ಹಿಸುಕಲಾಗುತ್ತಿದೆಯೆ ಎಂಬ ಬಲವಾದ ಸಂದೇಹವನ್ನು ಹುಟ್ಟಿಸಿದೆ.

ಅಲೋಕ್ ವರ್ಮ ಸುಪ್ರಿಂ ಕೋರ್ಟಿಗೆ ಹಾಕಿದ ಅರ್ಜಿಯಲ್ಲಿ, ತಾವು ಕೈಗೆತ್ತಿಕೊಂಡಿರುವ ಕೆಲವು ತನಿಖೆಗಳು ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಬಾಧಿಸುವ ದಿಕ್ಕನ್ನು ಹಿಡಿದಿರುವುದರಿಂದ ಸರಕಾರಕ್ಕೆ ಅಸಂತೋಷ ಇದೆ ಎಂಬ ನೇರವಾದ ಆರೋಪವನ್ನೂ ಮಾಡಿದ್ದಾರೆ.

ಸಿಬಿಐಯನ್ನು ಪ್ರಧಾನ ತನಿಖಾ ಸಂಸ್ಥೆ ಎಂದು ಹೇಳುವುದು ಈಗ ಒಂದು ಸವಕಲು ಮಾತಾಗಿ ಬಿಟ್ಟಿದೆ. ಈ ಸಂಸ್ಥೆ ಹಲವು ವರ್ಷಗಳಿಂದ ಅವನತಿ ಹೊಂದುತ್ತ ಬರುತ್ತಿದೆ. 2012ರಿಂದ 2014 ರವರೆಗೆ ಇದರ ನಿರ್ದೇಶಕರಾಗಿದ್ದ ರಂಜಿತ್ ಸಿನ್ಹ ಈಗ ಸುಪ್ರಿಂ ಕೋರ್ಟಿನ ಆದೇಶದಂತೆ, ಕಲ್ಲಿದ್ದಲು ಹಗರಣದಲ್ಲಿ ಆಪಾದಿತರೊಂದಿಗೆ ಶಾಮೀಲಾಗಿದ್ದರು ಎಂಬ ಗಂಭೀರ ಆರೋಪದಲ್ಲಿ ತನಿಖೆಗೆ ಒಳಗಾಗಿದ್ದಾರೆ. ಇತರ ಹಲವು ಗಂಭೀರ ಕೇಸುಗಳ ತನಿಖೆಗಳೂ ನಡೆಯುತ್ತಿವೆ.


ಲಂಚ ಮತ್ತು ಭ್ರಷ್ಟಾಚಾರ ಈ ಉನ್ನತ ತನಿಖಾ ಸಂಸ್ಥೆಗಳನ್ನು ಬಾಧಿಸುತ್ತಿದೆ ಎಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತಿದೆ. ಡಿಸೆಂಬರ್ 1999ರಲ್ಲಿ ಜಾರಿ ನಿರ್ದೇಶನಾಲಯ(ಇ.ಡಿ.)ದ ಒಬ್ಬ ಉಪ ನಿರ್ದೇಶಕ ಅಶೋಕ ಕುಮಾರ್ ಅಗರವಾಲಾರನ್ನು ಬಂಧಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆತ ಹಣ ಕೀಳುವ ಮತ್ತು ಬ್ಲಾಕ್ ಮೇಲ್‌ನ ಕೃತ್ಯಗಳಲ್ಲಿ ತೊಡಗಿದ್ದರು, ಇಂತಹ ಕಾರ್ಯಾಚರಣೆಗಳಿಂದ 250 ಕೋಟಿ ರೂ. ಪೇರಿಸಿಕೊಂಡಿದ್ದರು ಎಂಬ ಆರೋಪವಿತ್ತು.

ಸಿಬಿಐನ ಈಗಿನ ಶೋಚನೀಯ ಪರಿಸ್ಥಿತಿಯ ಇನ್ನೊಂದು ಆಯಾಮವೂ ಇದೆ. ಅದೆಂದರೆ, ಅದರ ಕೆಲಸ ಕಾರ್ಯಗಳಲ್ಲಿ ತತ್ಕಾಲೀನ ಕಾರ್ಯಾಂಗದ ರಾಜಕೀಯ ಹಸ್ತಕ್ಷೇಪ. ಯುಪಿಎ ಸರಕಾರದ ಕಾಲದಲ್ಲಿ ಸಿಬಿಐ, ಸರಕಾರದ ಆಶಯಕ್ಕೆ ಅನುಗುಣವಾಗಿ ಕೆಲವು ಪ್ರತಿಪಕ್ಷಗಳ ಮುಖಂಡರ ವಿರುದ್ಧ ಮೊಕದ್ದಮೆಗಳನ್ನು ಆರಂಭಿಸುವ, ಆರೋಪಗಳನ್ನು ನಿರ್ಣಯಿಸುವ ಮತ್ತು ಅದರ ಬೆನ್ನಟ್ಟುವ ಕೃತ್ಯಗಳಿಗೆ ಕುಖ್ಯಾತವಾಯಿತು.

ಬೂರ್ಜ್ವಾ ಪಕ್ಷಗಳು ನಡೆಸುವ ರಾಜ್ಯ ಸರಕಾರಗಳಲ್ಲಿ ಭ್ರಷ್ಟಾಚಾರ ಬಹಳಷ್ಟು ಹರಡಿರುವುದರಿಂದ ಕೇಂದ್ರದಲ್ಲಿ ಆಳುವ ಪಕ್ಷ ಸುಲಭವಾಗಿ ತಮ್ಮ ರಾಜಕೀಯ ವಿರೋಧಿಗಳ ವಿರುದ್ಧ ಭ್ರಷ್ಟಾಚಾರದ ಕೇಸುಗಳನ್ನು ಒಂದು ಅಸ್ತ್ರವಾಗಿ ಬಳಸಿಕೊಳ್ಳಬಹುದಾಗಿದೆ. ಆದ್ದರಿಂದಲೇ ಸುಪ್ರಿಂ ಕೋರ್ಟ್ 2013ರಲ್ಲಿ ಸಿಬಿಐ "ತನ್ನ ದಣಿಯ ದನಿಯಲ್ಲಿ ಮಾತಾಡುವ ಪಂಜರದ ಗಿಣಿ" ಎಂದು ಕರೆದಿತ್ತು.

ಮೋದಿ ಸರಕಾರದ ಅಡಿಯಲ್ಲಿ ಈ ಪಂಜರದ ಗಿಣಿ ಗಟ್ಟಿಯಾಗಿ ಚೀರಲಾರಂಭಿಸಿದೆ. ಸಿಬಿಐ ಮತ್ತು ಇ.ಡಿ. ವಿರೋಧಿಗಳ ಮೇಲೆ ರಾಜಕೀಯ ಮುಯ್ಯಿ ತೀರಿಸಲಿಕ್ಕಾಗಿ ಗುರಿಯಿಡುವ ಉಪಕರಣಗಳಾಗಿ ಬಿಟ್ಟಿವೆ. ವ್ಯಾಪಾರಸ್ಥರನ್ನು ಬೆದರಿಸಿ ತಮ್ಮ ದಾರಿಗೆ ಬರುವಂತೆ ಮಾಡಲು ಕೂಡ ಅವನ್ನು ಬಳಸಲಾಗುತ್ತಿದೆ. ಸಿಬಿಐ ನ ಈ ದುರ್ಬಳಕೆಯೇ ಈ ಸಂಸ್ಥೆಯೊಳಗಿನವರು ವೈಯಕ್ತಿಕ ಸಮೃದ್ಧಿಗಾಗಿ ಅಧಿಕಾರದ ಉರುಪಯೋಗ ಮಾಡಲು ಪ್ರೋತ್ಸಾಹ ನೀಡಿದೆ. ಸಿಬಿಐ ಈಗ ಹಾಕಿರುವ ಎಫ್‌ಐಆರ್ ಈ ಸಂಸ್ಥೆಯ ಒಳಗೇ ತನ್ನದೇ ಅಧಿಕಾರಿ ಇತರರನ್ನು ಬೆದರಿಸಿ ಹಣ ಕೀಳುವ ಕುಕೃತ್ಯ ನಡೆಸುತ್ತಿದ್ದಾನೆ ಎಂದು ಆಪಾದಿಸಿದೆ.

ಮೋದಿ ಸರಕಾರ ಪ್ರಭುತ್ವದ ಎಲ್ಲ ಸಂಸ್ಥೆಗಳನ್ನು ,ಎಲ್ಲ ಸರಕಾರೀ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ಶಿಥಿಲಗೊಳಿಸಿದೆ. ಸಿಬಿಐ ಮೇಲಿನ ಈ ಹೊಚ್ಚ–ಹೊಸ ಪ್ರಹಾರದ ಬಗ್ಗೆ ಅಸಡ್ಡೆ ಮಾಡಬಾರದು. ಅದರ ನಿರ್ದೇಶಕರನ್ನು ತೆಗೆದು ಹಾಕಿರುವುದಕ್ಕೆ ನ್ಯಾಯಾಲಯದಲ್ಲಿ ಸವಾಲು ಹಾಕಬೇಕು. ಅಸ್ಥಾನ ಮತ್ತಿತರರ ಮೇಲೆ ಮೊಕದ್ದಮೆಗಳನ್ನು ಮುಂದುವರೆಸಬೇಕು. ಭ್ರಷ್ಟರನ್ನು ರಕ್ಷಿಸುವ ಮತ್ತು ಸಿಬಿಐನ್ನು ತನ್ನ ರಾಜಕೀಯ ಸಾಧನವಾಗಿ ಮಾಡುವ ಮೋದಿ ಸರಕಾರದ ಪ್ರಯತ್ನಗಳನ್ನು ವಿಫಲಗೊಳಿಸಬೇಕು. ●



ಅಜ್ಜಿ ಹೇಳಿದ ರಫಲಾಸುರನ ಕತೆ

ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಸಿಬಿಐ ನಿರ್ದೇಶಕರ ಮೇಲೆ ರಜಾದ ಮೇಲೆ ಕಳಿಸಿರುವುದು ರಫೆಲ್ ವ್ಯವಹಾರದ ತನಿಖೆಯ ಬಗ್ಗೆ ಯೋಚಿಸುವ ಮುಂಚೆಯೇ ಸಿಬಿಐ ನ ಕತ್ತು ಹಿಸುಕಲಾಗುತ್ತಿದೆಯೇ ಎಂಬ ಬಲವಾದ ಸಂದೇಹವನ್ನು ಹುಟ್ಟಿಸಿದೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್

ಮೋದಿಜೀ!!..... ಉದ್ಯೋಗ ಎಲ್ಲಿದೆ?

ಪ್ರಕಾಶ್ ಕಾರಟ್ ಅನುವಾದ: ಎಂ.ಜಿ. ವೆಂಕಟೇಶ್

ಉದ್ಯೋಗ ಸೃಷ್ಟಿಯ ಬಗ್ಗೆ ಪ್ರಧಾನ ಮಂತ್ರಿ ಮೋದಿಯವರ ಬೊಬ್ಬೆ ಆಧಾರ ರಹಿತವಾಗಿರುವುದು ಸಾಬೀತಾಗಿದೆ. ನಿರುದ್ಯೋಗ ಹೆಚ್ಚುತ್ತಿರುವ ಕಠೋರ ಸತ್ಯ ದಿನನಿತ್ಯ ನಮ್ಮ ಕಣ್ಣ ಮುಂದಿದೆ.

ಇತ್ತೀಚಿಗೆ, ಸೆಪ್ಟಂಬರ್ 17 ರಂದು ರೈಲ್ವೆ ನೇಮಕಾತಿ ಮಂಡಳಿ ನಡೆಸಿದ ಗ್ರೂಪ್ ಡಿ ವರ್ಗದ 62,907 ಖಾಲಿ ಹುದ್ದೆಗಳಿಗಾಗಿ 1.9 ಕೋಟಿ ಅಭ್ಯರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದರು. ಈ ಹುದ್ದೆಗಳ ಗ್ಯಾಂಗ್‌ಮೆನ್, ಸಹಾಯಕರು ರೈಲ್ವೆ ಇಲಾಖೆಯ ಮೆಕಾನಿಕಲ್ ಮತ್ತು ಎಲೆಕ್ಟ್ರಿಕಲ್ ವಿಭಾಗಗಳಲ್ಲಿ ಲಭ್ಯವಿತ್ತು. ಪರೀಕ್ಷೆ ತೆಗೆದುಕೊಂಡವರಲ್ಲಿ ಬಹುತೇಕರು ಸ್ನಾತಕೋತ್ತರ ಪದವಿ ಪಡೆದವರು.

ಈ ಮೊದಲು ಉತ್ತರ ಪ್ರದೇಶದಲ್ಲಿ 400 ಗ್ರೂಪ್ ಡಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದವರ ಸಂಖ್ಯೆ 23 ಲಕ್ಷ. ಅವರಲ್ಲಿ 50,000 ಪದವಿಧರರಿದ್ದರು. ಪಶ್ಚಿಮ ಬಂಗಾಳದಲ್ಲಿ 2017 ರಲ್ಲಿ 6,000 ಗ್ರೂಪ್ ಡಿ ಹುದ್ದೆಗಳಿಗೆ 25 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಅದರಲ್ಲಿಯೂ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆದಿದ್ದವರೇ ಆಗಿದ್ದರು. ಮುಂಬೈನಲ್ಲಿ 1137 ಪೋಲಿಸ್ ಹುದ್ದೆಗಳಿಗೆ 2 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಇದಕ್ಕೆ ಬೇಕಿದ್ದ ಕನಿಷ್ಠ ವಿದ್ಯಾಭ್ಯಾಸ 12ನೇ ತರಗತಿ ಆಗಿದ್ದು, ಬರೆದಿದ್ದವರ ಪೈಕಿ 543 ಸ್ನಾತಕೋತ್ತರ ಪದವಿಧರರು ಮತ್ತು 425 ಇಂಜಿನಿಯರಿಂಗ್ ಪದವೀಧರರು.

ಇಲ್ಲಿ ಸ್ಪಷ್ಟವಾಗಿ ಕಣ್ಣಿಗೆ ರಾಚುವುದು ಎಂದರೆ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಹೆಚ್ಚಿರುವುದು ಮತ್ತು ಅದರಲ್ಲಿ ಹೆಚ್ಚಿನವರ ವಿದ್ಯಾಭ್ಯಾಸ ಕನಿಷ್ಠ ಅರ್ಹತೆಗಿಂತ ಹೆಚ್ಚಿರುವುದು. ನಿರುದ್ಯೋಗಿ ವಿದ್ಯಾವಂತರ ಸಂಖ್ಯೆ ಹೆಚ್ಚಾಗಿರುವುದು ಇದರಿಂದ ಕಾಣುತ್ತದೆ.

ಈ ವಿಷಯವನ್ನು ಅಜೀಂ ಪ್ರೇಮ್ ಜಿ ವಿಶ್ವವಿದ್ಯಾನಿಲಯ ನಡೆಸಿರುವ ಅಧ್ಯಯನ "ಭಾರತದ ಕೆಲಸದ ಸ್ಥಿತಿಗತಿಗಳು" ಸ್ಪಷ್ಟಪಡಿಸುತ್ತದೆ. ಈ ಅಧ್ಯಯನದ ಪ್ರಕಾರ ಸ್ನಾತಕ ಪದವಿ ಪಡೆದವರ ನಿರುದ್ಯೋಗ ಸಂಖ್ಯೆ ರಾಷ್ಟ್ರೀಯ ನಿರುದ್ಯೋಗ ಪ್ರಮಾಣದ ಮೂರು ಪಟ್ಟು ಇರುತ್ತದೆ. ಕಳೆದ 20 ವರ್ಷಗಳಲ್ಲಿ ಈಗಿರುವ ಹೆಚ್ಚಿನ ವಿದ್ಯಾಭ್ಯಾಸ ಪಡೆದಿರುವ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿದೆ. ಒಟ್ಟು 2.3 ಕೋಟಿ ನಿರುದ್ಯೋಗಿಗಳ ಪೈಕಿ 90 ಲಕ್ಷ ಸ್ನಾತಕ ಪದವೀಧರರು ಅಥವಾ ಹೆಚ್ಚಿನ ಮಟ್ಟದ ವಿದ್ಯಾಭ್ಯಾಸ ಪಡೆದಿರುವವರಾಗಿರುತ್ತಾರೆ.

ಉದ್ಯೋಗ ಆಕಾಂಕ್ಷಿಗಳು ಸರ್ಕಾರಿ ನೌಕರಿಗಳಿಗಾಗಿ ಆಸಕ್ತಿ ತೋರುತ್ತಿರುವುದು ಗಮನಿಸಬಹುದಾದ ವಿಷಯ. ಸಿ.ಎಸ್.ಡಿ.ಎಸ್. (ಅಭಿವೃದ್ಧಿ ಹೊಂದುತ್ತಿರುವ ಸಮಾಜಗಳ ಅಧ್ಯಯನ ಕೇಂದ್ರ) ನಡೆಸಿದ ರಾಷ್ಟ್ರೀಯ ಸರ್ವೆಯಂತೆ 2016 ರಲ್ಲಿ ಸರ್ಕಾರಿ ಹುದ್ದೆಗಳಿಗೆ 62% ಇದ್ದ ಆಸಕ್ತಿ 2017 ರಲ್ಲಿ 65% ಆಗಿರುತ್ತದೆ. ಇದಕ್ಕೆ ಕಾರಣ ಅನೌಪಚಾರಿಕ ವಲಯಗಳಲ್ಲಿರುವ ಉದ್ಯೋಗಗಳಿಗೆ ರಕ್ಷಣೆ ಇರದಿರುವುದು. ಕಡಿಮೆ ಸಂಬಳ ಮತ್ತು ಕಡಿಮೆ ದರ್ಜೆ ಕೆಲಸ. ಇದರಿಂದಾಗಿ ಸ್ನಾತಕೋತ್ತರ, ಇಂಜಿನಿಯರಿಂಗ್ ಪದವೀಧರರು ಸರ್ಕಾರದಲ್ಲಿ ಗ್ರೂಪ್ IV ಹುದ್ದೆಗಳಿಗಾಗಿ ಅರ್ಜಿ ಸಲ್ಲಿಸುತ್ತಿದ್ದಾರೆ. ಕನಿಷ್ಠ ಉದ್ಯೋಗ ಖಾತ್ರಿಯಾಗಿರುವುದು ಮತ್ತು ಸಾಮಾಜಿಕ ಸುರಕ್ಷಾ ಸೌಲಭ್ಯ ಸಿಗುವುದು ಅವರ ಆಸೆಯಾಗಿದೆ.

ಮೋದಿ ಸರ್ಕಾರದ ಆಶ್ವಾಸನೆಯಂತೆ ಹೊಸ ಉದ್ಯೋಗ ಸೃಷ್ಟಿಯಾಗುವುದಿರಲಿ, ಇದ್ದ ಉದ್ಯೋಗಗಳು ಈ ಸರ್ಕಾರದ ನೀತಿಯಿಂದ ನಾಶವಾಗಿದೆ. ಅದರಲ್ಲೂ ಮುಖ್ಯವಾಗಿ ನವೆಂಬರ್ 2016ರ ರೂ. 500, ರೂ. 1000, ಅನಾಣ್ಯೀಕರಣದಿಂದ ಉಂಟಾಗಿದೆ.



ಹಾವೇರಿಯಲ್ಲಿ ಡಿವೈಎಫ್ಐನಿಂದ "ನನ್ನ ಉದ್ಯೋಗ ಎಲ್ಲಿ" ಸಹಿ ಸಂಗ್ರಹ ಮಾಡುತ್ತಿರುವುದು

ಉದ್ಯೋಗ : ಕೆಲವು ಅಂಕೆ-ಸಂಖ್ಯೆಗಳು

ಈಗಿನ ನಿರುದ್ಯೋಗ ದರ	7.1%
ಪ್ರತಿ ವರ್ಷ ಉದ್ಯೋಗಾಂಕ್ಷಿ ಪಟ್ಟಿಗೆ ಸೇರುವವರು	2.46 ಕೋಟಿ
ಪದವಿಧರರಲ್ಲಿ ನಿರುದ್ಯೋಗ ಪ್ರಮಾಣ*	58.3%
ಮಾಸ್ಟರ್ಸ್ ಪದವಿಧರರಲ್ಲಿ ನಿರುದ್ಯೋಗ ಪ್ರಮಾಣ*	62.4%
ತಮ್ಮ ಅರ್ಹತೆಗೆ ಅನುಗುಣವಾದ ಕೆಲಸ ಸಿಗದ ಇಂಜಿನೀಯರ್ ಪದವಿಧರರು#	60%
ಅತಿ ಹೆಚ್ಚು ಶಿಕ್ಷಣ ಪಡೆದವರಲ್ಲಿ ನಿರುದ್ಯೋಗ ದರ@	16%
ಉದ್ಯೋಗ ಮತ್ತು ಜಿ.ಡಿ.ಪಿ. ಬೆಳವಣಿಗೆಗಳ ಅನುಪಾತ	0.1%
ಉದ್ಯೋಗದಲ್ಲಿ ಮಹಿಳೆಯರ ಪಾಲುಗೊಳ್ಳುವಿಕೆಯ ಮಟ್ಟ (ಜಗತ್ತಿನಲ್ಲಿ ಸ್ಥಾನ)	130/142

* CMIE ಅಂಕೆ-ಸಂಖ್ಯೆ #AICTE ಸಮೀಕ್ಷೆ @ ಅಜೀಜ್ ಪ್ರೇಂಜಿ ವಿ.ವಿ. ಅಧ್ಯಯನ

ಎಲ್ಲ ಕಡೆಗಳಲ್ಲೂ ಉಲ್ಲೇಖಿಸಲಾಗುತ್ತಿರುವ "ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ" ಅಧ್ಯಯನದ ಪ್ರಕಾರ ಅನಾಣ್ಯೀಕರಣದಿಂದ ನಷ್ಟವಾಗಿರುವ ಉದ್ಯೋಗದ ಸಂಖ್ಯೆ 35 ಲಕ್ಷ. ಇದೇ ವರದಿಯಂತೆ ಮಹಿಳೆಯರು ಉದ್ಯೋಗದಲ್ಲಿ ಭಾಗವಹಿಸುವ ಸಂಖ್ಯೆ ಈ ಕಾರಣಕ್ಕಾಗಿಯೇ ಕಡಿಮೆಯಾಗಿರುವುದನ್ನು ತೋರಿಸಿದೆ. (ಭಾರತವು ವಿಶ್ವದಲ್ಲೆ ಮಹಿಳಾ ಉದ್ಯೋಗ ಭಾಗವಹಿಸುವಿಕೆಯಲ್ಲಿ ಅತ್ಯಂತ ಕೆಳ ಮಟ್ಟದಲ್ಲಿದೆ.)

ನಾಲ್ಕುವರೆ ವರ್ಷಗಳ ಮೋದಿ ಸರ್ಕಾರದ ಉದ್ಯೋಗದ ಅಂಕಿ ಅಂಶಗಳ ಸಾಬೀತುಪಡಿಸುವ ಅಂಶವೆಂದರೆ – ನವ ಆರ್ಥಿಕವಾದದ ಬೆಳವಣಿಗೆ ಉದ್ಯೋಗ ಸೃಷ್ಟಿಸುವುದಿಲ್ಲ. ಎಪ್ರಿಲ್ ರಿಂದ ಜೂನ್ 2018 ಅವಧಿಯಲ್ಲಿ 8.2% ಜಿಡಿಪಿ ಹೆಚ್ಚಳವನ್ನು ಸರ್ಕಾರದ ಅಂಕಿ ಅಂಶ ತಿಳಿಸಿದರೂ ಈ ಅವಧಿಯಲ್ಲಿ ಉದ್ಯೋಗ 1% ರಷ್ಟು ಇಳಿಮುಖವಾಗಿದೆ.

ಜಿಡಿಪಿ ಹೆಚ್ಚಳ ಅಪ್ಯಾಯಮಾನವಾಗಿದ್ದರೂ ಆಗಸ್ಟ್ 2018 ರಲ್ಲಿ ನಿರುದ್ಯೋಗಿಗಳ ಸಂಖ್ಯೆಯಲ್ಲಿ 6.4% ರಷ್ಟು ಹೆಚ್ಚಿದೆ. ಈ ಮಟ್ಟ ಜುಲೈ 2017ರಲ್ಲಿ 5.6% ರಷ್ಟಿದ್ದರೆ ಆಗಸ್ಟ್ 2017 ರಲ್ಲಿ 4.1% ರಷ್ಟಿತ್ತು. ಸಾಕಷ್ಟು ಉದ್ಯೋಗ ಸೃಷ್ಟಿಸುವುದರಲ್ಲಿ ಮೋದಿ ಸರ್ಕಾರ ವಿಫಲತೆ ಕಾಣುತ್ತಿದ್ದು ಮತ್ತು ಪ್ರತಿ ವರ್ಷ 1.2 ಕೋಟಿ ನಿರುದ್ಯೋಗಿಗಳು ಸೇರ್ಪಡೆಯಾಗುತ್ತಿದ್ದಾರೆ.

ಮೋದಿ ಸರ್ಕಾರದ ನೀತಿಗಳಿಂದಾಗಿ ಕೃಷಿ ಕ್ಷೇತ್ರದ ಬಿಕ್ಕಟ್ಟು ಮುಂದುವರೆದಿದ್ದು ಗ್ರಾಮೀಣ ಕ್ಷೇತ್ರದಲ್ಲಿ ನಿರುದ್ಯೋಗ ಹೆಚ್ಚಾಗಿದೆ. ನಮ್ಮ ದೇಶದ ದುಡಿಯುವವರ ಪೈಕಿ 50% ಕೃಷಿ ಕ್ಷೇತ್ರದಲ್ಲಿದ್ದಾರೆ. ಖಾಸಗೀಕರಣ ಮತ್ತು ಎಲ್ಲ ರೀತಿಯ ಸೇವೆಗಳನ್ನು ಮಾರುಕಟ್ಟೆ ಶಕ್ತಿಗಳಿಗೆ ತೆರೆದಿರುವುದರಿಂದ ಬಹುತೇಕ ಉದ್ಯೋಗ ಸೃಷ್ಟಿಯಾಗುತ್ತಿರುವುದು ಅನೌಪಚಾರಿಕ ವಲಯಗಳಲ್ಲಿ ಆಗಿದೆ. ಇಲ್ಲಿ ಶೋಷಣೆ ಪ್ರಮಾಣ ಅತ್ಯಂತ ಹೆಚ್ಚಾಗಿದ್ದು ಕನಿಷ್ಠ ವೇತನ, ಉದ್ಯೋಗ ಖಾತ್ರಿ ಮತ್ತು ಸಾಮಾಜಿಕ ಸುರಕ್ಷಾ ಸೌಲಭ್ಯ ಇಲ್ಲ.

ಬೇರೆ ಯಾವುದೇ ಉದ್ಯೋಗ ಸಿಗದಿದ್ದವರಿಗೆ 'ಸ್ವಂತ ಉದ್ಯೋಗ' ಒಂದೇ ಇರುವ ಮಾರ್ಗವೆಂಬಂತೆ ಬಿಂಬಿಸಲಾಗುತ್ತಿದೆ. ಇಂತಹ ಜನ ಸಮೂಹಗಳಿಗೆ ಪಕೋಡಾ ಮಾರಬಹುದೆಂಬ ಸಾಧ್ಯತೆಯನ್ನು ಮೋದಿ ಸರ್ಕಾರ ತೋರಿಸುತ್ತಿದೆ.

ಭಾರತ ಯುವಜನತೆಗೆ ಯೋಗ್ಯ ರೀತಿಯ ಉದ್ಯೋಗಗಳು ಬೆಳೆಯುತ್ತಿರುವ ದುಡಿಯ ಶಕ್ತಿಗಳಿಗೆ ಒದಗಿಸುವ ಇಚ್ಛೆಯಿದ್ದರೆ ಮಾಡಬೇಕಿರುವುದು ನವ ಆರ್ಥಿಕ ಉದಾರವಾದಿ ನೀತಿಗಳನ್ನು ಬಿಡುವುದು. ಇದರ ಜಾಗದಲ್ಲಿ ಹೊಸ ಬದಲಿ ನೀತಿಯನ್ನು ಜಾರಿಗೊಳಿಸಿ ಅದರಲ್ಲಿ ಉದ್ಯೋಗ ಸೃಷ್ಟಿಯೇ ಕೇಂದ್ರ ಸ್ಥಾನದಲ್ಲಿ ಇಡುವುದಾಗಿದೆ. ●




ಉದ್ಯೋಗ ಮತ್ತು ಮೋದಿ ಸರಕಾರ : ಕೆಲವು ಅಂಕೆ-ಸಂಖ್ಯೆಗಳು

ಪ್ರತಿ ವರ್ಷ ಉದ್ಯೋಗ ಸೃಷ್ಟಿ ಗುರಿ (ಮೋದಿ ಆಶ್ವಾಸನೆ)	2 ಕೋಟಿ
ವಾಸ್ತವಿಕ ಉದ್ಯೋಗ ಸೃಷ್ಟಿ 2015 (CMIE ಅಂಕೆ-ಸಂಖ್ಯೆ)	1.55 ಲಕ್ಷ
2016 (.. ..".. ..)	2.33 ಲಕ್ಷ
2017 (.. ..".. ..)	4.16 ಲಕ್ಷ
ಉದ್ಯೋಗ ನಾಶ : ಜ.-ಏ. 2017 (ಅನಾಣ್ಯೀಕರಣದಿಂದ) – (CMIE ಅಂಕೆ-ಸಂಖ್ಯೆ)	15 ಲಕ್ಷ
ರೈಲ್ವೇ ಇಲಾಖೆಯಲ್ಲಿ ಕಾಂಟ್ರಾಕ್ಟ್ ಉದ್ಯೋಗಿಗಳ ಸಂಖ್ಯೆ	4 ಲಕ್ಷ
ರೈಲ್ವೇ ಇಲಾಖೆಯಲ್ಲಿ ಖಾಲಿ ಹುದ್ದೆಗಳ ಸಂಖ್ಯೆ	3 ಲಕ್ಷ
ಯಾವುದೇ ಸದಸ್ಯರು ಆದಾಯ ತರುವ ಕೆಲಸವಿಲ್ಲದ ಕುಟುಂಬಗಳ ಸಂಖ್ಯೆ (NSSO ಸಮೀಕ್ಷೆ)	1.25 ಕೋಟಿ
ಒಟ್ಟು ಉತ್ಪನ್ನದಲ್ಲಿ ಕೈಗಾರಿಕಾ ಉತ್ಪನ್ನಗಳ % (2020) (ಮೇಕ್-ಇನ್-ಇಂಡಿಯಾ) – ಯೋಜನಾ ಗುರಿ	25 %
ಕೈಗಾರಿಕಾ ಉತ್ಪನ್ನಗಳ % – ಸಾಧಿಸಿದ್ದು	1.6 %

ನನ್ನ ಉದ್ಯೋಗ ಎಲ್ಲಿ?

DYFI ದೆಹಲಿ ಚಲೋ ಮತ್ತು ರ್‍ಯಾಲಿ ನವೆಂಬರ್ 3 ರಂದು



ಮೋದಿ ಸರಕಾರ ಯಾವ ಆಶ್ವಾಸನೆಗಳನ್ನೂ ಈಡೇರಿಸಲಿಲ್ಲ. ಆದರೆ ಅವುಗಳಲ್ಲಿ ಮುಖ್ಯವಾದದ್ದು ಪ್ರತಿ ವರ್ಷ 2 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವಂತಹದ್ದು. ಭಾರತದ ಯುವಜನತೆಗೆ ಈ ಸುಳ್ಳು ಆಶ್ವಾಸನೆ ಕೊಟ್ಟು ಚುನಾಯಿತವಾದ ಮೋದಿ ಸರಕಾರದ ವಿರುದ್ಧ ಯುವಜನರ ಆಕ್ರೋಶ ಈಗ ಮುಗಿಲು ಮುಟ್ಟಿದೆ. ಯುವಜನತೆಯ ಈ ಆಕ್ರೋಶಕ್ಕೆ ದನಿ ಕೊಡಲು ಭಾರತದ ಯುವಜನರ ಅತಿ ದೊಡ್ಡ ಸಂಘಟನೆಯಾದ ಡಿ.ವೈ.ಎಫ್.ಐ. ನಿರ್ಧರಿಸಿದೆ. ಸುಮಾರು 3 ತಿಂಗಳುಗಳ ಕಾಲ ಸ್ಥಳೀಯ ಹಾಗೂ ರಾಜ್ಯ ಮಟ್ಟದಲ್ಲಿ ಉದ್ಯೋಗದ ಸುತ್ತ ಯುವಜನರ ಹಕ್ಕೊತ್ತಾಯಗಳ ಸುತ್ತ ಸಹಿ ಸಂಗ್ರಹ ಚಳುವಳಿ, ಪ್ರತಿಭಟನೆಗಳು ಪ್ರದರ್ಶನಗಳ ನಂತರ ಸಾವಿರಾರು ಯುವಜನರು ದೆಹಲಿಗೆ ಬಂದು ನವೆಂಬರ್ 3 ರಂದು ಅಲ್ಲಿ ಬೃಹತ್ ರ್‍ಯಾಲಿ ನಡೆಯಲಿದೆ.

ಡಿ.ವೈ.ಎಫ್.ಐ. 'ನನ್ನ ಉದ್ಯೋಗ ಎಲ್ಲಿ?' ಸುತ್ತ ಮುಂದಿಟ್ಟಿರುವ 6 ಪ್ರಮುಖ ಹಕ್ಕೊತ್ತಾಯಗಳು ಇಲ್ಲಿವೆ:

1. ಕೇಂದ್ರ ಮತ್ತು ರಾಜ್ಯ ಸರಕಾರಗಳ ಎಲ್ಲಾ ಇಲಾಖೆಗಳ ಸೂಚಿತ ಖಾಲಿ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು
2. ಕೇಂದ್ರ, ರಾಜ್ಯ ಸರಕಾರಗಳ ಹಾಗೂ ಸಾರ್ವಜನಿಕ ಉದ್ದಿಮೆಗಳಲ್ಲಿ ಉದ್ಯೋಗಗಳನ್ನು ಭರ್ತಿ ಮಾಡುವುದರ ಮೇಲೆ ಇರುವ ನಿಷೇಧವನ್ನು ತಕ್ಷಣ ತೆಗೆದು ಹಾಕಬೇಕು.
3. ಶಾಶ್ವತ ಉದ್ಯೋಗಗಳನ್ನು ಹೊರ ಗುತ್ತಿಗೆ, ಕಾಂಟ್ರಾಕ್ಟ್ ಮತ್ತು ನಿವೃತ್ತ ಉದ್ಯೋಗಿಗಳ ಮೂಲಕ ಭರ್ತಿ ಮಾಡುವುದನ್ನು ನಿಲ್ಲಿಸಬೇಕು.
4. ಉದ್ಯೋಗ ವಿನಿಮಯ ಕೇಂದ್ರಗಳನ್ನು ಪುನರ್ಸಂಘಟಿಸಬೇಕು, ಆಧುನೀಕರಿಸಬೇಕು. ಖಾಸಗಿ ಕ್ಷೇತ್ರದ ಕಂಪನಿಗಳೂ ಸಹ ತಮ್ಮ ಖಾಲಿ ಇರುವ ಹುದ್ದೆಗಳ ಬಗ್ಗೆ ಉದ್ಯೋಗ ವಿನಿಮಯ ಕೇಂದ್ರಗಳಿಗೆ ಮಾಹಿತಿ ಕೊಡುವುದು ಕಡ್ಡಾಯ ಮಾಡಬೇಕು.
5. ನಗರ ಉದ್ಯೋಗ ಖಾತ್ರಿ ಸ್ಕೀಂ ಆರಂಭಿಸಬೇಕು. ಯುವಜನರಿಗೆ ಅವರ ಶೈಕ್ಷಣಿಕ ಅರ್ಹತೆಗೆ ತಕ್ಕುದಾದ ಉದ್ಯೋಗಗಳನ್ನು ಕೊಡಬೇಕು.
6. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ರಿಜಿಸ್ಟರ್ ಮಾಡಿದ ನಿರುದ್ಯೋಗಿಗಳಿಗೆ ರೂ. 2000 ನಿರುದ್ಯೋಗ ಭತ್ಯೆ ಕೊಡಬೇಕು.

2ನೇ 'ಅಯೋಧ್ಯಾಕಾಂಡ'ದ ಹುನ್ನಾರ ಮತ್ತು 2ನೇ 'ವಿಮೋಚನಾ ಸಮರಂ' ಪ್ರಮಾದದ ನಡುವೆ



ಕೇರಳದೊಳಗೆ ಕಾಲಿಡಲು ಏನೆಲ್ಲ ಕಸರತ್ತು ನಡೆಸಿದರೂ ಸಾಧ್ಯವಾಗದ್ದನ್ನು ಕಂಡ ಕೇಸರಿ ಪಡೆಗಳಿಗೆ ಶಬರಿಮಲೆ ಇನ್ನೊಂದು ಅಯೋಧ್ಯೆಯಾಗಿ ಕಂಡರೆ, ತನ್ನ ಜನ–ವಿರೋಧಿ ಕಾರ್ಪೊರೇಟ್–ಪರ ಧೋರಣೆಗಳಿಂದಾಗಿ ಜನಗಳ ನಡುವೆ ನೆಲೆ ಕಳಕೊಳ್ಳುತ್ತಿರುವ ಕಾಂಗ್ರೆಸಿಗೆ ತನ್ನ ಇತಿಹಾಸದ ಪ್ರಗತಿಶೀಲ ಅಂಶಗಳೆಲ್ಲವೂ ಮರೆತು ಹೋಗಿ, ಮತ್ತೆ ನೆಲೆ ಗಳಿಸಲು ಅದರ ಇತಿಹಾಸದ ಒಂದು ಪ್ರಮುಖ ಕಪ್ಪುಚುಕ್ಕೆಯಾದ 'ವಿಮೋಚನಾ ಸಮರಂ' ಮಾತ್ರ ನೆನಪಿಗೆ ಬಂದಂತೆ ಕಾಣುತ್ತದೆ.

ಇತ್ತೀಚೆಗೆ ಮಹಾ ಪ್ರಕೃತಿ ವಿಕೋಪದ ಎದುರು ಅಭೂಪತಪೂರ್ವ ಐಕ್ಯತೆಯನ್ನು, ತ್ಯಾಗಮನೋಭಾವವನ್ನು ಪ್ರದರ್ಶಿಸಿದ ಕೇರಳ ಈಗ ಅದನ್ನು ಒಡೆಯುವ ದುಷ್ಟ ಪ್ರಯತ್ನಗಳನ್ನು ಕಾಣುತ್ತಿದೆ.'ಶಬರಿಮಲೆ ಆಳುವ ವರ್ಗಗಳ ಸಮಯ ಸಾಧಕತೆಯನ್ನು ಮತ್ತೊಮ್ಮೆ ಬಿಚ್ಚಿಟ್ಟಿದೆ. ಅಲ್ಲಿನ ಪ್ರಸಿದ್ಧ ಅಯ್ಯಪ್ಪ ಮಂದಿರಕ್ಕೆ ಎಲ್ಲ ವಯಸ್ಸಿನ ಮಹಿಳೆಯರ ಪ್ರವೇಶಕ್ಕೆ ಅವಕಾಶ ನೀಡಿರುವ ಸುಪ್ರಿಂ ಕೋರ್ಟ್ ತೀರ್ಪನ್ನು ಮೊದಲಿಗೆ ಸ್ವಾಗತಿಸಿದ ಬಿಜೆಪಿ–ಆರೆಸ್ಸೆಸ್ ಮತ್ತು ಕಾಂಗ್ರೆಸ್ ತಿಪ್ಪರಲಾಗ ಹಾಕಿ ಪ್ರಸಿದ್ಧ ಶಬರಿಮಲೆಯನ್ನು ಸಂಕುಚಿತ ರಾಜಕೀಯ ಲಾಭಕ್ಕಾಗಿ ಕೋಮುಧ್ರುವೀಕರಣದ ರಣರಂಗದ ಮಟ್ಟಿಗೆ ಇಳಿಸಿರುವುದು ಈಗ ಇಡೀ ದೇಶದ ಮುಂದಿದೆ.

ಕೇರಳದೊಳಗೆ ಕಾಲಿಡಲು ಏನೆಲ್ಲ ಕಸರತ್ತು ನಡೆಸಿದರೂ ಸಾಧ್ಯವಾಗದ್ದನ್ನು ಕಂಡ ಕೇಸರಿ ಪಡೆಗಳಿಗೆ ಶಬರಿಮಲೆ ಇನ್ನೊಂದು ಅಯೋಧ್ಯೆಯಾಗಿ ಕಂಡರೆ, ತನ್ನ ಜನ–ವಿರೋಧಿ ಕಾರ್ಪೊರೇಟ್–ಪರ ಧೋರಣೆಗಳಿಂದಾಗಿ ಜನಗಳ ನಡುವೆ ನೆಲೆ ಕಳಕೊಳ್ಳುತ್ತಿರುವ ಕಾಂಗ್ರೆಸಿಗೆ ತನ್ನ ಇತಿಹಾಸದ ಪ್ರಗತಿಶೀಲ ಅಂಶಗಳೆಲ್ಲವೂ ಮರೆತು ಹೋಗಿ, ಮತ್ತೆ ನೆಲೆ ಗಳಿಸಲು ಅದರ ಇತಿಹಾಸದ ಒಂದು ಪ್ರಮುಖ ಕಪ್ಪುಚುಕ್ಕೆಯಾದ 'ವಿಮೋಚನಾ ಸಮರಂ' ಮಾತ್ರ ನೆನಪಿಗೆ ಬಂದಂತೆ ಕಾಣುತ್ತದೆ.

ಸುಪ್ರಿಂ ಕೋರ್ಟ್ ತೀರ್ಪಿನ ನಂತರ ಮೊದಲ ಬಾರಿಗೆ ಅಕ್ಟೋಬರ್ 17 ರಂದು ಐದು ದಿನಗಳ ಅವಧಿಗೆ ದೇವಸ್ಥಾನದ ಬಾಗಿಲು ತೆರೆದಾಗ ಈ ಎರಡೂ ಶಕ್ತಿಗಳ ನಿಜರೂಪವೂ ಇಡೀ ದೇಶದ ಮುಂದೆ ತೆರೆಯಿತು. ಸಂಘ ಪರಿವಾರ ಇದನ್ನು ಇನ್ನೊಂದು ಅಯೋಧ್ಯೆಯಾಗಿ ಮಾಡಲು ಯೋಜನೆ ತಯಾರಿಸಿತ್ತು ಎನ್ನುತ್ತಾರೆ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್. ಆದರೆ ಎಲ್‌ಡಿಎಫ್ ಸರಕಾರ ಯಾವ ಭಕ್ತರನ್ನೂ ತಡೆಯಲಿಲ್ಲ, ಬದಲಿಗೆ, ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಬದ್ಧವಾಗಿರುವುದರಿಂದ ದರ್ಶನಾರ್ಥಿಗಳಿಗೆ ಎಲ್ಲ ಬೆಂಬಲವನ್ನೂ ಕೊಡುವ ಸಂವಿಧಾನಿಕ ಹೊಣೆ ತಮ್ಮ ಮೇಲಿತ್ತು ಎಂದಿದ್ದಾರೆ.

ಶಬರಿಮಲೆ ಒಂದು ಧಾರ್ಮಿಕ ಕ್ಷೇತ್ರ. ಅಲ್ಲಿನ ಶಾಂತಿ ಮತ್ತು ಪ್ರಶಾಂತತೆಯನ್ನು ಕಾಪಾಡಿಕೊಳ್ಳಬೇಕಾಗಿತ್ತು. ಆದರೆ ಸಂಘ ಪರಿವಾರ ಅದನ್ನು ಒಂದು ಕಿತ್ತಾಟದ ವಲಯವನ್ನಾಗಿ ಪರಿವರ್ತಿಸಿತು. ದರ್ಶನಾರ್ಥಿಗಳು ವಾಹನಗಳಿಂದ ಇಳಿದು ನಡೆದು ಹೋಗುವ ದಾರಿಯುದ್ದಕ್ಕೂ ಗುಂಪುಗುಂಪಾಗಿ ಹಿಂಸಾಚಾರದಲ್ಲಿ ತೊಡಗಿದರು. 10–12 ಮಹಿಳಾ ದರ್ಶನಾರ್ಥಿಗಳನ್ನು ಬಲವಂತದಿಂದ ತಡೆದರು. ಎಂದಿನ ತಮ್ಮ ಸುಳ್ಳು ಸುದ್ದಿಗಳ ಅಸ್ತ್ರಗಳನ್ನೂ ಬಳಸಿದರು. ಪತ್ರಕರ್ತರ ಮೇಲೂ ಕೈಮಾಡಿದರು.

ಕೇಸರಿ ಪಡೆಗಳು ಇಲ್ಲಿ ದಾಂಧಲೆಗಳಲ್ಲಿ ತೊಡಗಿದ್ದಾಗ ದೂರದ ನಾಗಪುರದಲ್ಲಿ ಅವರ ಮುಖ್ಯಸ್ಥರು ತಮ್ಮ ಸಾಂಪ್ರದಾಯಿಕ ವಿಜಯದಶಮಿ ಭಾಷಣದಲ್ಲಿ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಲು ಕಾನೂನು ತರಬೇಕು ಎಂದು ಸರಕಾರದಲ್ಲಿರುವ ತಮ್ಮ ಶಿಷ್ಯರುಗಳಿಗೆ ತಾಕೀತು ಮಾಡುತ್ತ ಶಬರಿಮಲೆ ವಿವಾದವನ್ನು ಹೊಕ್ಕರು.

ಇತ್ತ ಅವರ ಪರಿವಾರದವರು ಭಕ್ತರ ನಡುವೆಯೇ ಅಶಾಂತಿ ಹರಡಿಸುತ್ತಿದ್ದಾಗಲೇ ಅವರು "ಕಾನೂನಿನ ತೀರ್ಪು ಶಾಂತಿ, ಸ್ಥಿರತೆ ಮತ್ತು ಸಮಾನತೆಯ ಬದಲು ಅಸಂತುಷ್ಟಿ, ಗಲಭೆ ಮತ್ತು ವಿಭಜಕತೆಯನ್ನು ಉಂಟು ಮಾಡಿದೆ" ಎಂದು ಹೇಳುತ್ತಿದ್ದರು. ಏಕೆ ಕೇವಲ ಹಿಂದೂ ಸಮಾಜವೇ ತನ್ನ ನಂಬಿಕೆಗಳ ಮೇಲೆ ಇಂತಹ ಪ್ರಹಾರಗಳನ್ನು ಅನುಭವಿಸುತ್ತಿದೆ, ಇದೇ ಅಸಂತುಷ್ಟಿಗೆ ಕಾರಣ ಎಂಬ ವಿಭಜನಕಾರೀ ಮಾತುಗಳನ್ನು ಆಡುತ್ತಿದ್ದರು.

ಒಬ್ಬ ಪತ್ರಕರ್ತರು ಹೇಳಿರುವಂತೆ "ಸರಳ ಮಾತುಗಳಲ್ಲಿ ಹೇಳುವುದಾದರೆ, ಒಂದು ಜನಜಂಗುಳಿ ಕೇಸರಿ ಬಾವುಟ ಎತ್ತಿದರೆ ಅವರ ಬೇಡಿಕೆಗಳನ್ನು ನೀವು ಒಪ್ಪಲೇಬೇಕು. ಇಲ್ಲವಾದರೆ, ಅಸಂತುಷ್ಟಿ, ಗಲಭೆ ಉಂಟಾಗುತ್ತದೆ. ಅವರ ಪ್ರಕಾರ ಕಾನೂನಿನ ತೀರ್ಪಿನಿಂದ ಅಸಂತುಷ್ಟಿ, ಗಲಭೆ, ವಿಭಜಕತೆ ಉಂಟಾಗಿದೆ .ಅಂದರೆ ಅವರ ಪ್ರಕಾರ ಶಬರಿಮಲೆಯಲ್ಲಿ ಮತ್ತು ಕೇರಳದ ಇತರೆಡೆಗಳಲ್ಲಿ ಅವರ ಪರಿವಾರ ನಡೆಸುತ್ತಿರುವ ಧಾಂಧಲೆ, ಹಿಂಸಾಚಾರಕ್ಕೆ ದೇಶದ

ಪುಟ 10 ನೋಡಿ

ಕೆಲವು ಸಂಪ್ರದಾಯಗಳು ಇರುವುದು ಮುರಿಯುವದಕ್ಕಾಗಿಯೇ ಎಂದು ನಮ್ಮ ನವೋತ್ಥಾನ ನೇತಾರರು ನಮಗೆ ಕಲಿಸಿ ಕೊಟ್ಟಿದ್ದಾರೆ"

ಶಬರಿಮಲೆ ದೇವಸ್ಥಾನದ ಬಾಗಿಲು ತೆರೆಯುವ ಹಿಂದಿನ ದಿನ, ಅಕ್ಟೋಬರ್ 16 ರಂದು ತಿರುವನಂತಪುರದಲ್ಲಿ ಒಂದು ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕೇರಳದ 'ನವೋತ್ಥಾನ'(ನವೋದಯ, ರಿನೆಸಾನ್ಸ್) ಆಂದೋಲನದ ಬಗ್ಗೆ ದೀರ್ಘವಾಗಿ ಮಾತಾಡಿದರು.

ಇದು ಕೇರಳದಲ್ಲಿ ಪರಿವರ್ತನೆ ತಂದ ಆಂದೋಲನ, ಜಾತ್ಯತೀತತೆಗೆ ಮತ್ತು ಜಾತಿವಾದವನ್ನು ಬೇರುಸಹಿತ ಕಿತ್ತೆಸೆಯಲು ಬದ್ಧವಾಗಿದ್ದ ಈ ಆಂದೋಲನ ಇಡಿ ದೇಶಕ್ಕೆ ಮಾದರಿ, ಕೇರಳ ಮಾತ್ರವಲ್ಲ, ಇಡೀ ದೇಶದಲ್ಲೂ ಸಾಮಾಜಿಕ ಸುಧಾರಣೆಗಳ ಜತೆ–ಜತೆಯಲ್ಲೇ ಅದರ ವಿರುದ್ಧ ಬೀದಿಗಿಳಿದ ವಿಭಾಗಗಳೂ ಇದ್ದವು, ಇವುಗಳಲ್ಲಿ ಕೇವಲ ಸಂಪ್ರದಾಯಶರಣ ಮೇಲ್ವರ್ಗದವರು ಮಾತ್ರವೇ ಅಲ್ಲ, ಈ ಸಾಮಾಜಿಕ ಆಂದೋಲನದಿಂದ ಪ್ರಯೋಜನ ಪಡೆಯಲಿದ್ದ ವಿಭಾಗಗಳವೂ ಇದ್ದವು ಎಂದು ಗಮನಿಸಬೇಕು ಎಂದು ವಿಜಯನ್ ಹೇಳಿದರು. ಆಗಿದ್ದ ನಂಬಿಕೆಗಳು, ಸಂಪ್ರದಾಯಗಳನ್ನು ಬಳಸಿ ಅವರು ತಮ್ಮ ಉನ್ನತಿಯ ಆಂದೋಲನಗಳನ್ನೇ ವಿರೋಧಿಸುವಂತೆ ಮಾಡಲಾಯಿತು ಎಂದು ನೆನಪಿಸಿದರು.

ಇದಕ್ಕೆ ಅವರು ಸತಿಪದ್ಧತಿಯ ಉದಾಹರಣೆ ನೀಡಿದರು. ಇದು ನಮ್ಮ ದೇಶ ಕಂಡಿರುವ ಅತ್ಯಂತ ಕ್ರೂರ ಆಚರಣೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸತಿಪದ್ಧತಿಯ ಮೇಲೆ ನಿಷೇಧ ಹಾಕಿದಾಗ ವ್ಯಾಪಕ ಪ್ರತಿಭಟನೆಗಳು ನಡೆದವು, ನಿಷೇಧದ ನಂತರವೂ ಕೆಲವಾರು ಮಹಿಳೆಯರು ನಂಬಿಕೆ ಮತ್ತು ಆಚರಣೆಗಳಿಂದಾಗಿ ಗಂಡನ ಚಿತೆಗೆ ಹಾರಿ ಪ್ರಾಣ ಕಳಕೊಂಡರು, ಇಂತಹ ಆಚರಣೆಗಳ ವಿರುದ್ಧ ಹೋರಾಟಗಳಿಗೆ ನೇತೃತ್ವ ನೀಡಿದವರು ಹಲವಾರು ಬೆದರಿಕೆ, ಬಹಿಷ್ಕಾರಗಳನ್ನು ಎದುರಿಸಬೇಕಾಗಿ ಬಂತು.

ಆದರೆ ಒಂದು ಕಾಲಘಟ್ಟದಲ್ಲಿ ಇದ್ದ ನಂಬಿಕೆ, ಆಚರಣೆ ಇನ್ನೊಂದು ಕಾಲಘಟ್ಟದಲ್ಲಿ ಇರಲಿಕ್ಕೇ

ಪುಟ 10 ನೋಡಿ

ನವೋತ್ಥಾನ ಮತ್ತು ಪುನರುತ್ಥಾನದ ನಡುವೆ ಶಬರಿಮಲೆ– ಪುಟ 10 ನೋಡಿ

ಸಂಘ ಪರಿವಾರದ ಧಾಂಧಲೆಗಳಿಗೆ ಎದುರಾಗಿ 'ನವೋತ್ಥಾನ ಸಭೆಗಳು' "ಎರಡನೇ ವಿಮೋಚನಾ ಸಮರಂ ಬೇಡವೇ ಬೇಡ"

ಶಬರಿಮಲೆ ಮತ್ತು ಇತರೆಡೆಗಳಲ್ಲಿ ಸುಪ್ರಿಂ ಕೋರ್ಟಿನ ತೀರ್ಪಿನ ವಿರುದ್ಧ ನಡೆಯುತ್ತಿರುವ ಹಿಂಸಾತ್ಮಕ ಪ್ರತಿಭಟನೆಗಳಿಂದ ಭಕ್ತಾದಿಗಳ ಒಂದು ದೊಡ್ಡ ವಿಭಾಗ ಆತಂಕಿತಗೊಂಡಿದೆ.

"ಶಬರಿಮಲೆ ಉಳಿಸಿ" ಹೆಸರಲ್ಲಿ ಒಂದಾಗಿರುವ ಸುಪ್ರಿಂ ಕೊರ್ಟ್–ವಿರೋಧಿ ಮಂದಿ ಗೆ ಬಿಜೆಪಿ–ಆರೆಸ್ಸೆಸ್ ಮತ್ತು ಇತರ ಹಿಂದುತ್ವ ಸಂಗಟನೆಗಳು ನೇತೃತ್ವ ನೀಡುತ್ತಿವೆ. ಆದರೆ ಒಂದು ದೊಡ್ಡ ವಿಭಾಗ ಈ ಗುಂಪುಗಳ ಪ್ರಭಾವಲಯದ ಹೊರಗೆ ಇದೆ. ಅವರು ಸಂಘ ಪರಿವಾರದ ಕೋಮು ಧ್ರುವೀಕರಣದ ಪ್ರಯತ್ನಗಳಿಂದ ಆತಂಕಿತಾಗಿದ್ದಾರೆ. ಅವನ್ನು ವಿರೋಧಿಸುತ್ತಿದ್ದಾರೆ.

ಇತ್ತ ಎಡ ಪ್ರಜಾಪ್ರಭುತ್ವ ರಂಗ (ಎಲ್‌ಡಿಎಫ್) ಮಹಿಳೆಯರಿಗೆ ಪ್ರವೇಶ ನೀಡುವ ತೀರ್ಪಿನ ಪರವಾಗಿ ಬಲವಾದ ನಿಲುವು ತಳೆದಿದೆ. ಈ ಪ್ರಶ್ನೆಯಲ್ಲಿ ಹೆಚ್ಚಿನ ಸ್ಪಷ್ಟತೆಯನ್ನು ನೀಡುವ ಸಾಮೂಹಿಕ ಸಭೆಗಳನ್ನು ನಡೆಸುತ್ತಿದೆ. ಈ ಪ್ರಚಾರಾಂದೋಲನದಲ್ಲಿ ರಾಜ್ಯದ ವಿವಿಧ ರಾಜಕೀಯ, ಸಂಸ್ಕೃತಿಕ ಮತ್ತು ಸಾಮಾಜಿಕ ಸಂಘಟನೆಗಳು ಕೈಜೋಡಿಸುತ್ತಿವೆ.


ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ), ಪ್ರಗತಿಶೀಲ ಕಲೆ ಸಾಹಿತ್ಯ ಸಮಾಜ, ಜತೆಗೆ ಸಿಪಿಐ(ಎಂ) ಮತ್ತು ಸಿಪಿಐ ನವೋತ್ಥಾನ ಸಭೆಗಳು' ಎಂಬ ಹೆಸರಿನಲ್ಲಿ ರಾಜ್ಯದ ಮೂಲೆ–ಮೂಲೆಗಳಲ್ಲೂ ಸಭೆಗಳನ್ನು ನಡೆಸುತ್ತಿದೆ, "ಎರಡನೇ ವಿಮೋಚನಾ ಸಮರ ಬೇಡವೇ ಬೇಡ' ಎಂಬ ಘೋಷಣೆ ರಾಜ್ಯಾದ್ಯಂತ ಮೊಳಗುತ್ತಿದೆ. ಆರು ದಶಕಗಳ ಹಿಂದೆ ದೇಶದಲ್ಲೇ ಮೊತ್ತ ಮೊದಲ ಬಾರಿಗೆ ಈ ರಾಜ್ಯದ ಜನತೆ ಕಮ್ಯುನಿಸ್ಟ್ ಸರಕಾರವನ್ನು ಆರಿಸಿದಾಗ, ಆ ಸರಕಾರ ಸ್ವಾತಂತ್ರ್ಯದ ಆರಂಭದ ದಿನಗಳಲ್ಲಿ ಸ್ವತಃ ಕಾಂಗ್ರೆಸ್ ಪಕ್ಷವೇ ನೀಡಿದ್ಧ, ಆದರೆ ಎಂದೂ ಈಡೇರಿಸದ ಭೂಸುಧಾರಣೆ , ಶಿಕ್ಷಣ ಸುಧಾರಣೆ ಆಶ್ವಾಸನೆಗಳನ್ನು ಒಂದೊಂದಾಗಿ ಸಾಕಾರಗೊಳಿಸ ಲಾರಂಭಿಸಿದಾಗ ಕುಪಿತಗೊಂಡು ಇಎಂಎಸ್ ನಂಬೂದಿರಿಪ್ಪಾಡ್ ನೇತೃತ್ವದ ಸರಕಾರವನ್ನು ಉರುಳಿಸಲು 'ವಿಮೋಚನಾ ಸಮರಂ' ಎಂಬ ಪ್ರಜಾಪ್ರಭುತ್ವ–ವಿರೋಧಿ ಚಳುವಳಿ ಆರಮಭಿಸಿದರು. ಸಂವಿಧಾನದ 356ನೇ ಕಲಮನ್ನು ದುರುಪಯೋಗಪಡಿಸಿಕೊಂಡು ಆಸರಕಾರವನ್ನು ಪದಚ್ಯುತಗೊಳಿಸುವಯರಲ್ಲಿ ಅವರಿಗೆ ಯಶಸ್ಸೂ ಸಿಕ್ಕಿತು. ಆದರೆ ಈ ಬಾರಿ ಅದಕ್ಕೆ ಅವಕಾಶ ಕೊಡದಂತೆ ಜನಗಳನ್ನು ಅಣಿನೆರೆಸಲಾಗುತ್ತಿದೆ.

ಈ ಸಭೆಗಳಲ್ಲಿ ಕೇರಳದಲ್ಲಿ ಸುಮಾರು ಎರಡು ಶತಮಾನಗಳ ಹಿಂದೆ ಆರಂಭಗೊಂಡ ನವೋತ್ಥಾನ ಆಂದೋಲನ ಹೇಗೆ ಸಮಾಜದ ಪ್ರಗತಿಗೆ ಬಾಧಕವಾಗಿದ್ದ, ದಮನವನ್ನು ಸಮರ್ಥನೀಯಗೊಳಿಸಿದ್ದ ಆಚರಣೆಗಳು, ಸಂಪ್ರದಾಯಗಳನ್ನು ಮುರಿಯಿತು ಎಂಬುದನ್ನು ನೆನಪಿಸಲಾಗುತ್ತಿದೆ.

ಜನವಾದಿ ಮಹಿಳಾ ಸಂಘಟನೆ ಈಗಾಗಲೇ ಹಲವು ಲಿಂಗ ಸಮಾನತೆಯ ಹಕ್ಕುಗಳನ್ನು ಎತ್ತಿ ಹಿಡಿಯುವ ರ್‍ಯಾಲಿಗಳನ್ನು ನಡೆಸಿದೆ. ಎಸ್‌ಎಫ್‌ಐ ಮುಟ್ಟು ಅಶುದ್ಧವಲ್ಲ ಎಂಬ ಸಂದೇಶವನ್ನು ರಾಜ್ಯದ ಎಲ್ಲ ಕ್ಯಾಂಪಸ್‌ಗಳಲ್ಲಿ ಹರಡುತ್ತಿದೆ, ಜತೆಗೆ ನವೋತ್ಥಾನ ಶಾಲೆಗಳನ್ನು ನಡೆಸುತ್ತಿದೆ.



ಶಬರಿಮಲೆ: ನವೋತ್ಥಾನ ಮತ್ತು ಪುನರುತ್ಥಾನದ ನಡುವೆ





(ಶ್ರೀಜಿತ್ ಶ್ರೀನಿವಾಸನ್, ಭೌತಶಾಸ್ತ್ರ ಪ್ರಾಧ್ಯಾಪಕರು, ಸುಲ್ತಾನ್ ಬತ್ತೇರಿ ಮತ್ತು ನಿತೀಶ್ ನಾರಾಯಣನ್, ಸಂಶೋಧಕರು, ಜೆಎನ್‌ಯು ಇವರ ನ್ಯೂಸ್‌ಕ್ಲಿಕ್.ಇನ್ ನಲ್ಲಿ ಪ್ರಕಟವಾಗಿರುವ ಲೇಖನದಿಂದ)

ಸಮಾನತೆ, ಸ್ವಾತಂತ್ರ್ಯ ಮತ್ತು ಸೋದರತ್ವದ ಸಾರ್ವತ್ರಿಕ ಮೌಲ್ಯಗಳನ್ನು ಪ್ರತಿನಿಧಿಸುವ ನವೋದಯ ಆಂದೋಲನ ಕೇರಳದಲ್ಲಿ ಚಾರಿತ್ರಿಕವಾಗಿ ದಮನಿತ ಕೇಳಜಾತಿಗಳ ನೇತೃತ್ವದಲ್ಲೇ ನಡೆದಿರುವ ಆಂದೋಲನ. ಇದು ಶ್ರೀನಾರಾಯಣ ಗುರು, ಅಯ್ಯಂಕಳಿ, ಪೊಯ್ಕಾಯಿಲ್ ಅಪ್ಪಚ್ಚನ್, ಅಯ್ಯ ವೈಕುಂಡನ್ ಮುಂತಾದ ಕೇಳ ಜಾತಿಗಳಿಂದ ಬಂದ ಮುಖಂಡರ ನೇತೃತ್ವದಲ್ಲಿ ಆಗಿದ್ದ ಆಚಾರ–ವಿಚಾರಗಳನ್ನು ನಿರ್ದಾಕ್ಷಿಣ್ಯವಾಗಿ ವಿಮರ್ಶೆಗೆ ಹಚ್ಚಿತ್ತು, ಹಲವು ನಂಬಿಕೆ, ಆಚರಣೆಗಳನ್ನು ಧ್ವಂಸ ಮಾಡಿತು.

ನಾರಾಯಣ ಗುರು ಆಗಿದ್ದ ನಂಬಿಕೆಗಳಿಗೆ ಸವಾಲು ಹಾಕಿ ಶಿವನ ಮೂರ್ತಿಯನ್ನು ಪ್ರತಿಷ್ಠಾಪಿಸಿದಾಗ ಸವರ್ಣ ಹಿಂದೂಗಳು ಅದನ್ನು ಪ್ರಶ್ನಿಸದರು. ಆಗ ಅವರು 'ನನ್ನ ಸ್ವಂತ ಶಿವನನ್ನು ಪ್ರತಿಷ್ಠಾಪಿಸುತ್ತಿದ್ದೇನೆ' ಎಂದು ಪ್ರತ್ಯುತ್ತರ ನೀಡಿದರು. ಅಯ್ಯಂಕಳಿಯವರು ಕೆಳಜಾತಿ ವಿದ್ಯಾರ್ಥಿಗಳನ್ನು ಶಾಲೆಗಳಿಗೆ ಸೇರಿಸಿಕೊಳ್ಳಬೇಕು ಎಂದು ಆಗ್ರಹಿಸಿದ ಕೃಷಿ ಕೂಲಿಕಾರರ ಮೊದಲ ಮುಷ್ಕರಕ್ಕೆ ನೇತೃತ್ವ ನೀಡಿದರು.

ಈ ಹೋರಾಟಗಳ ವರ್ಗಚಾರಿತ್ರ್ಯದಿಂದಾಗಿ ಇವವು ತಮ್ಮ ನೆಲೆಯನ್ನು ವಿಸ್ತರಿಸಿಕೊಂಡು ಸಾಮೂಹಿಕ ಆಂದೋಲನಗಳಾಗಿ ಬೆಳೆದವು, ಜನತಾ ಹೋರಾಟಗಳಾಗಿ ಮಾರ್ಪಟ್ಟವು, ಕೇವಲ ಧಾರ್ಮಿಕ ಸುಧಾರಣಾವಾದಕ್ಕೇ ಸೀಮಿತಗೊಳ್ಳದ ವ್ಯಾಪಕವಾದ ವರ್ಗ ಆಂದೋಲನಗಳಿಗೆ ಹಾದಿ ಮಾಡಿಕೊಟ್ಟವು.

ವಿವಿಧ ಸ್ವರೂಪಗಳ ಸಾಮಾಜಿಕ ತಾರತಮ್ಯಗಳು ಜನಸಮೂಹಗಳನ್ನು ವಿಭಜಿಸಿರುವಂತಹ ಭಾರತದಂತಹ ಒಂದು ಸಮಾಜದಲ್ಲಿ ಸ್ವಾತಂತ್ರ್ಯ ಹೋರಾಟ ಒಂದು ಸಾಮೂಹಿಕ ಆಂದೋಲನದ ಸ್ವರೂಪ ಪಡೆಯಬೇಕಾದರೆ, ಸಾಮ್ರಾಜ್ಯಶಾಹಿಗೆ ವಿರೋಧದ ಘೋಷಣೆಯೊಂದಿಗೆ ಸಾಮಾಜಿಕ ಸುಧಾರಣೆಯ ಪ್ರಶ್ನೆಯನ್ನೂ ಎತ್ತಿಕೊಳ್ಳಬೇಕಾಗಿತ್ತು. ಆದರೆ ಈ ಹೋರಾಟದ ರಾಜಕೀಯ ಆಂದೋಲನಕ್ಕೆ ನೇತೃತ್ವ ನೀಡುತ್ತಿದ್ದ ಕಾಂಗ್ರೆಸ್‌ನ ಬಂಡವಾಳಶಾಹಿ–ಭೂಮಾಲಕ ವರ್ಗ ಚಾರಿತ್ರ್ಯದಿಂದಾಗಿ ಸಾಮಾಜಿಕ ಸುಧಾರಣೆಯ ಪ್ರಶ್ನೆ ಹಿನ್ನೆಲೆಗೆ ಸರಿಯಿತು.

ಕೇರಳದಲ್ಲಿ ಕಮ್ಯುನಿಸ್ಟರು ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟವನ್ನು, ಭೂಮಾಲಕ–ವಿರೋಧಿ ಮತ್ತು ಜಾತಿ–ವಿರೋಧಿ ಆಂದೋಲನಗಳೊಂದಿಗೆ ಬೆಸೆದು ಮುಂದಕ್ಕೆ ಒಯ್ದರು. ಕಾಂಗ್ರೆಸ್‌ಗೆ ಜಾತಿ ಪ್ರಶ್ನೆ ವೈಯಕ್ತಿಕ ಮಟ್ಟದಲ್ಲಿ 'ಹೃದಯ ಪರಿವರ್ತನೆ'ಯ ಪ್ರಶ್ನೆಯಷ್ಟೇ ಆಗಿತ್ತು. ಆದರೆ ಕಮ್ಯುನಿಸ್ಟರಿಗೆ ಇದು ಅತ್ಯಂತ ಶೋಷಣಾಕಾರಿಯಾದ ಭೂಮಾಲಕತ್ವ ಮತ್ತು ವಸಾಹತುಶಾಹಿಯ ವಿರುದ್ಧ ವ್ಯಾಪಕ ಹೋರಾಟದ ಒಂದು ಭಾಗವಾಗಿತ್ತು. ಏಕೆಂದರೆ ಇವು ಜಾತಿವ್ಯವಸ್ಥೆಯನ್ನು ತಮ್ಮ ಶೋಷಣೆಗೆ ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತಿದ್ದರು.

ವಸಾಹತುಶಾಹಿಯೋತ್ತರ ಅವಧಿಯಲ್ಲಿ ಕಮ್ಯುನಿಸ್ಟರು ತಮ್ಮ ಭೂಸುಧಾರಣಾ ಆಂದೋಲನದೊಂದಿಗೆ ಈ ಹೋರಾಟವನ್ನು ಮತ್ತಷ್ಟು ವಿಸ್ತರಿಸಿದರು, ಆ ಮೂಲಕ ಕೇರಳದ ಅತ್ಯಂತ ಜಾತಿ–ಆಧಾರಿತ ಭೂಸಂಬಂಧಗಳ ಭೌತಿಕ ಆಧಾರವನ್ನು ಮುರಿದು ಹಾಕಿದರು.

ಅದೇ ವೇಳೆಗೆ ಕೇರಳದ ನವೋತ್ಥಾನ ಆದೋಲನಕ್ಕೆ ತನ್ನದೇ ಆದ ಚಾರಿತ್ರಿಕ ಮಿತಿಗಳೂ ಇವೆ. ಅದು ಸಾಮಾಜಿಕ ಸುಧಾರಣೆಗಳ ಮುಂದಿನ ಹಂತಕ್ಕೆ ಬೆಳೆಯಲಿಲ್ಲ, ಲಿಂಗ ನ್ಯಾಯದ ಮಹತ್ವದ ಪ್ರಶ್ನೆಯನ್ನು ಎತ್ತಿಕೊಳ್ಳಲಿಲ್ಲ. ಧಾರ್ಮಿಕ ಸಂಸ್ಥೆಗಳೊಂದಿಗಿರುವ ಸಾಮಾಜಿಕ ವಲಯ ಈಗಲೂ ಪುರುಷ–ಪ್ರಾಬಲ್ಯದಲ್ಲಿದೆ, ಅದು ಪಿತೃಪ್ರಧಾನ ಮೌಲ್ಯಗಳ ಶಾಶ್ವತ ಉತ್ಪಾದನೆ, ಪುನರುತ್ಪಾದನೆಯಲ್ಲಿ ತೊಡಗಿದೆ.

ವಿವಿಧ ಸಾಮಾಜಿಕ ರಂಗಗಗಳಲ್ಲಿ ಸಮಾನ ಅವಕಾಶದ ಪ್ರಶ್ನೆಯಲ್ಲಿ ಲಿಂಗ ನ್ಯಾಯದ ನಿರ್ಣಾಯಕ ಪ್ರಶ್ನೆಯನ್ನು ಬದಿಗೊತ್ತಿರುವ ಈ ಕಂದರವನ್ನು ತುಂಬುವಲ್ಲಿ ಇತ್ತೀಚಿನ ಸುಪ್ರಿಂ ಕೋರ್ಟ್ ತೀರ್ಪು ಒಂದು ಮಹತ್ವದ ಮಧ್ಯಪ್ರವೇಶ ಎಂದು ಕಾಣಬೇಕಾಗಿದೆ. ಜಾತಿ ಮತ್ತು ಲಿಂಗ ದಮನಕ್ಕೆ ಸಮರ್ಥನೆ ಒದಗಿಸಿದ್ದ ಹಲವಾರು ಆಚರಣೆಗಳು ಮತ್ತು ಕಂದಾಚಾರಗಳನ್ನು ಕೇರಳದ ನವೋತ್ಥಾನ ಆಂದೋಲನ ಧ್ವಂಸಗೊಳಿಸಿ ಸಮಾಜದ ಮುನ್ನಡೆಗೆ ದಾರಿ ಮಾಡಿಕೊಟ್ಟಿದೆ. ಶಬರಿಮಲೆಯಲ್ಲಿ ಮಹಿಳೆಯರ ಪ್ರವೇಶದ ಮೇಲಿನ ನಿಷೇಧವನ್ನು ಮುರಿಯುವುದು ಅದರ ಮುಮದುವರಿಕೆಯೇ ಆಗಿದೆ.

ಸಂಘ ಪರಿವಾರದ ಪ್ರಹಾರಗಳು

1960ರ ದಶಕದಿಂದಲೂ ಸಂಘ ಪರಿವಾರ ಕೇರಳದೊಳಕ್ಕೆ ಪ್ರವೇಶಿಸಲು ಪ್ರಯತ್ನ ಮಾಡುತ್ತಲೇ ಇದೆ. ಆದರೆ ರಾಷ್ಟ್ರೀಯ ಸವಯಂಸೇವಕ ಸಂಘದ ಹಿಂದುತ್ವ ಬ್ರಾಂಡ್‌ಗೆ ಇಲ್ಲಿ ರಾಜಕೀಯವಾಗಿಯೂ, ಸಾಮಾಜಿಕವಾಗಿಯೂ ತಿರಸ್ಕಾರವೇ ಸಿಕ್ಕಿರುವುದು. ಆದ್ದರಿಂದ ಕಮ್ಯುನಿಸ್ಟ್ ಪಕ್ಷ ಇಲ್ಲಿ ಸೈದ್ಧಾಂತಿಕವಗಿಯೂ, ಭೌತಿಕವಾಗಿಯೂ ಅದರ ಪ್ರಾಥಮಿಕ ಗುರಿಯಾಗಿದೆ. 2014ರ ನಂತರ ಅದು ಇಲ್ಲಿ ಬೆಳೆಯಲು ಸರ್ವಪ್ರಯತ್ನ ನಡೆಸಿದೆ.

ಕೇರಳದ ಎಡಚಳುವಳಿ ಜಾತ್ಯತೀತ ಸಾರ್ವಜನಿಕ ಅವಕಾಶಗಳನ್ನು ನಿರ್ಮಿಸಿ, ಜನತೆಯ ಪ್ರತಿರೋಧಗಳನ್ನು ಬೆಳೆಸಿ ಸದಾ ಸಂಘ ಪರಿವಾರದ ಪ್ರಹಾರಗಳನ್ನು ಪ್ರತಿರೋಧಿಸಿಕೊಂಡು ಬಂದಿದೆ. ಇದರಲ್ಲಿ ಅದಕ್ಕೆ ನವೋತ್ತಾನದ ಮೌಲ್ಯಗಳು ಸದಾ ಸ್ಫೂರ್ತಿ ನೀಡುವ ಶಕ್ತಿ. ಆದ್ದರಿಂದಲೇ ಸಂಘ ಪರಿವಾರ ಈ ನವೋತ್ಥಾನ ಪರಂಪರೆಯ ಮೇಲೆ ಧಾಳಿ ಮಾಡಬಯಸುತ್ತಿದೆ. ಕೇರಳದ ಜಾತ್ಯತೀತ ಅವಕಾಶ ವಿಸ್ತಾರವಾಗಿದ್ದು ಇಲ್ಲಿ ಜಾತಿ–ಧರ್ಮಗಳ ಭಿನ್ನತೆಯ ಪಾತ್ರ ಅತ್ಯಲ್ಪ, ಇದೇ ತನ್ನ ಬೆಳವಣಿಗೆಗೆ ದೊಡ್ಡ ಅಡ್ಡಿ ಎಂದು ಅದಕ್ಕೆ ಗೊತ್ತಿದೆ. ಇಲ್ಲಿಯ ಜಾತ್ಯತೀತ ವಿಸ್ತಾರವನ್ನು ಛಿದ್ರಗೊಳಿಸಲು ಅದರ ಪ್ರಯತ್ನ ಬಹಳ ವರ್ಷಗಳಿಂದ ನಡೆದಿದೆ, ಥಾಲಿ ದೇವಸ್ಥಾನ ಹೋರಾಟದಿಂದ ನೀಲಕ್ಕಳ್ ಹೋರಾಟದ ವರೆಗೆ, ತಲಶೇರಿ ಗಲಭೆಗಳಿಂದ ಹಿಡಿದು ಮರಾಡ್ ಗಲಭೆಗಳ ವರೆಗೆ ಇದಕ್ಕೆ ಹಲವು ಉದಾಹರಣೆಗಳಿವೆ. ಶಬರಿಮಲೆ ಇತ್ತೀಚಿನ ಉದಾಹರಣೆಯಷ್ಟೇ.

ಸಂಘ ಪರಿವಾರದ ಪ್ರಹಾರಗಳನ್ನು ಹಿಮ್ಮೆಟ್ಟಿಸಲು ಇರುವ ಏಕೈಕ ಮಾರ್ಗವೆಂದರೆ ನವೋತ್ಥಾನ ಮೌಲ್ಯಗಳ ಸುತ್ತ ಎಲ್ಲ ಜನಸಮೂಹಗಳನ್ನು ಅಣಿನೆರೆಸುವುದು ಮತ್ತು ಎಲ್ಲ ಜಾತ್ಯತೀತ ಶಕ್ತಿಗಳ ಒಂದು ಗಟ್ಟಿ ಹೋರಾಟವನ್ನು ಕಟ್ಟುವುದು. ಇದು ಇತಿಹಾಸ ಕಲಿಸಿರುವ ಪಾಟ. ಆದರೆ ಇಲ್ಲಿರುವ ನಿರ್ಣಾಯಕ ಪ್ರಶ್ನೆಯೆಂದರೆ, ಹಿಂದುತ್ವ ಶಕ್ತಿಗಳು ಕೋಮು ವಿಭಜನೆಯ ಇನ್ನೊಂದು ವೇದಿಕೆಯನ್ನು ನಿರ್ಮಿಸಿರುವಾಗ ಪ್ರಜಾಪ್ರಬಿಭುತ್ವ ಮತ್ತು ಜಾತ್ಯತೀತ ಹಂದರವನ್ನು ಎತ್ತಿ ಹಿಡಿಯುವ ಶಕ್ತಿಗಳು ಯಾರ ಕಡೆಗೆ ಇರುತ್ತವೆ ಎಂಬುದು.

ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷವಾದ ಐಯುಎಂಎಲ್ ಸಂಘ ಪರಿವಾರದ ಕಥನದತ್ತ ಸರಿಯುತ್ತಿವೆ. ಕಾಂಗ್ರೆಸ್ ಇದು ಎಡಪಂಥ ಮತ್ತು ಆಸ್ತಿಕರ ನಡುವಿನ ಪ್ರಶ್ನೆಯೆಂಬಂತೆ ಚಿತ್ರಿಸುತ್ತಿರುವುದು ಸಂಘ ಪರಿವಾರದ ಅಜೆಂಡಾಕ್ಕೆ ಶರಣಾಗತಿಯಷ್ಟೇ ಅಲ್ಲ, ಕೇರಳದಲ್ಲಿ ಶತಮಾನಗಳ ಹೋರಾಟಗಳ ಮೂಲಕ ರೂಪುಗೊಂಡಿರುವ ನವೋತ್ಥಾನದ ಮೌಲ್ಯಗಳಿಗೆ ಬಗೆಯುವ ವಿಶ್ವಾಸಘಾತ.

ಚಾರಿತ್ರಿಕವಾಗಿ ಬಿಕ್ಕಟ್ಟಿನ ಸಮಯದಲ್ಲೆಲ್ಲ ಕಾಂಗ್ರೆಸ್ ಕೋಮುವಾದಿ ಜಾತಿವಾದಿ ಶಕ್ತಿಗಳನ್ನೇ ಅವಲಂಬಿಸಿದೆ. ನವ–ಉದಾರವಾದಿ ಯುಗದಲ್ಲಿ ಕಾಂಗ್ರೆಸಿಗೂ ಸಂಘ ಪರಿವಾರಕ್ಕೂ ಆರ್ಥಿಕ ಧೋರಣೆಗಳಲ್ಲಿ ವ್ಯತ್ಯಾಸವೇನೂ ಉಳಿದಿಲ್ಲ, ಕೋಮುವಾದದ ವಿಷಯದಲ್ಲಿ ಮಾತ್ರ ಉಳಿದಿರುವ ವ್ಯತ್ಯಾಸವನ್ನೂ ಈಗ ಕೇರಳದಲ್ಲಿ ಅಳಿಸಿ ಹಾಕಲಾಗುತ್ತಿದೆ. ಇದು ಇತರೆಡೆಗಳಂತೆ ಕೇರಳದಲ್ಲೂ ಕಾಂಗ್ರೆಸನ್ನು ಅಪ್ರಸ್ತುತಗೊಳಿಸಬಹುದಷ್ಟೇ. ●

2ನೇ 'ಅಯೋಧ್ಯಾಕಾಂಡ'...ಮತ್ತು 2ನೇ'ವಿಮೋಚನಾ ಸಮರಂ'........

ಪುಟ 9 ರಿಂದ

ಸರ್ವೋಚ್ಚ ನ್ಯಾಯಾಲಯವೇ ಹೊಣೆ!" (ಸುಬೋಧ್ ವರ್ಮ, ನ್ಯೂಸ್‌ಕ್ಲಿಕ್, ಅಕ್ಟೋಬರ್ 19).

ನಿಜ, ಕಳೆದ ತಿಂಗಳು ನವದೆಹಲಿಯಲ್ಲಿ ಈ ಮುಖ್ಯಸ್ಥರ ಉಪನ್ಯಾಸಗಳನ್ನು ಕೇಳಿ ಮೆಚ್ಚಿಕೊಂಡವರಿಗೆ ಈಗ ದೇಶದ ಸರ್ವೋಚ್ಚ ನ್ಯಾಯಾಲಯವನ್ನೇ ಹೀಗಳೆಯುವ ಈ ಮಾತುಗಳು ಆಶ್ಚರ್ಯ ಉಂಟುಮಾಡಬಹುದು. ಅದರೆ ಬಾಬ್ರಿಮಸೀದಿ ಧ್ವಂಸದ ಮೊದಲು ಮತ್ತು ನಂತರವೂ ಈ ಪರಿವಾರದ ವರ್ತನೆ ಕಂಡವರಿಗೆ ಏನೂ ಆಶ್ಚರ್ಯವಾಗಿಲ್ಲ.

ಅದರೆ ಸಮಾಜ–ಸುಧಾರಣೆಗಳ ದೀರ್ಘ ಅನುಭವ ಇರುವ ಕೇರಳದಲ್ಲಿ ಇದಕ್ಕೆ ತಕ್ಕ ಪ್ರತಿಕ್ರಿಯೆ ಸಿಗುತ್ತಿದೆ. ನವಂಬರ್ 17ರಿಂದ ಎರಡು ತಿಂಗಳ ಹಬ್ಬಗಳ ಸರಣಿ ಆರಂಭವಾಗುತ್ತಿದೆ. ಆ ವೇಳೆಗೆ ಎಲ್‌ಡಿಎಫ್ ಸರಕಾರ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಬದ್ಧವಾಗಿರಲು ಸಾಧ್ಯವಾದುದೆಲ್ಲವನ್ನೂ ಮಾಡುತ್ತದೆ ಎಂದು ಮುಖ್ಯಮಂತ್ರಿ ವಿಜಯನ್ ಹೇಳಿದ್ದಾರೆ. ಮಹಿಳಾ ದರ್ಶನಾರ್ಥಿಗಳಿಗೆ ಪೋಲಿಸರು ರಕ್ಷಣೆ ಕೊಡುತ್ತಿದ್ದಾಗ ದೇವಸ್ಥಾನವನ್ನು ಮುಚ್ಚುವ ಬೆದರಿಕೆ ಹಾಕಿದ ದೇವಸ್ಥಾನದ ತಂತ್ರಿ(ಪ್ರಧಾನ ಪುರೋಹಿತ) ಮತ್ತು ತಿರುವಾಂಕೂರು ದೇವಸ್ಥಾನ ಮಂಡಳಿ(ಟಿಡಿಬಿ)ಯ ಇತರ ನೌಕರರ ಪ್ರತಿಭಟನೆಗಳೂ ತಪ್ಪು ಎಂದ ಅವರು ಈ ದೇವಸ್ಥಾನ ಟಿಡಿಬಿ ಒಡೆತನದಲ್ಲಿ ಇದೆ ಎಂದು ನೆನಪಿಸಿದರು.

ಪಂಡಲಂ ರಾಜಮನೆತನದವರು ತಮಗಿಲ್ಲದ ಹಕ್ಕಿನ ದಾವೆ ಹಾಕುತ್ತಿದ್ದಾರೆ."ಶಬರಿಮಲೆ ದೇವಸ್ಥಾನ ಟಿಡಿಬಿಯ ಆಸ್ತಿ, ಬೇರೆ ಯಾರಿಗೂ ಅದರ ಮೇಲೆ ಹಕ್ಕಿಲ್ಲ. ರಾಜಮನೆತನದ ಗಂಭೀರ ಹಣಕಾಸು ಸಮಸ್ಯೆಗಳ ನಂತರ ದೇವಸ್ಥಾನದ ಒಡೆತನವನ್ನು ಟಿಡಿಬಿಗೆ ವಹಿಸಲಾಗಿದೆ ಎಂದು 1949ರ ಒಡಂಬಡಿಕೆಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ" ಎಂದ ಮುಖ್ಯಮಂತ್ರಿಗಳು ಅವರು ಕೆಲವು ಆಚರಣೆಗಳನ್ನು ನಡೆಸಬಹುದಷ್ಟೇ, ಅವರು ಇನ್ನು ಮುಂದೆಯೂ ಅದನ್ನು ಮುಂದುವರೆಸಿಕೊಂಡು ಹೋಗಬಹುದು ಎಂದಿದ್ದಾರೆ.

ಮುಂದಿನ ಬಾರಿ ದೇವಸ್ಥಾನದ ಬಾಗಿಲು ತೆರೆದಾಗ ಭಕ್ತಾದಿಗಳನ್ನು ನಿರ್ವಹಿಸುವ ತಿರುಪತಿ ದೇವಸ್ಥಾನದ ಪದ್ಧತಿಯನ್ನು ಅಳವಡಿಸಲಾಗುವುದು, ಯಾವ ಭಕ್ತಾದಿಗಳೂ ಒಂದು ನಿರ್ದಿಷ್ಟ ಸಮಯದ ನಂತರ ಅಲ್ಲಿ ಉಳಿದುಕೊಳ್ಳದಂತೆ ನೋಡಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದರು.

ಈ ನಡುವೆ ಸುಪ್ರಿಂ ಕೋರ್ಟ್ ತನ್ನ ತೀರ್ಪನ್ನು ಮರುಪರಿಶೀಲಿಬೇಕೆಂದು ಹಾಕಿದ 19 ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ರಂಜನ್ ಗೊಗೊಯ್ ಮತ್ತು ನ್ಯಾಯಮೂರ್ತಿ ಎಸ್,ಕೆ.ಕೌಲ್‌ರವರ ಪೀಠ ನವಂಬರ್ 13 ರಂದು ನಡೆಸುವುದಾಗಿ ತಿಳಿಸಿದೆ. ತಿರುವಾಂಕೂರು ದೇವಸ್ಥಾನ ಮಂಡಳಿ ಈ ಐದು ದಿನಗಳ ಬಗ್ಗೆ ಒಂದು ವಿವರವಾದ ವರದಿಯನ್ನು ಕೇರಳ ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟಿಗೆ ಸಲ್ಲಿಸಿದೆ ಎಂದು ವರದಿಯಾಗಿದೆ.

ಕೆಲವು ಸಂಪ್ರದಾಯಗಳು ಇರುವುದು ಮುರಿಯುವದಕ್ಕಾಗಿಯೇ...

ಪುಟ 9 ರಿಂದ

ಇಲ್ಲ. ಉದಾಹರಣೆಗೆ, ಮುಟ್ಟಿಗೆ ಸಂಬಂಧಪಟ್ಟಂತೆ ಮಹಿಳೆಯರ ಮೇಲೆ ಬಹಳಷ್ಟು ನಿಷೇಧಗಳಿದ್ದವು. ಆದರೆ ಈಗ ಅವುಗಳಲ್ಲಿ ಎಷ್ಟು ಉಳಿದಿವೆ, ಇವೆಲ್ಲ ನಮ್ಮ ಕಣ್ಣ ಮುಂದೆಯೇ ನಡೆದ ಬದಲಾವಣೆಗಳಲ್ಲವೇ ಎಂದು ವಿಜಯನ್ ಪ್ರಶ್ನಿಸಿದರು.

ಇಂದಿನ ಕೇರಳ ರೂಪುಗೊಂಡಿರುವುದು ಆ ಹೋರಾಟಗಳ ಮೂಲಕವೇ. ದಲಿತ ಮಹಿಳೆಯರ ಗುರುತಾಗಿ ಅವರು ಕಲ್ಲುಗಳ ಸರ ಕೊರಳಿಗೆ ಹಾಕಿಕೊಳ್ಳಬೇಕೆನ್ನುವ ಸಂಪ್ರದಾಯವಿತ್ತು. ಅದರ ವಿರುದ್ಧ ಹೋರಾಟ ನಡೆಯಿತು; ಸಾರ್ವಜನಿಕ ರಸ್ತೆಗಳನ್ನು ಬಳಸುವ ಹಕ್ಕಿಗಾಗಿ ದಲಿತರ ಹೋರಾಟ ನಡೆಯಿತು; ಶಾಲೆಗಳಲ್ಲಿ ಕಲಿಯುವಾಗ ಎಲ್ಲರೂ ಜತೆಗೆ ಕೂರುವುದಕ್ಕಾಗಿ ಹೋರಾಟ ನಡೆಯಿತು; ಕೆಳಜಾತಿಗಳವರು ಎನಿಸಿಕೊಂಡವರ ದೇವಸ್ಥಾನ ಪ್ರವೇಶಕ್ಕೂ, ಪೂಜೆ ಸಲ್ಲಿಸುವ ಹಕ್ಕಿಗೂ ಹೋರಾಟ ನಡೆಸಬೇಕಾಯಿತು. ಇವನ್ನೆಲ್ಲ ನೆನಪಿಸಿದ ವಿಜಯನ್ "ನಮ್ಮ ನವೋತ್ಥಾನ ನೇತಾರರು ಕೆಲವು ಸಂಪ್ರದಾಯಗಳು ಇರುವುದು ಮುರಿಯುವದಕ್ಕಾಗಿಯೇ ಎಂದು ನಮಗೆ ಕಲಿಸಿ ಕೊಟ್ಟಿದ್ದಾರೆ" ಎಂದರು.

ವಿಜಯನ್ ತಮ್ಮ ಈ ಭಾಷಣದಲ್ಲಿ ಆರೆಸ್ಸೆಸ್–ಬಿಜೆಪಿಯ ಗೋಸುಂಬೆತನವನ್ನೂ ಎತ್ತಿ ತೋರಿದರು. ಮಹಾರಾಷ್ಟ್ರದಲ್ಲಿ ಬಿಜೆಪಿ ಸರಕಾರ ಶನಿ ಶಿಂಗ್ನಾಪುರ್ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶಕ್ಕೆ ಅವಕಾಶ ನೀಡುವ ಮುಂಬೈ ಹೈಕೋರ್ಟ್ ತೀರ್ಪನ್ನು ಜಾರಿಗೊಳಿಸಲು ಬಿಟ್ಟಿತು, ಆದರೆ ಎಲ್‌ಡಿಎಫ್ ಆಳ್ವಿಕೆಯ ಕೇರಳದಲ್ಲಿ ಅದೇ ಬಿಜೆಪಿ–ಆರೆಸ್ಸೆಸ್ ಮಹಿಳೆಯರ ದೇವಸ್ಥಾನ ಪ್ರವೇಶವನ್ನು ಪ್ರತಿಭಟಿಸುತ್ತಿದೆ. ಇದು ಯಾವ ರೀತಿಯ ಇಬ್ಬಂದಿತನ ಎಂದು ಅವರು ಪ್ರಶ್ನಿಸಿದರು.

ನಂಬಿಕೆಯೇ ಎಲ್ಲಕೂ ಮೇಲು ಎನ್ನುವವರನ್ನು (ಇವರಲ್ಲಿ ಕೇರಳದ ಕಾಂಗ್ರೆಸಿಗರೂ ಇದ್ದಾರೆ!) ಉದ್ದೇಶಿಸಿ, ಇದನ್ನು ಬಾಬ್ರಿ ಮಸೀದಿ ವಿವಾದಕ್ಕೆ ಅನ್ವಯಿಸಿದರೆ ಏನಾಗಬಹುದು ಎಂದು ಪ್ರಶ್ನಿಸಿದರು. ಕೇರಳದ ಜಾತ್ಯತೀತ ಮನೋಭಾವವನ್ನು ರಕ್ಷಿಸಿಕೊಳ್ಳಲು ಅದನ್ನು ಧ್ವಂಸ ಮಾಡುವ ಪ್ರಯತ್ನಗಳ ವಿರುದ್ಧ ಎಲ್ಲ ಧರ್ಮಗಳ ಆಸ್ತಿಕರೂ ಸೇರಿದಂತೆ, ಪ್ರತಿಯೊಬ್ಬರೂ ಒಂದಾಗಿ ನಿಲ್ಲಬೇಕು ಎಂದು ಅವರು ಮನವಿ ಮಾಡಿಕೊಂಡರು.

ಬಂದರು ಮಹಿಳಾ ತಲೆ ಹೊರೆ ಕಾರ್ಮಿಕರಿಂದ ಪ್ರತಿಭಟನಾ ಪ್ರದರ್ಶನ



ಬಂದರು ಪ್ರದೇಶದ ಅಡಿಕೆ ಗಾರ್ಬಲ್ ಗಳಲ್ಲಿ ದುಡಿಯುವ ಮಹಿಳಾ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸದ ಮಾಲಕ ವರ್ಗದ ವಿರುದ್ಧ ಮಹಿಳಾ ಕಾರ್ಮಿಕರು ಅಕ್ಟೋಬರ್ 25ರಂದು ನಗರದಲ್ಲಿ ಮೆರವಣಿಗೆ ನಡೆಸಿ ಅಳಕೆಯಲ್ಲಿರುವ ಮಾಲಕರ ಸಂಘದ ಅಧ್ಯಕ್ಷರ ಮನೆ ಮುಂದೆ ಪ್ರತಿಭಟನೆ ನಡೆಸಿದರು. 250 ಕ್ಕೂ ಮಿಕ್ಕಿದ ಮಹಿಳಾ ಕಾರ್ಮಿಕರು ಬಂದರು ಪ್ರದೇಶದಿಂದ ಮೆರವಣಿಗೆಯಲ್ಲಿ ಹೊರಟು, 'ಕಾರ್ಮಿಕರ ಬೇಡಿಕೆ ಈಡೇರಲಿ', 'ಕಾರ್ಮಿಕ ಮಾಲಕರ ಮಾತುಕತೆ ಯಶಸ್ವಿಯಾಗಲಿ' ಎಂಬಿತ್ಯಾದಿ ಘೋಷಣೆಗಳನ್ನು ಕೂಗುತ್ತಾ ಸಾಗಿದರು.

ಬಳಿಕ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾಲಕರ ವರ್ಗದ ಹಿತಾಸಕ್ತಿಗಳನ್ನು ಕಾಪಾಡುತ್ತದೆಯೇ ಹೊರತು ಕಾರ್ಮಿಕ ವರ್ಗದ ಪರವಾಗಿಲ್ಲ, ಇದರಿಂದಾಗಿ ಕೊಬ್ಬಿರುವ ಮಾಲಕರು ಕಾರ್ಮಿಕರ ವಿರುದ್ಧ ಶೋಷಣೆಗಳನ್ನು ಇನ್ನಷ್ಟು ತೀವ್ರಗೊಳಿಸಿ ಅವರಿಗೆ ನ್ಯಾಯ ಪ್ರಕಾರ ಸಿಗಬೇಕಾದ ಸವಲತ್ತುಗಳನ್ನು ಕೂಡ ನೀಡದೆ ಸತಾಯಿಸುತ್ತಿದ್ದಾರೆ. ಇದರ ವಿರುದ್ಧ ಕಾರ್ಮಿಕ ವರ್ಗ ಒಂದಾಗಿ ಹೋರಾಡಬೇಕಾದ ಅನಿವಾರ್ಯತೆ ಇದೆ ಎಂದು ಹೇಳಿದರು.

ದ.ಕ.ಜಿಲ್ಲಾ ತಲೆಹೊರೆ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡುತ್ತಾ, ಬಂದರು ಪ್ರದೇಶದ ಕಾರ್ಮಿಕರ ಬೇಡಿಕೆಗಳನ್ನು ಪ್ರತಿ 3 ವರ್ಷಕ್ಕೊಮ್ಮೆ ಸಹಾಯಕ ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ಕಾರ್ಮಿಕ ಮಾಲಕರ ಮಾತುಕತೆ ನಡೆದು ಅಂತಿಮವಾಗಿ ಒಂದು ಒಪ್ಪಂದಕ್ಕೆ ಬರಲಾಗುತ್ತಿತ್ತು ಆದರೆ ಈ ಸಲ ಮಾರ್ಚ್ ತಿಂಗಳಲ್ಲಿ ಹೊಸ ಒಪ್ಪಂದಕ್ಕೆ ಸಂಬಂಧಿಸಿ ಬೇಡಿಕೆ ಪಟ್ಟಿ ನೀಡಿದ್ದರೂ ಮಾಲಕ ವರ್ಗದ ಹಾಗೂ ಸಹಾಯಕ ಕಾರ್ಮಿಕ ಆಯುಕ್ತರ ಯಾವುದೇ ರೀತಿಯ ಸ್ಪಂದನವಿಲ್ಲ. ಇದರಿಂದಾಗಿ ಕಳೆದ 7 ತಿಂಗಳಿನಿಂದ ಕಾರ್ಮಿಕರು ತೀರಾ ಸಂಕಷ್ಟದಲ್ಲಿದ್ದು, ತಾ; ಅಕ್ಟೋಬರ್ 26 ರಂದು ಕಾರ್ಮಿಕ ಇಲಾಖೆಯಲ್ಲಿ ಮಾತುಕತೆಗೆ ದಿನಾಂಕ ನಿಗದಿಯಾಗಿದ್ದು, ಮಾಲಕರು ಈ ಸಭೆಯಲ್ಲಿ ಭಾಗವಹಿಸುವ ಮೂಲಕ ಕಾರ್ಮಿಕರಿಗೆ ನ್ಯಾಯ ಒದಗಿಸುವಲ್ಲಿ ಮುಂದಡಿ ಇಡಬೇಕಾಗಿದೆ. ಇಲ್ಲದಿದ್ದಲ್ಲಿ ಕಾರ್ಮಿಕರು ಇನ್ನಷ್ಟು ತೀವ್ರ ರೀತಿಯ ಹೋರಾಟಕ್ಕೆ ಮುಂದಾಗಬೇಕಾದೀತು ಎಂದು ಎಚ್ಚರಿಕೆ ನೀಡಿದರು.

ಹೋರಾಟದ ನೇತೃತ್ವವನ್ನು ತಲೆ ಹೊರೆ ಕಾರ್ಮಿಕರ ಸಂಘದ ಮುಖಂಡರಾದ ಅಹಮ್ಮದ್ ಬಾವ, ಜಯ, ಕುಶಲ, ಶಕುಂತಲಾ, ವಾರಿಜ, ರಫೀಕ್ ಹರೇಕಳ, ಅಶ್ರಫ್, ಅಸ್ಲಂ ಮುಂತಾದವರು ವಹಿಸಿದ್ದರು ■

ಕಾಯಂ ಉದ್ಯೋಗದ ಪರಿಕಲ್ಪನೆಯ ರಾಷ್ಟ್ರೀಯ..... ಪುಟ 16 ರಿಂದ

ಬಲವಾಗುತ್ತಾ ಹೋದಂತೆ, 2001ರ ನಂತರ ಹಾರನಹಳ್ಳಿ ರಾಮಸ್ವಾಮಿ ಆಯೋಗ ಮುಂತಾದ ವಿವಿಧ ಆಯೋಗಗಳು ಸಮಿತಿಗಳ ಶಿಫಾರಸಿನ ಮೇರೆಗೆ ಹೆಚ್ಚೆಚ್ಚು ಸರಕಾರಿ ಉದ್ಯೋಗಗಳನ್ನು ಗುತ್ತಿಗೆ, ಹೊರಗುತ್ತಿಗೆ, ಸಾಂದರ್ಭಿಕ ಇತ್ಯಾದಿಗಳಿಗೆ ಪರಿವರ್ತಿಸಲಾಗಿದೆ. ಕಚೇರಿಯ ನೈರ್ಮಲ್ಯ, ಶೌಚಾಲಯ, ತೋಟ ನಿರ್ವಹಣೆ, ಚಾಲಕ ಸೇವೆ, ವಿದ್ಯಾರ್ಥಿ ನಿಲಯಗಳ ನಿರ್ವಹಣೆ, ಬೀಜೋತ್ಪನ್ನ ಮತ್ತು ವಿತರಣೆ, ಕಸ ಸಂಗ್ರಹಣೆ ಮುಂತಾದ ಹಲವು ರೀತಿಯ ಉದ್ಯೋಗಗಳನ್ನು ಕಾಯಮೇತರ ಉದ್ಯೋಗಗಳಾಗಿ ಪರಿವರ್ತಿಸಲಾಗಿದೆ ಎಂದು ವರಲಕ್ಷ್ಮಿ ಅವರು ಹೇಳಿದರು. 2000–02ರಲ್ಲಿ ಮಂಜೂರಾದ 6.25 ಲಕ್ಷ ಹುದ್ದೆಗಳಲ್ಲಿ ಆಗಲೇ ಖಾಲಿಯಿದ್ದ 95 ಸಾವಿರ ಹುದ್ದೆಗಳಲ್ಲಿ 34 ಸಾವಿರ ಹುದ್ದೆಗಳನ್ನು ರದ್ದು ಮಾಡಲಾಯಿತು. ಮೊದಲು ಡಿ ವರ್ಗದ ಹುದ್ದೆಯಿಂದ ಆರಂಭವಾಗಿ ಈಗ ಎಲ್ಲಾ ಕ್ಷೇತ್ರ ಹಾಗು ಹಂತಗಳಲ್ಲಿ ಕಾಯಮೇತರ ಪದ್ಧತಿ ಬಂದಿದೆ. ಇದು 1970ರ ಗುತ್ತಿಗೆ ಪದ್ಧತಿ ನಿಯಂತ್ರಣ ಮತ್ತು ನಿಷೇಧ ಕಾಯಿದೆಯ ಉಲ್ಲಂಘನೆಯಾದರೂ ರಾಜಾರೋಷಾಗಿ ನಡೆಯುತ್ತಿದೆ ಎಂದರು.



ರಾಜ್ಯದಲ್ಲಿ ಕಾರ್ಮಿಕ ಇಲಾಖೆಯಲ್ಲಿ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸುವ ಕರಡು ವರದಿ ಸಿದ್ದವಾಗಿದೆ. ಆದರೆ, ರಾಜ್ಯ ಸರ್ಕಾರ ಅಡಿಯಲ್ಲಿರುವ ನೌಕರರಿಗೆ ಪ್ರಯೋಜನ ಆಗಿಲ್ಲ ಎಂದ ಅವರು, ವಿಶ್ವವಿದ್ಯಾಲಯ, ಬೆಸ್ಕಾಂ ಸೇರಿದಂತೆ ಹತ್ತಾರು ಇಲಾಖೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ದುಡಿಸಿಕೊಳ್ಳುತ್ತಿರುವುದು ಬೇಸರ ತಂದಿದೆ ಎಂದು ನುಡಿದರು.

ವಿಚಾರ ಸಂಕಿರಣದಲ್ಲಿ ಎರಡು ಗೋಷ್ಠಿಗಳಿದ್ದು 'ಕಾಯಮೇತರ ಉದ್ಯೋಗಗಳ ಸಾಮಾಜಿಕ–ಆರ್ಥಿಕ ಪರಿಣಾಮಗಳು' ಗೋಷ್ಠಿಯಲ್ಲಿ ಪ್ರೊ.ಟಿ.ಆರ್. ಚಂದ್ರಶೇಖರ್ ಮತ್ತು ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಎಸ್.ಮೀನಾಕ್ಷಿ ಸುಂದರಮ್ ಅವರು ಮಾತನಾಡಿದರು. 'ಕಾಯಮೇತರ ನೌಕರರಿಗೆ ವಿಶೇಷ ಕಾನೂನುಗಳ ಆವಶ್ಯಕತೆ' ಗೋಷ್ಠಿಯಲ್ಲಿ ನ್ಯಾ. ನಾಗಮೋಹನದಾಸ, ಹುಬ್ಬಳ್ಳಿ ಕಾನೂನು ಪ್ರಾಧ್ಯಾಪಕ ಡಾ.ಶರತ್ ಬಾಬು, ಕಾರ್ಮಿಕ ಮುಖಂಡ ವಿಜೆಕೆ ನಾಯರ್ ಅವರುಗಳು ಮಾತನಾಡಿದರು. ಸಿಐಟಿಯು ಉಪಾಧ್ಯಕ್ಷ ಕೆ.ಎಸ್. ಉಮೇಶ್ ಅವರು ಅಧ್ಯಕ್ಷತೆ ವಹಿಸಿದ್ದು ಅಧ್ಯಕ್ಷೀಯ ಮಾತುಗಳನ್ನಾಡಿದರು. ■

ಕಾಫಿ–ಶೇ.99 ಸಣ್ಣ ಬೆಳೆಗಾರರು ಕಷ್ಟದಲ್ಲಿದ್ದಾರೆ..... ಪುಟ 16 ರಿಂದ

ದೊಡ್ಡ ಕಂಪನಿಗಳಿಗೆ ಹೋಗುತ್ತಿದೆ. ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆಗಳು ನಿರಂತರ ಇಳಿಕೆಯಾಗುತ್ತಿವೆ. ಇದರಿಂದ ಬೆಳೆಗಾರರು ನಷ್ಟವನ್ನ ಅನುಭವಿಸುತ್ತಿದ್ದಾರೆ. ಆದ್ದರಿಂದ ಕೃಷಿ ತಜ್ಞರಾದ ಡಾ.ಎಂ. ಎಸ್.ಸ್ವಾಮಿನಾಥನ್ ರವರ ಶಿಫಾರಸ್ಸಿನಂತೆ ಉತ್ಪಾದನಾ ವೆಚ್ಚದ ಮೇಲೆ ಶೇ 50 ರಷ್ಟು ಲಾಭಾಂಶವನ್ನು ಸೇರಿಸಿ ಬೆಲೆ ನಿಗದಿಮಾಡುವಂತಹ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕೆಂದು ಒತ್ತಾಯಿಸಿದರು. ಜಾಗತೀಕರಣ ನೀತಿಗಳ ಪ್ರಭಾವದಿಂದಾಗಿ ಕಾಫಿ ಉತ್ಪಾದನಾ ವೆಚ್ಚ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು ಇದರ ನಷ್ಟವನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಗಾರರು ಅನುಭವಿಸುತ್ತಿದ್ದಾರೆ. ಇದಕ್ಕಾಗಿ ನೀರಾವರಿ, ರಸಗೊಬ್ಬರ, ಕೀಟನಾಶಕ, ಮತ್ತು ಕೃಷಿ ಯಂತ್ರೋಪಕರಣಗಳನ್ನು ಸರ್ಕಾರ ಸಬ್ಸಿಡಿ ದರದಲ್ಲಿ ನೀಡಬೇಕೆಂದು ಚರ್ಚಿಸಲಾಯಿತು.

ಸಮಾವೇಶದಲ್ಲಿ "ಕಾಫಿ–ಮೌಲ್ಯವರ್ಧನೆ–ಸಂಸ್ಕರಣೆ–ಮಾರುಕಟ್ಟೆ" ವಿಷಯದ ಕುರಿತು ವಿಶೇಷ ಅಧಿವೇಶನವನ್ನು ಏರ್ಪಡಿಸಲಾಗಿತ್ತು ಈ ಅಧಿವೇಶನದಲ್ಲಿ ಕಾಫಿ ಮಂಡಳಿಯ ನಿರ್ದೇಶಕರಾದ (ಗುಣಮಟ್ಟ ಪರೀಕ್ಷೆ) ಡಾ. ಬಸವರಾಜು ರವರು ಭಾಗವಹಿಸಿ ಬೆಳೆಗಾರರು ಸಹಕಾರಿ ವ್ಯವಸ್ಥೆಯ ಮೂಲಕ ಕಾಫಿಯನ್ನು ಸಂಸ್ಕರಿಸಿ ಮೌಲ್ಯವರ್ಧನೆ ಮಾಡಿ ಮಾರುಕಟ್ಟೆ ಮಾಡಲು ವ್ಯವಸ್ಥಿತವಾಗಿ ಪ್ರಯತ್ನಿಸಿದರೆ ಮಾತ್ರ ಬೆಳೆಗಾರರು ಇಂದಿನ ಸಮಸ್ಯೆಗಳಿಂದ ಹೊರಬಂದು ಕಾಫಿ ಕೃಷಿಯನ್ನು ಉಳಿಸಿಕೊಂಡು ಮಾರುಕಟ್ಟೆಯನ್ನು ವಿಸ್ತರಿಸಲು ಸಾಧ್ಯ ಎಂದರು. ಇಂತಹ ಪ್ರಯೋಗಗಳನ್ನು ಕೇರಳದಲ್ಲಿ ರೈತರ ಬಹು ದೊಡ್ಡ ಸಹಕಾರಿ ಸಂಘಟನೆಯಾದ ಬ್ರಹ್ಮಗಿರಿ ರೈತ ಸಹಕಾರಿ ಸಂಘದ ಮೂಲಕ ನಡೆಸಲು ಪ್ರಯತ್ನಿಸುತ್ತಿರುವುದು ಶ್ಲಾಘನೀಯ ಎಂದರು.

ಸಮಾವೇಶದ ಅಧ್ಯಕ್ಷತೆಯನ್ನು ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ವಿಜುಕೃಷ್ಣನ್ ವಹಿಸಿದ್ದರು. ವೇದಿಕೆಯಲ್ಲಿ ಉಪಾಧ್ಯಕ್ಷರಾದ ಕೆ.ವರದರಾಜನ್, ಕರ್ನಾಟಕ ಬೆಳೆಗಾರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಯು.ಎಂ.ತೀರ್ಥಮಲ್ಲೇಶ್ ಇದ್ದರು. ಸಮಾವೇಶದ ಮೊದಲಿಗೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ ಸ್ವಾಗತಿಸಿದರು ಕೊನೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಯು.ಬಸವರಾಜು ವಂದಿಸಿದರು.

ಕಾಫಿ ಬೆಳೆಗಾರರ ನಡುವೆ ಸಂಘಟನೆಗನ್ನು ಬಲಿಷ್ಟವಾಗಿ ಕಟ್ಟಲು ಸಹಾಯವಾಗಲು ನೂತನ ಸಂಚಾಲನಾ ಸಮಿತಿಯೊಂದನ್ನು ರಚಿಸಲಾಯಿತು.

ನೂತನ ಸಂಚಾಲನಾ ಸಮಿತಿ :

ಸಂಚಾಲಕರು – ಪಿ.ಕೃಷ್ಣಪ್ರಸಾದ್

ಸಹ ಸಂಚಾಲಕರು:

ಎಚ್.ಆರ್.ನವೀನ್‌ಕುಮಾರ್ (ಕರ್ನಾಟಕ)

ಪಿ.ಕೆ.ಸುರೇಶ್ (ಕೇರಳ)

ಯು.ಎಂ. ತೀರ್ಥಮಲ್ಲೇಶ್ (ಕೆಜಿಎಫ್)

ಸದಸ್ಯರುಗಳು:

ವಿಜು ಕೃಷ್ಣನ್ (ಅಖಿಲ ಭಾರತ ಕೇಂದ್ರ)

ಡಾ.ದುರ್ಗಾಪ್ರಸಾದ್ (ಕರ್ನಾಟಕ)

ಬಿ.ಎಸ್.ಜೈರಾಂ (ಕೆಜಿಎಫ್)

ಪಿ.ಪಿ.ಚಂದ್ರನ್ (ಕೇರಳ)

ಸೇತು ಮುತ್ತುಲಿಂಗಂ (ತಮಿಳುನಾಡು)

ದಸರ ಹಬ್ಬ ಮತ್ತು ಸಾಲು ರಜೆ ಇದ್ದುದರಿಂದ "ಜನಶಕ್ತಿ" ಕನ್ನಡ ವಾರ ಪತ್ರಿಕೆಯ ಸಂಚಿಕೆ 43 ಪ್ರಕಟಗೊಂಡಿರುವುದಿಲ್ಲ.

– ಸಂ.

ನಾಳಿನ ಕಾರ್ಯಕ್ರಮಗಳು

ಕರ್ನಾಟಕ ಗ್ರಾಮ ಪಂಚಾಯತ್ ರಾಜ್ಯ ಸಮ್ಮೇಳನ
ಮೈಸೂರು, ಅಕ್ಟೋಬರ್ 27–29

ಜೆಸಿಟಿಯು ರಾಜ್ಯ ಸಮಾವೇಶ, ಶಿಕ್ಷಕರ ಸದನ ಬೆಂಗಳೂರು
ಅಕ್ಟೋಬರ್ 30

ಅಖಿಲ ಭಾರತ ಎಸ್.ಎಫ್.ಐ. ಸಮ್ಮೇಳನ
ಶಿಮ್ಲಾ, ಅಕ್ಟೋಬರ್ 30–ನವೆಂಬರ್ 2

'ನನ್ನ ಉದ್ಯೋಗ ಎಲ್ಲಿ?' ದೆಹಲಿ ಚಲೋ
ಡಿ.ವೈ.ಎಫ್.ಐ., ನವೆಂಬರ್ 3

ಸಿಪಿಐ(ಎಂ) ರಾಜ್ಯ ಮಟ್ಟದ ಅಧ್ಯಯನ ಶಿಬಿರ
ಕೊಪ್ಪಳ, ನವೆಂಬರ್ 9–14

ಕಿಸಾನ್ ಲಾಂಗ್ ಮಾರ್ಚ್
ದೆಹಲಿ, ನವೆಂಬರ್ 28–30

ಜನನುಡಿ 2018, ಅಭಿಮತ
ಶಾಂತಿ ಕಿರಣ, ಮಂಗಳೂರು ಡಿಸೆಂಬರ್ 1–2+

ಅಚ್ಛೇ ದಿನ್‌ಗಳಲ್ಲಿ "ವಿದೇಶಿ ಕಪ್ಪು ಹಣ ವಸೂಲಿಯೆಷ್ಟು? ಜನಗಳ ಬ್ಯಾಂಕ್ ಖಾತೆಗಳಲ್ಲಿ ಜಮಾ ಮಾಡಿದ್ದೆಷ್ಟು?"



ಒಬ್ಬ ನಾಗರಿಕರ ಈ ಪ್ರಶ್ನೆಗಳಿಗೆ 15ದಿನಗಳೊಳಗೆ ಉತ್ತರಿಸಿ ಎಂದು ಪ್ರಧಾನ ಮಂತ್ರಿ ಕಚೇರಿ(ಪಿಎಂಒ)ಗೆ ಕೇಂದ್ರೀಯ ಮಾಹಿತಿ ಆಯೋಗ(ಸಿಐಸಿ)ನಿರ್ದೇಶನ ನೀಡಿದೆ (ಪಿಟಿಐ ವರದಿ, ಅಕ್ಟೋಬರ್21).

ಲೋಕಸಭಾ ಚುನಾವಣೆಗಳಲ್ಲಿ, ಈಗಿನ ಪ್ರಧಾನಿಗಳು ಆಗ ಪ್ರಧಾನಿ ಪಟ್ಟಾಕಾಂಕ್ಷಿಯಾಗಿ ವಿದೇಶಗಳಲ್ಲಿ ಪೇರಿಸಿಟ್ಟ ಕಪ್ಪು ಹಣವನ್ನು ವಾಪಾಸು ತರುತ್ತೇನೆ, ಇದರಿಂದ ಪ್ರತಿಯೊಬ್ಬ ಭಾರತೀಯನ ಬ್ಯಾಂಕ್ ಖಾತೆಯಲ್ಲಿ 15 ಲಕ್ಷ ರೂ. ಜಮಾ ಮಾಡಲಾಗುವುದು ಎಂದು ಮತ್ತೆ-ಮತ್ತೆ ಆಶ್ವಾಸನೆ ನೀಡಿದ್ದು ಬಹುಪಾಲು ಜನತೆಗೆ ಕೇವಲ ಚುನಾವಣಾ ಪೊಳ್ಳು ಎಂದು ಮನವರಿಕೆಯಾಗಿರುವಾಗಲೇ, ನೋಟುರದ್ದತಿಯ ನಂತರವಂತೂ ಮರೆಯುವುದೇ ಕ್ಷೇಮ ಎಂದು ಭಾವಿಸಿ ಬಿಟ್ಟಿರುವಾಗಲೇ, ಇದನ್ನು ಕೇಂದ್ರೀಯ ಮಾಹಿತಿ ಆಯೋಗ ಮತ್ತೆ ರಂಗಸ್ಥಳದ ಮಧ್ಯಕ್ಕೆ ತಂದಿದೆ.

ಸಂಜೀವ್ ಚತುರ್ವೇದಿ ಎಂಬ ಭಾರತೀಯ ಅರಣ್ಯ ಸೇವೆಯ ನಿವೃತ್ತ ಹಿರಿಯ ಅಧಿಕಾರಿ ಹಾಗೂ ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕಾಗಿ ಮ್ಯಾಗ್ಸೆಸೆ ಪ್ರಶಸ್ತಿ ಪಡೆದವರು ಈ ಮೇಲಿನ ಪ್ರಶ್ನೆಗಳನ್ನು ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಪಿಎಂಒಗೆ ಕೇಳಿದ್ದರು. ಇದು ಈ ಕಾಯ್ದೆಯ ಸೆಕ್ಷನ್ 2(ಎಫ್) ಅಡಿಯಲ್ಲಿ ಮಾಹಿತಿ ಎಂಬ ನಿರೂಪಣೆಯಲ್ಲಿ ಬರುವುದಿಲ್ಲ ಎಂದು ಅದಕ್ಕೆ ಉತ್ತರವನ್ನು ನಿರಾಕರಿಸಲಾಯಿತು. ಚತುರ್ವೇದಿ ಇದರ ವಿರುದ್ಧ ಕೇಂದ್ರೀಯ ಮಾಹಿತಿ ಆಯುಕ್ತ(ಸಿಐಸಿ)ರಿಗೆ ಅಪೀಲು ಮಾಡಿದ್ದರು. ಇದು ಈಗ ಪ್ರಧಾನಿ ಪಟ್ಟದಲ್ಲಿರುವವರ ಪ್ರಧಾನ ಆಶ್ವಾಸನೆಯಾಗಿತ್ತು ಮಾತ್ರವಲ್ಲ, ಪ್ರಧಾನ ಮಂತ್ರಿಯಾದ ಮೇಲೂ ಮತ್ತೆ-ಮತ್ತೆ 'ಮನದ ಮಾತು'ಗಳಲ್ಲಿ ಇದರ ಪುನರಾವರ್ತನೆಯಾಗಿತ್ತು. ಆದ್ದರಿಂದ ಖಂಡಿತವಾಗಿಯೂ ಈ ನಿಟ್ಟಿನಲ್ಲಿ ಪ್ರಯತ್ನ ನಡೆದಿರುತ್ತದೆ, ಮತ್ತು ಅದರ ಮಾಹಿತಿ ಪಿಎಂಒ ಬಳಿ ಇರುತ್ತದೆ, ಅದನ್ನು ತಿಳಿಸಬೇಕು ಎಂದು ಸಿಐಸಿ ಮುಂದೆ ವಾದ ಮಾಡಿದರು. ಈಗ ಸಿಐಸಿ ಇದನ್ನು ಪುಸ್ಕರಿಸಿ ಪಿಎಂಒ ಗೆ ಈ ಕುರಿತ ಮಾಹಿತಿಯನ್ನು 15 ದಿನಗಳೊಳಗೆ ಕೊಡಬೇಕು ಎಂದು ತಾಕೀತು ಮಾಡಿದ್ದಾರೆ.

ಇಷ್ಟೇ ಅಲ್ಲ, ಚತುರ್ವೇದಿಯವರು ಈಗಿನ ಕೇಂದ್ರ ಸಂಪುಟದಲ್ಲಿನ ಮಂತ್ರಿಗಳ ಮೇಲೆ ಬಂದಿರುವ ಭ್ರಷ್ಟಾಚಾರದ ಆಪಾದನೆಗಳ ಬಗ್ಗೆಯೂ ಮಾಹಿತಿ ಕೇಳಿದ್ದರು. ಕೇಂದ್ರ ಆರೋಗ್ಯ ಮಂತ್ರಿಗಳ ಮೇಲೆ ಆರೋಪಗಳ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಬರೆದಾಗ ಆ ಬಗ್ಗೆ ಅವರು ಆರೋಗ್ಯಮಂತ್ರಿಗಳೊಂದಿಗೆ ಮಾತಾಡಿದ್ದರು, ಪಿಎಂಒ ಕೂಡ ಮತ್ತೆ-ಮತ್ತೆ ಆರೋಗ್ಯ ಮಂತ್ರಾಲಯವನ್ನು ಕೇಳಿತ್ತು, ಅದರಿಂದಾಗಿ ಈ ನಿಟ್ಟಿನಲ್ಲಿಯೂ ಖಂಡಿತಾ ಕ್ರಮಗಳನ್ನು ಕೈಗೊಂಡಿರುತ್ತಾರೆ. ಅದರ ಮಾಹಿತಿ ನೀಡಬೇಕು ಎಂದೂ ಚತುರ್ವೇದಿ ಕೇಳಿದ್ದರು. ಈ ಬಗ್ಗೆಯೂ ಮತ್ತು ಇತರ ಕೇಂದ್ರ ಮಂತ್ರಿಗಳ ಮೇಲಿನ ಭ್ರಷ್ಟಾಚಾರದ ಆಪಾದನೆಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ಕೂಡ ತಿಳಿಸಬೇಕು ಎಂದೂ ಪಿಎಂಒಗೆ ನಿರ್ದೇಶನ ನೀಡಲಾಗಿದೆ ಎಂದು ವರದಿಯಾಗಿದೆ. ಜತೆಗೆ ಚತುರ್ವೇದಿಯವರು ಕೇಳಿರುವಂತೆ, ಜೂನ್ 1, 2014ರಿಂದ ಆಗಸ್ಟ್5, 2017ರ ನಡುವೆ ಕೇಂದ್ರೀಯ ಮಂತ್ರಿಗಳ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಸಲ್ಲಿಸಿದ ಆಪಾದನೆಗಳ ಪ್ರಮಾಣೀಕೃತ ಪ್ರತಿಗಳನ್ನು ಕೇಳರುವ ಚತುರ್ವೇಧಿಯವರಿಗೆ ಅವನ್ನೆಲ್ಲ ಕೊಡಬೇಕು ಎಂದೂ ಸಿಐಸಿ ನಿರ್ದೇಶನ ನೀಡಿದ್ದಾರಂತೆ.

ಅಂದರೆ ಇನ್ನು 15 ದಿನಗಳಲ್ಲಿ ನಮ್ಮ ಬ್ಯಾಂಕ್ ಖಾತೆಗಳಲ್ಲಿ ಎಷ್ಟು ಹಣ ಜಮಾ ಆಗುತ್ತದೆ ಎಂದು ತಿಳಿಯುತ್ತದೆ! ಅಥವ ಅದು ಕೇವಲ ಜುಮ್ಲಾ ಎಂದು ಅಧಿಕೃತವಾಗಿ ತಿಳಿಯಬಹುದೇನೋ? ಆಥವ ಇಂತಿಷ್ಟು ಜಮಾ ಆಗಿದೆ, ಅದನ್ನು 'ಸ್ವಚ್ಛತಾ ಆಂದೋಲನ'ಕ್ಕೆ ಡಿಜಿಟಲ್ ಟ್ರಾನ್ಸ್‌ಫರ್ ಮಾಡಿದ್ದೀರಿ ಎಂಬ 'ಮಾಹಿತಿ' ಕೊಡಬಹುದೋ? ಕಾದು ನೋಡೋಣ.

ಒಂದು ಬಾರಿಯೂ 'ಜೈಹಿಂದ್' ಕೇಳಬರಲಿಲ್ಲ!

ನೇತಾಜಿ ಸುಭಾಷ್ ಚಂದ್ರ ಬೋಸ್‌ರವರು ಸಿಂಗಾಪುರದಲ್ಲಿ ತಾತ್ಕಾಲಿಕ 'ಆಝಾದ್ ಹಿಂದ್ ಸರಕಾರ' ರಚಿಸಿದ 75ನೇ ವಾರ್ಷಿಕೋತ್ಸವ ವನ್ನು ಅಕ್ಟೋಬರ್ 21 ರಂದು ಆಚರಿಸಲಾಗಿದೆ. ಅಲ್ಲಿ ಆಝಾದ್ ಹಿಂದ್ ಸರಕಾರದ ಪ್ರಧಾನ ಮಂತ್ರಿಯಾಗಿ ಪ್ರತಿಜ್ಞೆ ಸ್ವೀಕರಿಸುತ್ತ ಅವರು ಕೊಟ್ಟ 'ಜೈಹಿಂದ್' ಜಾತ್ಯತೀತ ಘೋಷಣೆ, ಆಗ ದೇಶದಲ್ಲಿ ಹರಡಲಾರಂಭಿಸಿದ್ದ ಹಿಂದೂ-ಮುಸ್ಲಿಂ ಅನೈಕ್ಯತೆಯ ಭೀತಿಯ ನಡುವೆ ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯುತ್ ಸಂಚಾರ ತಂದಿತು ಎಂದು ಆಝಾದ್ ಹಿಂದ್ ಸೇನೆಯಲ್ಲಿ ಭಾಗವಹಿಸಿದವರು ನೆನಪಿಸಿಕೊಂಡಿದ್ದಾರೆ.

ಆದರೆ ಕೆಂಪುಕೋಟೆಯಲ್ಲಿ ನಡೆದ 75ನೇ ವಾರ್ಷಿಕೋತ್ಸವದ ಸರಕಾರೀ ಆಚರಣೆಯಲ್ಲಿ ಒಂದು ಬಾರಿಯೂ 'ಜೈಹಿಂದ್' ಘೋಷಣೆ ಕೇಳಬರಲಿಲ್ಲ-ಕೇಳಬಂದದ್ದು 'ಭಾರತ್ ಮಾತಾಕೀ ಜೈ', ಅದಕ್ಕಿಂತಲೂ ಹೆಚ್ಚಾಗಿ 'ವಂದೇ ಮಾತರಂ'. ನಡುನಡುವೆ 'ಮೋದಿ..ಮೋದಿ..ಮೋದಿ.' **ನೇತಾಜಿಯವರ ಪ್ರತೀಕದಂತಿರುವ ಆಝಾದ್ ಹಿಂದ್ ಸೇನೆಯ ಸೈನಿಕ ಟೋಪಿ ಧರಿಸಿದ್ದ ಪ್ರಧಾನ ಮಂತ್ರಿಗಳ ಭಾಷಣದಲ್ಲೂ ಆರಂಭದಲ್ಲಿ ಎರಡು ಬಾರಿ 'ಭಾರತ್ ಮಾತಾಕೀ ಜೈ', ಮತ್ತು ಅಂತ್ಯದಲ್ಲಿ ಮತ್ತೆ ಮೂರು ಬಾರಿ 'ಭಾರತ್ ಮಾತಾಕೀ ಜೈ' ಹಾಗೂ ಹತ್ತು ಬಾರಿ 'ವಂದೇ ಮಾತರಂ' ಕೇಳಬಂತು. ಆದರೆ ಒಂದು ಬಾರಿಯೂ 'ಜೈಹಿಂದ್' ಕೇಳಬರಲಿಲ್ಲ ಎಂದೊಬ್ಬ ಹಿರಿಯರು ಟಿಪ್ಪಣಿ ಮಾಡಿದ್ದಾರೆ.**

"ತುಮ್ ಹಮ್‌ಕೊ ಖೂನ್ ದೋ, ಮೈಂ ತುಮ್ ಕೋ ಆಝಾದಿ ದೂಂಗಾ" (ನೀನು ನಮಗೆ ರಕ್ತ ಕೊಡು, ನಾನು ನಿನಗೆ ಸ್ವಾತ್ರಂತ್ರ್ಯ ಕೊಡಿಸುತ್ತೇನೆ) ಎಂದು ದೇಶದ ಆಗಿನ ಯುವಜನರಿಗೆ ನೇತಾಜಿಯವರು ನೀಡಿದ್ದ ಆಹ್ವಾನವನ್ನೂ ಅವರು ಪರೋಕ್ಷವಾಗಿಯಷ್ಟೇ ನೆನಪಿಸಿದರು ಎಂಬುದನ್ನೂ ಹಲವರು ಮಾರ್ಮಿಕವಾಗಿಯೇ ಗಮನಿಸಿದರು.

ಚುನಾವಣಾ ಭಾಷಣಗಳ ಸೀಝನ್ ಆರಂಭವಾಗಿದೆ ತಾನೇ!



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಅಚ್ಛೇದಿನ್ ಕಾರ್ಯಶೈಲಿಯ ತನಿಖೆಯೇ ಆದ ಎರಡು ಎನ್‌ಐಎ ತನಿಖೆಗಳು

ರಾಷ್ಟ್ರೀಯ ತನಿಖಾ ಏಜೆನ್ಸಿ(ಎನ್‌ಐಎ) ಕರಿತಂತೆ ಎರಡು ಸುದ್ದಿಗಳು ಅಚ್ಛೇ ದಿನ್‌ಗಳ ಕಾರ್ಯಶೈಲಿ/ ತಂತ್ರಗಳ ಮೇಲೆ ಬೆಳಕು ಚೆಲ್ಲಿವೆ ಎನ್ನಬಹುದು.

ಇಸ್ಲಾಮಿಗೆ ಮತಾಂತರ ಹೊಂದಿ ಶಫಿನ್ ಜಹಾನ್ ಎಂಬಾತನನ್ನು ಮದುವೆಯಾದ ಹದಿಯಾ ಕುರಿತ ಮೊಕದ್ದಮೆಯ ಹಿನ್ನೆಲೆಯಲ್ಲಿ ಅಚ್ಛೇದಿನ್‌ಗಳಲ್ಲಿ ಹುಟ್ಟು ಹಾಕಿದ 'ಲವ್ ಜಿಹಾದ್' ಪ್ರಚಾರವನ್ನು ಕೇರಳಕ್ಕೆ 'ಒಯ್ಯಲಾಯಿತು. ಕೇರಳದ ಹೈಕೋರ್ಟ್ ಕೂಡ ಇದರಿಂದ ಪ್ರಭಾವಿತಗೊಂಡಂತೆ ಕಂಡು ಬಂದುದು ಹದಿಯಾಳ ಕುರಿತ ಅದರ ತೀರ್ಪಿನಲ್ಲಿ ಕಂಡು ಬಂದಿತ್ತು. ಅದನ್ನು ಸುಪ್ರಿಂ ಕೋರ್ಟ್ ಸರಿಪಡಿಸಿತು. ಆಸಂದರ್ಭದಲ್ಲಿಕೇರಳದಲ್ಲಿ 'ಲವ್‌ಜಿಹಾದ್'ನ ತನಿಖೆಯನ್ನು' ಎನ್‌ಐಎ ಗೆ ವಹಿಸಲಾಯಿತು. ಎನ್‌ಐಎ ಅದಾಗಲೇ ನ್ಯಾಯಾಲಯದಲ್ಲಿದ್ದ 89 ಅಂತರ-ಧರ್ಮೀಯ ಮದುವೆಗಳ ಕೇಸುಗಳಲ್ಲಿ 11ನ್ನು ತಗೊಂಡು ತನಿಖೆ ನಡೆಸಿತು. ಇವುಗಳಲ್ಲಿ 'ಲವ್' ಇತ್ತು ನಿಜ, ಆದರೆ 'ಜಿಹಾದ್' ಕಾಣಿಸಿಲ್ಲ, ಪ್ರೀತಿಸಿದವರಿಗಾಗಿ ಮತಾಂತರಗೊಂಡ ಅಂಶ ಇದ್ದರೂ, ಯೋಜಿತ ಕ್ರಿಮಿನಲ್ ತಂತ್ರ ಏನೂ ಕಾಣಲಿಲ್ಲ ಎಂಬ ತೀರ್ಮಾನಕ್ಕೆ ಈ ತನಿಖೆ ಬಂದಿದೆ ಎನ್ನಲಾಗಿದೆ.

ಮತ್ತೊಂದು ಎನ್‌ಐಎ ತನಿಖೆ ಉತ್ತರಪ್ರದೇಶದಲ್ಲಿ ಕಾನ್ಪುರದ ಬಳಿ ನಡೆದ ರೈಲು ಅಪಘಾತದ್ದು.


ನವಂಬರ್20,2016 ರಂದು ನಡೆದ ಈ ರೈಲು ಅಪಘಾತದಲ್ಲಿ 152 ಮಂದಿ ಸತ್ತರು. ಇದು ಬುಡಮೇಲು ಕೃತ್ಯ ಇರಬಹುದು ಎಂದು ರೈಲು ಮಂತ್ರಿಗಳು ತನಿಖೆಯನ್ನು ಎನ್‌ಐಎ ಗೆ ಒಪ್ಪಿಸಿದರು. ತನಿಖೆಯ ವಿವರಗಳೇನೂ ಇರದಿದ್ದರೂ, ವಿಧಾನಸಭಾ ಚುನಾವಣೆಗಳ ಪ್ರಚಾರದ ಸಮಯದಲ್ಲಿ ಸ್ವತಃ ಪ್ರಧಾನ ಮಂತ್ರಿ ಗಳು ಇದು ಗಡಿಯಾಚೆಯಿಂದ ನಡೆಸುತ್ತಿರುವ ಪಿತೂರಿಯ ಫಲಶ್ರುತಿ ಎಂದು ಸಾರಿದರು.

ಈಗ ಎನ್‌ಐಎ ಈ ವಿಷಯದಲ್ಲಿ ತಾವು ಯಾವ ಚಾರ್ಜ್‌ಶೀಟನ್ನೂ ಹಾಕುವುದಿಲ್ಲ, ಏಕೆಂದರೆ ಈ ಘಟನೆಯಲ್ಲಿ ಯಾವುದೇ ಸ್ಫೋಟಕವನ್ನು ಬಳಸಿದಂತಿಲ್ಲೆಂದು ಫೊರೆನ್ಸಿಕ್ ವರದಿಗಳು ಹೇಳಿವೆ, ಮತ್ತು ಈ ಘಟನೆಯಲ್ಲಿ ಯಾರ ಮೇಲೂ ಸಂದೇಹ ಬಂದಿಲ್ಲ ಎಂದು ಹೇಳಿದೆ. **ಗಡಿಯಾಚೆಯ ಮಂದಿಯ ಕೃತ್ಯಗಳ ಮರೆಯಲ್ಲಿ ತಮ್ಮ ವಿಫಲತೆಗಳನ್ನು ಮುಚ್ಚಿಹಾಕುವ ಮತ್ತೊಂದು ಪ್ರಯತ್ನ ಕಳೆದ ತಿಂಗಳು ಭಾರತ ಮತ್ತು ಪಾಕಿಸ್ತಾನದ ವಿದೇಶಾಂಗ ಮಂತ್ರಿಗಳು ಪ್ರಸ್ತಾವಿತ ಭೇಟಿಯ ಸಂದರ್ಭದಲ್ಲಿಯೂ ಇರುವಂತೆ ಕಾಣುತ್ತದೆ.**

ನ್ಯೂಯಾರ್ಕಿನಲ್ಲಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ ಸಭೆಯಲ್ಲಿ ಭಾಗವಹಿಸಲು ಎರಡೂ ದೇಶಗಳ ವಿದೇಶಾಂಗ ಮಂತ್ರಿಗಳು ನ್ಯೂಯಾರ್ಕಿನಲ್ಲಿದ್ದರು. ಈ ಸಂದರ್ಭದಲ್ಲಿ ಅವರು ಭೇಟಿಯಾಗುತ್ತಾರೆ ಎಂದು ಸಪ್ಟಂಬರ್ 20ರಂದುವಿದೇಶಾಂಗ ಇಲಾಖೆಯ ವಕ್ತಾರರು ಪ್ರಕಟಿಸಿದರು. ಆದರೆ ಮರುದಿನವೇ ಆ ಭೇಟಿಯನ್ನು ರದ್ದು ಮಾಡಲಾಗಿದೆ ಎಂದು ಪ್ರಕಟಿಸಲಾಯಿತು. ಇದಕ್ಕೆ ಎರಡು ಕಾರಣಗಳನ್ನು ಕೊಡಲಾಯಿತು. ಪಾಕಿಸ್ತಾನದ ಕಡೆಯಿಂದ ನಮ್ಮ ಬಿಎಸ್‌ಎಫ್‌ನ ಒಬ್ಬ ಯೋಧನನ್ನು ಬರ್ಬರವಾಗಿ ಕೊಲೆಮಾಡಿರುವುದು, ಇನ್ನೊಂದು ಪಾಕಿಸ್ತಾನ ಕಾಶ್ಮೀರಿ ಭಯೋತ್ಪಾದಕರ ಅಂಚೆ ಎಚೀಟಿಗಳನ್ನು ಪ್ರಕಟಿಸಿರುವುದು. ಇದು ಹೊಸ ಪಾಕಿಸ್ತಾನಿ ಸರಕಾರದ ದುಷ್ಟ ತಂತ್ರಗಳನ್ನು ತೋರಿಸುತ್ತದೆ ಎನ್ನಲಾಯಿತು. ಆದರೆ ಇದು ನಿಜವಾದ ಕಾರಣ ಅಲ್ಲ ಎಂದು ಆಗಲೇ ಬಹಳ ಮಂದಿಗೆ ಅನಿಸಿತ್ತು. ಏಕೆಂದರೆ ಅಂಚೆ ಚೀಟಿಗಳನ್ನು ಪ್ರಕಟಿಸಿದ್ದು ಹೊಸ ಸರಕಾರವಲ್ಲ, ಹಿಂದಿನ ಸರಕಾರ ಮತ್ತು ಬಿಎಸ್‌ಎಫ್ ಯೋಧರ ಜಘನ್ಯ ಹತ್ಯೆ ಭೇಟಿಯ ಬಗ್ಗೆ ಪ್ರಕಟಿಸುವ ಮೊದಲೇ ಸಪ್ಟಂಬರ್ 18ರಂದು ನಡೆದಿತ್ತು. ಅಲ್ಲದೆ "ಭಯೋತ್ಪಾದಕತೆ ಮತ್ತು ಮಾತುಕತೆ ಜತೆಜತೆಯಾಗಿ ನಡೆಯಲು ಸಾಧ್ಯವಿಲ್ಲ" ಎಂದು ಹೇಳುತ್ತಲೇ ಹಿಂದಿನ ಸರಕಾರದಂತೆ ಈ ಸರಕಾರವೂ ಮಾತುಕತೆಗಳನ್ನು ನಡೆಸಿದ ಸಂದರ್ಭಗಳೂ ಇವೆ.

ನಿಜವಾದ ಕಾರಣವೇನಿರಬಹುದು ಎಂಬುದರ ಸಂಕೇತ ಈಗ 'ಸಿಕ್ಕಿದೆ. ವಿದೇಶಾಂಗ ಮಂತ್ರಾಲಯ ಈ ಪ್ರಕಟಣೆ ಮಾಡುವ ಮೊದಲು ಪ್ರಧಾನ ಮಂತ್ರಿ ಕಚೇರಿಯೊಂದಿಗೆ ಸಮಾಲೋಚನೆ ನಡೆಸದಿರುವುದು ಕಾರಣವಿರಬಹುದು ಎನ್ನಲಾಗಿದೆ(ದಿ ಹಿಂದೂ, ಅಕ್ಟೋಬರ್ 21). ಪಾಕಿಸ್ತಾನದೊಂದಿಗೆ ಮಾತುಕತೆಯ ಬಗ್ಗೆ ಅಚ್ಚೇ ದಿನ್ ಸರಕಾರದಲ್ಲಿ ಗೊಂದಲವಿರುವುದನ್ನು ಇದು ತೋರಿಸುತ್ತದೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ. ಇದಕ್ಕೆ ಕಾರಣ ಈ ಸರಕಾರಕ್ಕೆ ಪಾಕಿಸ್ತಾನದೊಂದಿಗಿನ ಸಂಬಂಧ ಕೇವಲ ರಾಜತಾಂತ್ರಿಕ ಪ್ರಶ್ನೆಯಲ್ಲ, ಆಳುವ ಪಕ್ಷಕ್ಕೆ, ವಾಸ್ತವವಾಗಿ 'ಪರಿವಾರ'ಕ್ಕೆ ದೇಶದೊಳಗೆ ಅದರ ರಾಜಕೀಯ ಲಾಭ ಪಡೆಯುವ ಪ್ರಶ್ನೆಯೂ ಆಗಿರುವುದೇ ಇದಕ್ಕೆ ಕಾರಣ ಎನ್ನಲಾಗಿದೆ.

ಆರೆಸ್ಸೆಸ್ ಮುಖ್ಯಸ್ಥರು ತಮ್ಮ ಈ ವರ್ಷದ ವಿಜಯದಶಮಿ ಭಾಷಣದಲ್ಲಿ ವಿವಾದಿತ ಬಾಬ್ರಿ ಮಸೀದಿ ಜಾಗದಲ್ಲಿ ರಾಮಮಂದಿರ ಕಟ್ಟಲು ಒಂದು ಕಾನೂನನ್ನು ತರಬೇಕು ಎಂದು ಆಗ್ರಹಿಸಿದ್ದಾರೆ. ಮಂದಿರವನ್ನು ಈಗಾಗಲೇ ಕಟ್ಬೇಕಿತ್ತು ಎಂದ ಅವರು ಸುಪ್ರಿಂ ಕೊರ್ಟ್ ತನ್ನ ನಿರ್ಧಾರವನ್ನು ಬೇಗನೇ ಮಾಡಬೇಕು ಎಂದೂ ಆಗ್ರಹಿಸಿದ್ದಾರೆ- ಸುದ್ದಿ



ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದೂ

ಜಮ್ಮು-ಕಾಶ್ಮೀರದಲ್ಲಿ ಗೀತೆ ಮತ್ತು ರಾಮಾಯಣ ಖರೀದಿಯ ನಿರ್ದೇಶನ-ಮರುದಿನವೇ ವಾಪಾಸ್ ಆದೇಶ


ಅಕ್ಟೋಬರ್ 22:"ಶ್ರೀಮದ್ ಭಗವದ್ಗೀತಾದ ಉರ್ದು ಆವೃತ್ತಿ ಮತ್ತು ಶ್ರೀ ಸರ್ವಾನಂದ ಪ್ರೇಮಿ ವಿರಚಿತ 'ಕೊಶುರ್ ರಾಮಾಯಣ' ಕೃತಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಖರೀದಿಸುವುದನ್ನು ಪರಿಶೀಲಿಸಬೇಕು. ಈ ವಿಷಯದಲ್ಲಿ ಮುಂದಿನ ಕ್ರಮ ಕೈಗೊಳ್ಳುವಂತೆ ಕೋರಲು ನಿರ್ದೇಶನ ನೀಡಲಾಗಿದೆ" ಇದು ಜಮ್ಮು ಮತ್ತು ಕಾಶ್ಮೀರದ ಶಾಲಾಶಿಕ್ಷಣದ ನಿರ್ದೇಶಕರು ರಾಜ್ಯಪಾಲರ ಕಚೇರಿಯಿಂದ ಪಡೆದ ಪತ್ರ. ಈಗ ರಾಜ್ಯಪಾಲರ ಆಳ್ವಿಕೆಯಲ್ಲಿರುವುದರಿಂದ ಇದು ಕೇಂದ್ರ ಸರಕಾರದ ನಿರ್ದೇಶನ ಎಂಬುದರಲ್ಲಿ ಸಂದೇಹವಿಲ್ಲ.

ಅಕ್ಟೋಬರ್ 23: ಜಮ್ಮು ಮತ್ತು ಕಾಶ್ಮೀರದ ಪೋಲೀಸ್ ಇಲಾಖೆಯ ಟ್ವೀಟ್: "ಕೆಲವು ಧಾರ್ಮಿಕ ಪುಸ್ತಕಗಳನ್ನು ಪರಿಚಯಿಸುವ ಕುರಿತ ಶಿಕ್ಷಣ ಇಲಾಖೆ ಹೊರಡಿಸಿದ ಸುತ್ತೋಲೆಯನ್ನು ಸರಕಾರದ ಮುಖ್ಯ ಕಾರ್ಯದರ್ಶಿಯವರ ಆದೇಶದ ಮೇರೆಗೆ ಆರಂಭದಿಂದಲೇ ಹಿಂತೆಗೆದುಕೊಳ್ಳಲಾಗಿದೆ" !

ಇವೆರಡು ಆದೇಶಗಳ ನಡುವೆ ಆರಿಸಿದ ಕೆಲವು ಧಾರ್ಮಿಕ ಪುಸ್ತಕಗಳ ಬಗ್ಗೆಯಷ್ಟೇ ಏಕೆ ನಿರ್ದೇಶನ ಎಂದು ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಟ್ವೀಟ್ ಮಾಡಿದ್ದರೆಂದು ವರದಿಯಾಗಿದೆ.

ಇದು 'ಉತ್ತಮ ಆಳ್ವಿಕೆ'ಯ ಪರಿಯೋ ಅಥವ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ರಾಜಕೀಯ ಆಟದ ಉದ್ದೇಶಪೂರ್ವಕ ಪ್ರಯತ್ನವೋ ಎಂದು ರಾಜಕೀಯ ವೀಕ್ಷಕರು ಕೇಳುತ್ತಿದ್ದಾರೆ.

ಐಎಲ್&ಎಫ್ಎಸ್: ಸತ್ಯಂ, ಲೇಹ್ಮನ್ ಬ್ರದರ್ಸ್ ಪ್ರಕರಣಗಳ ಸಂಗಮವೇ?



ಸಂಗ್ರಹ: ಕೆ.ಎಂ.ನಾಗರಾಜ್

ಸತ್ಯಂ ಪ್ರಕರಣ ಸುಳ್ಳು ಲೆಕ್ಕಪತ್ರಗಳ ಹಗರಣವಾಗಿದ್ದರೆ, ಲೇಹ್ಮನ್ ಬ್ರದರ್ಸ್ ಪ್ರಕರಣದಲ್ಲಿ ಬಿಕ್ಕಟ್ಟಿಗೆ ತಲುಪುವವರೆಗೂ ಎಲ್ಲವೂ ಚೆನ್ನಾಗಿದೆ ಎಂದು ಹೇಳಲಾಗುತ್ತಿತ್ತು. ಐಎಲ್&ಎಫ್ಎಸ್ ಪ್ರಕರಣದಲ್ಲಿ ಇವೆರಡೂ ಅಂಶಗಳಿವೆ.

ಐಎಲ್&ಎಫ್ಎಸ್ (ಇನ್ಫ್ರಾಸ್ಟ್ರಕ್ಚರ್ ಲೀಸಿಂಗ್ & ಫೈನ್ಯಾನ್ಸಿಯಲ್ ಸರ್ವೀಸಸ್–IL&FS) ಎಂಬ ಸಂಸ್ಥೆಯು ಒಂದು ತಿಂಗಳಿನಿಂದ ಸುದ್ದಿಯಲ್ಲಿದೆ. ಮುಖ್ಯವಾಗಿ ವಾಣಿಜ್ಯ ಮತ್ತು ವ್ಯವಹಾರಗಳ ಸುದ್ದಿಗಳಿಗೆ ಮೀಸಲಾದ ಪತ್ರಿಕೆಗಳಲ್ಲಿ ಅದರದ್ದೇ ಸುದ್ದಿ. ಅದಕ್ಕೆ ಕಾರಣವೂ ಇದೆ. ಈ ಸಂಸ್ಥೆಯ ವ್ಯವಹಾರಗಳ ಬಗ್ಗೆ ಲಭ್ಯವಿರುವ ಮಾಹಿತಿಗಿಂತ, ಗೊತ್ತಿಲ್ಲದ ವ್ಯವಹಾರ–ವಿಷಯಗಳು ಹೆಚ್ಚಿಗೆ ಇರುವ ಕಾರಣದಿಂದಾಗಿ.

ಮೋದಿ ಸರ್ಕಾರವು ಐಎಲ್&ಎಫ್ಎಸ್ ಸಂಸ್ಥೆಯ ಹಳೆಯ ನಿರ್ದೇಶಕ ಮಂಡಳಿಯನ್ನು ವಜಾ ಮಾಡಿ, ಕೋಟಕ್ ಮಹೀಂದ್ರ ಬ್ಯಾಂಕಿನ ಒಡೆಯ ಉದಯ್ ಕೋಟಕ್ ನೇತೃತ್ವದಲ್ಲಿ ಏಳು ಸದಸ್ಯರ ಹೊಸ ನಿರ್ದೇಶಕ ಮಂಡಳಿಯ ನೇಮಕವನ್ನು ಬಹಳ ಮಂದಿ ನಿಟ್ಟುಸಿರಿನಿಂದ ಸ್ವಾಗತಿಸಿ, ಮೆಚ್ಚುಗೆ ಸೂಚಿಸಿದ್ದಾರೆ. ದಗಾಕೋರರು ನಿರ್ಗಮಿಸಿದ್ದಾರೆ, ಸಂಭಾವಿತರು ಬಂದಿದ್ದಾರೆ ಎಂಬ ಆಶಾಭಾವನೆ ಮೂಡಿದೆ, ಹಣಕಾಸು ಸಚಿವಾಲಯದಲ್ಲಿ, ಕಾರ್ಪೊರೇಟ್ ವಲಯದಲ್ಲಿ, ಮತ್ತು ಮಾಧ್ಯಮಗಳಲ್ಲಿ.

ಆದರೆ, ಹೊಸ ನಿರ್ದೇಶಕ ಮಂಡಳಿಯ ಚೊಚ್ಚಲು ಸಭೆಯ ನಂತರ, ಐಎಲ್&ಎಫ್ಎಸ್ ಎದುರಿಸುತ್ತಿರುವ ಸಮಸ್ಯೆಯ ಜಟಿಲತೆ ಮತ್ತು ಮುಖ್ಯವಾಗಿ, ಐಎಲ್&ಎಫ್ಎಸ್ ಸಂಸ್ಥೆಯು 348 ಅಂಗ ಸಂಸ್ಥೆಗಳನ್ನು ಹೊಂದಿದೆ ಎಂಬ ಸ್ಫೋಟಕ ಮಾಹಿತಿಯನ್ನು ಉದಯ್ ಕೋಟಕ್ ಹೊರ 'ಹಾಕಿರುವುದು ಹಣಕಾಸು ವಲಯದಲ್ಲಿ ಆಶ್ಚರ್ಯ ಮತ್ತು ಆತಂಕ ಮೂಡಿಸಿದೆ. ಏಕೆಂದರೆ, ಐಎಲ್&ಎಫ್ಎಸ್ 169 ಅಂಗ ಸಂಸ್ಥೆಗಳನ್ನು ಹೊಂದಿದೆ ಎಂದೇ ಎಲ್ಲರೂ ಇಲ್ಲಿಯವರೆಗೆ ನಂಬಿದ್ದರು. ಹಾಗಾಗಿ, ಐಎಲ್&ಎಫ್ಎಸ್ ಪ್ರಕರಣವು ಅಂದುಕೊಂಡದ್ದಕ್ಕಿಂತಲೂ ವಿಚಿತ್ರ ತಿರುವು ಪಡೆಯುತ್ತಿದೆ.

ಐಎಲ್&ಎಫ್ಎಸ್ ಸಂಸ್ಥೆಯ 169 ಅಂಗ ಸಂಸ್ಥೆಗಳ 2017–18 ಸಾಲಿನ ಬ್ಯಾಲೆನ್ಸ್ ಷೀಟ್‌ಗಳನ್ನು ಪರಿಶೀಲಿಸಿದ ನಂತರ ಲೆಕ್ಕ ಪರಿಶೋಧಕರು ಕೊಟ್ಟಿರುವ ವರದಿಯ ಪ್ರಕಾರ ಐಎಲ್&ಎಫ್ಎಸ್ ಸಂಸ್ಥೆಯ ಒಟ್ಟು ಸಾಲ ಸುಮಾರು 91,000 ಕೋಟಿ ರೂಪಾಯಿಗಳು ಎಂದೇ ತಿಳಿಯಲಾಗಿತ್ತು. ಏಕೆಂದರೆ, ಈ 169 ಅಂಗ ಸಂಸ್ಥೆಗಳ ಹೊರತಾಗಿ, ಉಳಿದ 179 ಅಂಗ ಸಂಸ್ಥೆಗಳ ಬಗ್ಗೆ ಲೆಕ್ಕ ಪರಿಶೋಧಕರು ಮೌನವಾಗಿದ್ದರು. ಈಗ ಬೆಳಕಿಗೆ ಬಂದಿರುವ ಮತ್ತು ಈವರೆಗೆ ಭೂಗತವಾಗಿದ್ದ 179 ಅಂಗ ಸಂಸ್ಥೆಗಳ ಹುಳುಕುಗಳು ಇನ್ನೂ ಬಯಲಾಗಿಲ್ಲ. ಹಾಗಾಗಿ, ಐಎಲ್&ಎಫ್ಎಸ್ ಸಂಸ್ಥೆಯ 91,000 ಕೋಟಿ ರೂಪಾಯಿಗಳ ಸಾಲದ ಬೆಟ್ಟ ಇನ್ನೂ ಎಷ್ಟು ದೊಡ್ಡದಾಗಿ ಬೆಳೆಯುತ್ತದೆ ಎಂಬುದನ್ನು ಈಗಲೇ ಹೇಳುವಂತಿಲ್ಲ.

ಇವರೆಷ್ಟು ಸಂಭಾವಿತರು?

ಐಎಲ್&ಎಫ್ಎಸ್ ಸಂಸ್ಥೆಯ ಈ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಒಂದು ಪ್ರಶ್ನೆ ಪ್ರಸ್ತುತವಾಗುತ್ತದೆ. ಗಬ್ಬೆದ್ದಿರುವ ಈ ಸಂಸ್ಥೆಯನ್ನು ಸ್ವಚ್ಛಗೊಳಿಸಲು ಸರ್ಕಾರ ನೇಮಿಸಿರುವ ಹೊಸ ನಿರ್ದೇಶಕ ಮಂಡಳಿಯ ಸದಸ್ಯರ ಹಿನ್ನೆಲೆಯನ್ನು ಕೆದಕಿದಾಗ, ಅವರಿಗೆ ಐಎಲ್&ಎಫ್ಎಸ್ ಸಂಸ್ಥೆಯ ಮುಖ್ಯ ಕಾರ್ಯೋದ್ದೇಶಗಳ – ಮೂಲಸೌಕರ್ಯಗಳ ಅಭಿವೃದ್ಧಿ ಮತ್ತು ಬ್ಯಾಂಕಿಂಗೇತರ ಹಣಕಾಸು ವಲಯಗಳ – ಪರಿಣಿತಿಯ ಅಭಾವ ಕಾಣುತ್ತದೆ. ಮೇಲಾಗಿ, ಐಎಲ್&ಎಫ್ಎಸ್ ಮತ್ತು ಅದರ ಅಂಗ ಸಂಸ್ಥೆಗಳು ಪರಸ್ಪರರಿಗೆ ಸಾಲ ಕೊಟ್ಟಿರುವುದು ಮತ್ತು ಪಡೆದಿರುವ ಅಂಶಗಳು ಮೊದಲೇ ಗೋಜಲಾಗಿದ್ದ ಪರಿಸ್ಥಿತಿಯನ್ನು ಇನ್ನಷ್ಟು ಗೊಂದಲಮಯಗೊಳಿಸಿವೆ.

ಹೊಸ ನಿರ್ದೇಶಕ ಮಂಡಳಿಯ ಸದಸ್ಯರಲ್ಲಿ ಕೆಲವರಿಗೆ ಇರುಸು ಮುರುಸಿನ ಪರಿಸ್ಥಿತಿ ಎದುರಾಗಿದೆ. ಈ ಮಹಾನುಭಾವರು ನಡೆಸುತ್ತಿರುವ ಸಂಸ್ಥೆಗಳಿಗೆ ಸಂಬಂಧಿಸಿದ ನಿಯಂತ್ರಕರು ನೀಡಿರುವ ನಿರ್ದೇಶನಗಳನ್ನು ಪಾಲಿಸುವುದರಲ್ಲಿ ಇವರು ಪ್ರದರ್ಶಿಸಿದ ಅಶಿಸ್ತು ಎದ್ದು ಕಾಣುತ್ತದೆ. ಕೋಟಕ್ ಮಹೀಂದ್ರ ಬ್ಯಾಂಕಿನಲ್ಲಿ, ಉದಯ್ ಕೋಟಕ್ ಹೊಂದಿರುವ ಷೇರುಗಳ ಪ್ರಮಾಣವನ್ನು, ಬ್ಯಾಂಕಿಂಗ್ ನಿಯಮಾವಳಿಗನುಸಾರವಾಗಿ, 20% ನಿಂದ 15%ಗೆ ಇಳಿಸುವಂತೆ ರಿಸರ್ವ್ ಬ್ಯಾಂಕ್ ನಿರ್ದೇಶನ ಕೊಟ್ಟಿತ್ತು. ಎನ್‌ಸಿಡಿಗಳ ನೀಡಿಕೆಯ ಮೂಲಕ ಷೇರುಗಳ ಪ್ರಮಾಣ ಕಡಿಮೆಯಾದಂತೆ ತೋರಿಸಿಕೊಳ್ಳುವ ಒಂದು ಪ್ರಸ್ತಾವನೆಯನ್ನು ರಿಸರ್ವ್ ಬ್ಯಾಂಕ್ ಮುಂದಿಟ್ಟು, ತಮ್ಮ ಉಲ್ಲಂಘನೆಯನ್ನು ಸಮರ್ಥಿಸಿಕೊಳ್ಳಲು ಉದಯ್ ಕೋಟಕ್ ಪ್ರಯತ್ನಿಸಿದರು. ರಿಸರ್ವ್ ಬ್ಯಾಂಕ್ ಅವರ ಪ್ರಸ್ತಾವನೆಯನ್ನು ತಳ್ಳಿಹಾಕಿತು. ಒಬ್ಬ ನುರಿತ ಬ್ಯಾಂಕರ್ ಆಗಿರುವ ಮತ್ತು ಕಾರ್ಪೊರೇಟ್ ಆಡಳಿತಗಾರಿಕೆ ಸಮಿತಿಯ ಅಧ್ಯಕ್ಷರಾಗಿದ್ದ ಉದಯ್ ಕೋಟಕ್ ಇಂತಹ ಕುತಂತ್ರಗಳ ಬಳಕೆಗೆ ಇಳಿದಿರುವ ಬಗ್ಗೆ ಅನೇಕ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಐಎಲ್&ಎಫ್ಎಸ್ ನಿರ್ದೇಶಕ ಮಂಡಳಿಯ ಇನ್ನೊಬ್ಬ ಸದಸ್ಯ ಜಿ ಎನ್. ಬಾಜಪೇಯಿ, ಎಲ್‌ಐಸಿ ಮತ್ತು ಸೆಬಿಯಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಹಿಂದೆ ಅಧ್ಯಕ್ಷರಾಗಿದ್ದರು. ಇವರು ನಿರ್ದೇಶಕ ಮಂಡಳಿಯ ಸದಸ್ಯರಾಗಿದ್ದ ಕಿಂಗ್‌ಫಿಷರ್ ಏರ್‌ಲೈನ್ಸ್ ಮತ್ತು ಧನಲಕ್ಷ್ಮಿ ಬ್ಯಾಂಕ್ ಸಂಸ್ಥೆಗಳು ಹಗರಣಗಳಿಗೆ ತುತ್ತಾದವು. ಇನ್ನೊಬ್ಬ ಸದಸ್ಯ ಜಿ.ಸಿ. ಚತುರ್ವೇದಿ ಕಾರ್ಯನಿರ್ವಹಣೇತರ ಅಧ್ಯಕ್ಷರಾಗಿರುವ ಐಸಿಐಸಿಐ ಬ್ಯಾಂಕ್ ಚಂದಾ ಕೊಚ್ಚರ್‌ಗೆ ಸಂಬಂಧಿಸಿದ ತನಿಖೆಗೆ ಸಿಕ್ಕಿ ಒದ್ದಾಡುತ್ತಿದೆ. ಹಾಗಾಗಿ, ಕೊನೆಯಪಕ್ಷ, ಇವರು ಈ ಹಗರಣಗಳ ನೈತಿಕ ಹೊಣೆಗಾರಿಕೆಯಿಂದ ಮುಕ್ತರಲ್ಲ.

ಹೊಸ ನಿರ್ದೇಶಕ ಮಂಡಳಿಯ ಚೊಚ್ಚಲು ಸಭೆಯಲ್ಲಿ ವಿನೀತ್ ನಯ್ಯಾರ್ ಅವರನ್ನು ಐಎಲ್&ಎಫ್ಎಸ್ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಹಾಗೂ ಉಪಾಧ್ಯಕ್ಷರನ್ನಾಗಿ ಆರಿಸಲಾಗಿದೆ. 2009ರಲ್ಲಿ, ಮುಳುಗುತ್ತಿದ್ದ ಸತ್ಯಂ ಕಂಪ್ಯೂಟರ್ಸ್ ವ್ಯವಹಾರಗಳನ್ನು ಮಹೀಂದ್ರ ಗುಂಪಿನ ಟೆಕ್ ಮಹೀಂದ್ರ ಕಂಪೆನಿಗೆ ವರ್ಗಾಯಿಸುವಲ್ಲಿ ವಿನೀತ್ ನಯ್ಯಾರ್ ಮುಖ್ಯ ಪಾತ್ರ ವಹಿಸಿದ್ದರು.

ಸತ್ಯಂ ಮರುಕಳಿಸುತ್ತಿದೆಯೇ?

ಸುಳ್ಳು ಲೆಕ್ಕ ಪತ್ರಗಳೇ ಪ್ರಧಾನವಾಗಿದ್ದ ಕಂಪೆನಿಯ ಹೆಸರು ಸತ್ಯಂ. ರಾಮಲಿಂಗ ರಾಜು ಸ್ಥಾಪಿಸಿದ್ದ ಈ ಕಂಪೆನಿಯನ್ನು, 1997ರಲ್ಲಿ, ಗಮನಾರ್ಹವಾದ ಮತ್ತು ವೇಗವಾಗಿ ಬೆಳೆಯುತ್ತಿರುವ ಉದ್ಯಮಶೀಲ ಕಂಪೆನಿ ಎಂದು ವಿಶ್ವ ಆರ್ಥಿಕ ಫೋರಂ ಗುರುತಿಸಿತ್ತು. ಆಗ, ಸತ್ಯಂ ಕಂಪ್ಯೂಟರ್ಸ್, ಭಾರತದ ನಾಲ್ಕನೆಯ ದೊಡ್ಡ ಐ.ಟಿ ಕಂಪೆನಿ ಎಂಬ ಖ್ಯಾತಿ ಪಡೆದಿತ್ತು. ನ್ಯೂಯಾರ್ಕ್, ಲಂಡನ್ ಷೇರು ಪೇಟೆಯಲ್ಲಿ ಮಾರಾಟವಾದ ಕಂಪ್ಯೂಟರ್ ಕಂಪೆನಿಯ ಷೇರುಗಳ ಪೈಕಿ, ಸತ್ಯಂ ಮೊದಲನೆಯದು. 2009 ರಲ್ಲಿ, ಸತ್ಯಂ ಕಂಪ್ಯೂಟರ್ಸ್ ವರ್ಷಗಟ್ಟಲೇ ಸುಳ್ಳು ಆದಾಯಗಳನ್ನು ವರದಿ ಮಾಡಿ 7,855 ಕೋಟಿ ರೂಗಳ ಒಂದು ದೊಡ್ಡ ವಂಚನೆಯ ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಂಡದ್ದು ಬಯಲಾಗಿತ್ತು. ಸತ್ಯಂ ಕಂಪ್ಯೂಟರ್ಸ್ ಲೆಕ್ಕ ಪತ್ರಗಳು, ಬ್ಯಾಂಕ್ ಸ್ಟೇಟ್‌ಮೆಂಟ್ ಮತ್ತು ವಿದೇಶಿ ವಿನಿಮಯ ಆದಾಯಗಳಿಗೆ ಸಂಬಂಧಿಸಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿತ್ತು. ಆಗ, ಸತ್ಯಂ ಪ್ರಕರಣವನ್ನು 2002ರಲ್ಲಿ ಮುಳುಗಿದ ಅಮೇರಿಕಾದ ದೈತ್ಯ ಇಂಧನ ಸಂಸ್ಥೆ ಎನ್ರಾನ್ ಹಗರಣಕ್ಕೆ ಹೋಲಿಸಲಾಗಿತ್ತು. ಅತಿ ಹೆಚ್ಚು ಲಾಭಗಳಿಸುವ ಕಂಪೆನಿ ಎಂದು ಬಿಂಬಿಸಿಕೊಳ್ಳುವ ಸಲುವಾಗಿಯೇ ತಮ್ಮ ವರಮಾನಗಳನ್ನು ಅತಿಯಾಗಿ ಹಿಗ್ಗಿಸಿ ತೋರಿಸುವ ಉದ್ದೇಶದಿಂದ ಈ ಎರಡೂ ಪ್ರಕರಣಗಳಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಲಾಗಿತ್ತು. ಐಎಲ್&ಎಫ್ಎಸ್ ಕೂಡ ಅದೇ ರೀತಿಯ ವಂಚನೆಯಲ್ಲಿ ತೊಡಗಿತ್ತೇ ಎಂಬ ಪ್ರಶ್ನೆ ಕಾಡುತ್ತಿದೆ.

ಐಎಲ್&ಎಫ್ಎಸ್ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಹೊಸದಾಗಿ ನಿಯುಕ್ತರಾದ ವಿನೀತ್ ನಯ್ಯಾರ್, ಸತ್ಯಂ ಪ್ರಕರಣದಲ್ಲಿ ಸುಳ್ಳು ದಾಖಲೆಗಳು/ಲೆಕ್ಕ ಪತ್ರಗಳನ್ನು ಸೃಷ್ಟಿಸಿದ ಘೋರ ಪಾತಕ ನಡೆದಿತ್ತು, ಐಎಲ್&ಎಫ್ಎಸ್‌ನಲ್ಲಿ ಅಂತಹ ಕೃತ್ಯ ನಡೆದಿರುವ ಬಗ್ಗೆ ಈ ವರೆಗೆ ಸಾಕ್ಷ್ಯಾಧಾರಗಳು ದೊರೆತಿಲ್ಲ ಎಂಬುದಾಗಿ ಹೇಳಿದ್ದಾರೆ. ಅವರು ಹೇಳುತ್ತಿರುವುದು ಸರಿ ಎನಿಸಿದರೂ, ಅಂತಹ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಏಕೆಂದರೆ, ಈಗ ಬೆಳಕಿಗೆ ಬಂದಿರುವ ಮತ್ತು ಈವರೆಗೆ ಭೂಗತವಾಗಿದ್ದ 179 ಅಂಗ ಸಂಸ್ಥೆಗಳ ಅಸ್ತಿತ್ವವೇ ಯಾರಿಗೂ ಗೊತ್ತಿರಲಿಲ್ಲ. ಸರ್ಕಾರವು, ಅವುಗಳನ್ನು ಚಿಕಿತ್ಸಕ ದೃಷ್ಟಿಯ ಲೆಕ್ಕ ಪತ್ರ ಪರಿಶೋಧನೆಗೆ ಒಳಪಡಿಸುವಂತೆ ಗಂಭೀರ ವಂಚನೆಗಳ ತನಿಖಾ ಸಂಸ್ಥೆಯನ್ನು (ಎಸ್‌ಎಫ್‌ಐಓ) ಕೋರಿದೆ. ಈ ತನಿಖೆ ಪೂರ್ಣಗೊಳ್ಳಲು ಬಹಳ ಸಮಯ ಹಿಡಿಯುತ್ತದೆ. ಅದೇನೇ ಇರಲಿ, ಐಎಲ್&ಎಫ್ಎಸ್‌ನಲ್ಲಿ ಅಂತಹ ಪಾತಕ ಕೃತ್ಯಗಳ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ರೇಟಿಂಗ್ ಏಜನ್ಸಿಗಳು, ಐಎಲ್&ಎಫ್ಎಸ್‌ನ ಹಣಕಾಸು ಸೇವೆಗಳ ವಿಭಾಗಕ್ಕೆ 2018ರ ಮಾರ್ಚ್‌ವರೆಗೂ ಉತ್ಕೃಷ್ಟ ದರ್ಜೆಯ ಸ್ಥಾನ ಮಾನದ ಸರ್ಟಿಫಿಕೇಟ್ ಕೊಟ್ಟಿದ್ದವು. ಆಗಸ್ಟ್‌ನಲ್ಲಿ ಐಎಲ್&ಎಫ್ಎಸ್‌ನ ಅವ್ಯವಹಾರಗಳ ವಾಸನೆ ಹೊಡೆದದ್ದೇ ತಡ, ಈ ರೇಟಿಂಗ್ ಏಜನ್ಸಿಗಳು ಅದರ ಸ್ಥಾನ ಮಾನವನ್ನು ಕೆಳದರ್ಜೆಗಿಳಿಸಿದವು. ಈ ರೇಟಿಂಗ್ ಏಜನ್ಸಿಗಳ ವರ್ತನೆಯು, ಒಂದೋ ಅವು ಐಎಲ್&ಎಫ್ಎಸ್‌ನೊಂದಿಗೆ ಶಾಮೀಲಾಗಿವೆ – ಅಮೇರಿಕಾದ ಲೇಹ್ಮನ್ ಬ್ರದರ್ಸ್ ಪ್ರಕರಣದ ರೀತಿಯಲ್ಲಿ, ಇಲ್ಲವೇ, ಐಎಲ್&ಎಫ್ಎಸ್ ತನ್ನ ವ್ಯವಹಾರಗಳ ಬಗ್ಗೆ, ಸುಳ್ಳು ಕಾಗದ ಪತ್ರಗಳು–ಕಡತಗಳು–ದಾಖಲೆಗಳನ್ನು ಸೃಷ್ಟಿಸಿದೆ – ಸತ್ಯಂ ಕಂಪ್ಯೂಟರ್ಸ್ ರೀತಿಯಲ್ಲಿ.

ಲೇಹ್ಮನ್ ಬ್ರದರ್ಸ್–ಸಾಮ್ಯತೆ, ವ್ಯತ್ಯಾಸಗಳು

ಲೇಹ್ಮನ್ ಬ್ರದರ್ಸ್ ಸಂಸ್ಥೆ ಮುಳುಗಿ, ಸರಿಯಾಗಿ ಹತ್ತು ವರ್ಷಗಳು ತುಂಬಿವೆ. 158 ವರ್ಷಗಳ ಇತಿಹಾಸದ, ಅಮೇರಿಕಾದ 4ನೇ ಅತಿ ದೊಡ್ಡ ಇನ್ವೆಸ್ಟ್‌ಮೆಂಟ್ ಬ್ಯಾಂಕ್ ಎಂಬ ಹೆಗ್ಗಳಿಕೆ ಪಾತ್ರವಾಗಿದ್ದ ಲೇಹ್ಮನ್ ಬ್ರದರ್ಸ್ ಸಂಸ್ಥೆಯು ಕಡಿಮೆ ಸಾಲಾರ್ಹತೆಯ ಅಡಮಾನ ಸಾಲಗಳಿಗೆ (ಸಬ್–ಪ್ರೈಮ್ ಮಾರ್ಟ್‌ಗೇಜ್) ಬಲಿಯಾಯ್ತು. ಸುಳ್ಳು ಲೆಕ್ಕ ಪತ್ರಗಳನ್ನು ಸತ್ಯವೆಂದೇ ಬಿಂಬಿಸಿದ ಜಗತ್ತಿನ ಅತಿ ದೊಡ್ಡ ವಂಚನೆಯ ಪ್ರಕರಣದಲ್ಲಿ ಜಗತ್ತಿನ ಷೇರು ಮಾರುಕಟ್ಟೆಗಳು ಹತ್ತು ಟ್ರಿಲಿಯನ್ ಡಾಲರ್ ಹಣ ಕಳೆದುಕೊಂಡವು. ಈ ಪ್ರಕರಣದಿಂದ 2008ರ ಜಾಗತಿಕ ಬಿಕ್ಕಟ್ಟು ಆರಂಭವಾಯ್ತು. ಜಾಗತಿಕ ಅರ್ಥವ್ಯವಸ್ಥೆ ಆ ಬಿಕ್ಕಟ್ಟಿನಿಂದ ಇನ್ನೂ ಚೇತರಿಸಿಕೊಂಡಿಲ್ಲ.

ಸಬ್–ಪ್ರೈಮ್ ಬಿಕ್ಕಟ್ಟು:

ಅಮೇರಿಕಾದಲ್ಲಿ, ಈ ಶತಮಾನದ ಮೊದಲ ದಶಕದಲ್ಲಿ, ಭಾರೀ ಲಾಭಗಳಿಸುವ ಉದ್ದೇಶದಿಂದ, ಕೊಳ್ಳುವ ಅರ್ಹತೆ ಇಲ್ಲದವರಿಗೂ ಅವರು ಕೊಳ್ಳುವ ಆಸ್ತಿಗಳ ಮಾರುಕಟ್ಟೆ ಮೌಲ್ಯ ಆಧರಿಸಿ, ಅತಿ ಹೆಚ್ಚಿನ ಬಡ್ಡಿ ದರದಲ್ಲಿ ಗೃಹ ಸಾಲ ನೀಡಲಾಗಿತ್ತು. ಅಮೇರಿಕಾದಲ್ಲಿ ಬಡ್ಡಿ ದರಗಳನ್ನು ಏರಿಸಿದ ಪರಿಣಾಮವಾಗಿ ಜನ ಸಾಮಾನ್ಯರ ಆರ್ಥಿಕ ಪರಿಸ್ಥಿತಿ ಹದಗೆಟ್ಟ ಸನ್ನಿವೇಶದಲ್ಲಿ ಈ ಸಾಲಗಳು ಸುಸ್ತಿಯಾದವು. ಗೃಹ ಆಸ್ತಿಗಳ ಬೆಲೆಗಳು ಹದಿನಾರು ವರ್ಷಗಳ ಹಿಂದಿನ ಮಟ್ಟಕ್ಕೆ ಕುಸಿದವು.

ಈ ನಡುವೆ, ಈ ಗೃಹ ಸಾಲಗಳನ್ನು ಆಧರಿಸಿದ ಡೆರಿವೇಟೀವ್ ಉತ್ಪನ್ನಗಳ ಮೇಲೆ ವಿಶ್ವದ ದೊಡ್ಡ ದೊಡ್ಡ ಬ್ಯಾಂಕುಗಳು ಭಾರೀ ಪ್ರಮಾಣದಲ್ಲಿ ಹೂಡಿದ ಹಣ ಮಣ್ಣುಪಾಲಾಯ್ತು. ಈ ಎಲ್ಲಾ ಹೂಡಿಕೆಗಳು ರೇಟಿಂಗ್ ಏಜನ್ಸಿಗಳು ಕೊಡುವ ಉತ್ಕೃಷ್ಟ ದರ್ಜೆಯ ಸ್ಥಾನಮಾನದ ಸರ್ಟಿಫಿಕೇಟ್‌ಗಳನ್ನು ಅವಲಂಬಿಸಿದ್ದವು. ಈ ವ್ಯವಹಾರಗಳು ಈ ಸಂಸ್ಥೆಗಳ ಬ್ಯಾಲೆನ್ಸ್ ಷೀಟ್‌ಗಳಲ್ಲಿ ನಮೂದಾಗುತ್ತಿರಲಿಲ್ಲ. ಲೆಕ್ಕ ಪತ್ರಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಿರುಚಲಾಗುತ್ತಿತ್ತು. ಹಾಗಾಗಿ, ಇದೆಲ್ಲವನ್ನು ಕಂಡರೂ ಕಾಣದಂತೆ ನಟಿಸಿದ ವಿಶ್ವ ವಿಖ್ಯಾತ ರೇಟಿಂಗ್ ಏಜನ್ಸಿಗಳು ಮತ್ತು ಲೆಕ್ಕ ಪರಿಶೋಧಕರು ಈ ಹಗರಣದ ಪ್ರಮುಖ ಪಾತ್ರಧಾರಿಗಳು. ಅದಕ್ಕಿಂತಲೂ ಮುಖ್ಯವಾದ ಅಂಶವೆಂದರೆ, ಈ ಸಂಸ್ಥೆಗಳ ಬ್ಯಾಲೆನ್ಸ್ ಷೀಟ್‌ಗಳನ್ನು ತಿರುಚುತ್ತಿದ್ದ ವಿದ್ಯಮಾನ ಅಮೇರಿಕನ್ ಸರ್ಕಾರಕ್ಕೆ ಗೊತ್ತಿತ್ತು. ಅದರೂ ಅದು ಮೌನವಾಗಿತ್ತು. ಅಷ್ಟೇ ಅಲ್ಲ, ಈ ಹಗರಣದಲ್ಲಿ ಸಿಕ್ಕಿಕೊಂಡ ಸಂಸ್ಥೆಗಳಲ್ಲಿ ಮೇಲಿನವರ ಕೃಪಾ ಕಟಾಕ್ಷಕ್ಕೆ ಒಳಗಾದ ಏಐಜಿ, ಬೇರ್‌ಸ್ಟರ್ನ್ಸ್, ಫ್ಯಾನ್ನಿ ಮೇ ಮತ್ತು ಫ್ರೆಡ್ಡಿ ಮ್ಯಾಕ್ ಮುಂತಾದ ಸಂಸ್ಥೆಗಳನ್ನು ಪಾರು ಮಾಡಲಾಯಿತು.. ಲೇಹ್ಮನ್ ಬ್ರದರ್ಸ್ ಮತ್ತು ಇತರ ಕೆಲವು ಕಂಪೆನಿಗಳು ಮುಳುಗಿದವು.

ಸುಮಾರು 700 ಬಿಲಿಯನ್ ಡಾಲರ್ ಸಾಲದ ಸುಳಿಯಲ್ಲಿ ಸಿಲುಕಿ ದಿವಾಳಿಯಾದ ಲೇಹ್ಮನ್ ಬ್ರದರ್ಸ್‌ನಂತಹ ಆನೆಗೆ ಹೋಲಿಸಿದರೆ, ಸುಮಾರು 13 ಬಿಲಿಯನ್ ಡಾಲರ್ ಸಾಲದ ಐಎಲ್&ಎಫ್ಎಸ್ ಒಂದು ಆಡಿನಷ್ಟೂ ದೊಡ್ಡದಲ್ಲ. ಆದರೂ, ಈ ಎರಡು ಸಂಸ್ಥೆಗಳ ನಡುವೆ ಕೆಲವು ಸಾಮ್ಯತೆಗಳಿವೆ ಮತ್ತು ಕೆಲವು ವ್ಯತ್ಯಾಸಗಳೂ ಇವೆ. ಎರಡೂ ಸಂಸ್ಥೆಗಳೂ, ಅಪಾಯದ ಸ್ಥಿತಿಗೆ ತಲುಪುವವರೆಗೂ, ಎಲ್ಲವೂ ಚೆನ್ನಾಗಿದೆ ಎಂದೇ ಹೇಳಿಕೊಂಡಿದ್ದವು. ತಮ್ಮ ಬಂಡವಾಳದ ಮೊತ್ತವನ್ನು ಹೆಚ್ಚಿಸಿಕೊಳ್ಳುವ ಹವಣಿಕೆಯಲ್ಲಿ ಎರಡೂ ಸಂಸ್ಥೆಗಳು ತೊಡಗಿದ್ದವು.

ಇನ್ನು ವ್ಯತ್ಯಾಸಗಳ ಬಗ್ಗೆ ಹೇಳುವುದಾದರೆ, ಹೂಡಿಕೆದಾರರಿಗೆ ಬಂಡವಾಳ ಒದಗಿಸುವ ವ್ಯವಹಾರದಲ್ಲಿ ತೊಡಗಿದ್ದ ಲೇಹ್ಮನ್ ಬ್ರದರ್ಸ್ ತನ್ನ ಬಂಡವಾಳದ 31ಪಟ್ಟು ಸಾಲಮಾಡಿತ್ತು. ಮೂಲ ಸೌಕರ್ಯಗಳ ನಿರ್ಮಾಣ ಮತ್ತು ಭೋಗ್ಯ(ಲೀಸಿಂಗ್) ವ್ಯವಹಾರಗಳಲ್ಲಿ ತೊಡಗಿರುವ ಐಎಲ್&ಎಫ್ಎಸ್ ಸಾಲ ಎಷ್ಟೆಂಬುದು ಅದರ ಅಧ್ಯಕ್ಷ ಉದಯ್ ಕೋಟಕ್ ಅವರಿಗೂ ಗೊತ್ತಿಲ್ಲ. ಬಹಳ ದೊಡ್ಡ ವ್ಯತ್ಯಾಸವೆಂದರೆ, ಲೇಹ್ಮನ್ ಬ್ರದರ್ಸ್ ಮುಳುಗುತ್ತಿದ್ದಾಗ ಅದನ್ನು ಬಚಾವ್ ಮಾಡಲು ಅಮೇರಿಕನ್ ಸರ್ಕಾರ ಕೈ ಚಾಚಲಿಲ್ಲ. ಆದರೆ, ಉದಯ್ ಕೋಟಕ್ ನೇತೃತ್ವದ ನಿರ್ದೇಶಕ ಮಂಡಳಿಯನ್ನು ನೇಮಿಸುವ ಮೂಲಕ ಐಎಲ್&ಎಫ್ಎಸ್ ಸಂಸ್ಥೆಗೆ ಮೋದಿ ಸರ್ಕಾರ ಜೀವದಾನ ಮಾಡಿದೆ. ಐಎಲ್&ಎಫ್ಎಸ್‌ನಲ್ಲಿ 25% ಷೇರು ಹೊಂದಿರುವ ಎಲ್ ಐ ಸಿ, ಅದನ್ನು ಬದುಕಿಸಲು ಹೆಣಗುತ್ತಿದೆ. ಅಷ್ಟಾಗಿಯೂ, ಅದು ಒಳಗೊಳಗೇ ಆಸ್ಫೋಟಗೊಂಡರೆ ಆಶ್ಚರ್ಯವಿಲ್ಲ.

ವಿಪತ್ತಿನಲ್ಲಿರುವ ಆರ್ಥಿಕ ಪರಿಸ್ಥಿತಿ

ಐಎಲ್&ಎಫ್ಎಸ್ ಮಾತ್ರ ಆಪತ್ತಿನಲ್ಲಿದೆ ಎಂಬುದು ಉದಾಸೀನದ ಮಾತಾದೀತು. ಹಲವು ಮೂಲ ಸೌಕರ್ಯಗಳ ನಿರ್ಮಾಣ ಸಂಸ್ಥೆಗಳು ಈಗಾಗಲೇ ಸಂಕಷ್ಟದಲ್ಲಿವೆ. ಜೊತೆಗೆ, ಸಹಸ್ರಾರು ಸಂಸ್ಥೆಗಳ ವಸೂಲಾಗದ ಸಾಲಗಳು ಕಂಡರಿಯದ, ಕೇಳರಿಯದ ಮಟ್ಟದಲ್ಲಿವೆ. ತೈಲ ಬೆಲೆಗಳು ಏರುತ್ತಲೇ ಇವೆ. ಡಾಲರ್ ಎದುರು ರೂಪಾಯಿ ಕುಸಿಯುತ್ತಲೇ ಇದೆ. ಉತ್ಪಾದಕ ಸಾಲಗಳಿಗೆ ಬೇಡಿಕೆಯೇ ಇಲ್ಲ. ಕೈಗಾರಿಕಾ ಉತ್ಪನ್ನಗಳಿಗೆ ಉಂಟಾಗುತ್ತಿರುವ ಬೇಡಿಕೆ ಮಂದಗತಿಯಲ್ಲಿದೆ. ಚಾಲ್ತಿ ಖಾತೆಯ ಕೊರತೆ ವೇಗವಾಗಿ ಹೆಚ್ಚುತ್ತಿದೆ. ಜಿಎಸ್‌ಟಿ ಹೊಡೆತದಿಂದ ವ್ಯವಹಾರಸ್ಥರು ತತ್ತರಿಸಿದ್ದಾರೆ. ನಿರುದ್ಯೋಗದಿಂದಾಗಿ ಜನರಲ್ಲಿ ಅತೃಪ್ತಿ ಬೆಳೆಯುತ್ತಿದೆ. ಬೀಸುತ್ತಿರುವ ದೊಣ್ಣೆಗಳಿಂದ ತಕ್ಷಣ ತಪ್ಪಿಸಿಕೊಂಡರೆ ಸಾಕೆಂಬ ಕಾತರದಲ್ಲಿರುವ ಸರ್ಕಾರವು ತನ್ನ ಆದಾಯ ಹೆಚ್ಚಿಸಿಕೊಳ್ಳಲು ಸಾರ್ವಜನಿಕ ಆಸ್ತಿಗಳನ್ನು ಮಾರುತ್ತಿದೆ.

ದಿನವೂ ಒಂದೊಂದು ಹೊಸ ಹೊಸ ಸಮಸ್ಯೆಗಳು ಸರ್ಕಾರವನ್ನು ಕಾಡುತ್ತಿವೆ. ಸರ್ಕಾರವು ಸಮಸ್ಯೆಗಳ ಸಾಗರದಲ್ಲಿ ಮುಳುಗಿದೆ. ಮಹಾ ಚುನಾವಣೆಗಳು ಸಮೀಪಿಸುತ್ತಿರುವ ಕಾರಣದಿಂದ, ವಿವಾದಾತ್ಮಕ ವಿಷಯಗಳು ಚರ್ಚೆಯ ವಸ್ತುವಾಗದಂತೆ ನೋಡಿಕೊಳ್ಳಲು ಸರ್ಕಾರವು ಹೆಣಗಾಡುತ್ತಿದೆ. ಕಾರ್ಪೊರೇಟ್‌ಗಳ ಹಿತ ಕಾಯಲು ಬದ್ಧವಾಗಿರುವ ಮತ್ತು ಆಳುವ ವರ್ಗಗಳ ಪರವಾದ 'ವಿತ್ತೀಯ ಶಿಸ್ತಿ'ಗೆ ಕಟ್ಟುಬಿದ್ದಿರುವ ಸರ್ಕಾರವು ಸಂಕಷ್ಟಕ್ಕೊಳಗಾಗಿರುವ ಜನತೆಗೆ ಪರಿಹಾರ ಒದಗಿಸಲು ತನ್ನ ವೆಚ್ಚಗಳನ್ನು ಹೆಚ್ಚಿಸದಿದ್ದರೆ, ವಿಪತ್ತಿನಲ್ಲಿರುವ ಆರ್ಥಿಕ ಪರಿಸ್ಥಿತಿ ಇನ್ನಷ್ಟು ಉಲ್ಬಣಗೊಳ್ಳುತ್ತದೆ.

ಜಮ್ಮು ಮತ್ತು ಕಾಶ್ಮೀರ: ಮತ್ತೊಂದು ಚುನಾವಣಾ ಪ್ರಹಸನ, ಮತ್ತೆ ಮತ್ತೆ ನಾಗರಿಕರ ಸಾವು-ನೋವು: ತರಿಗಾಮಿ ಖೇದ



ಜಮ್ಮು-ಕಾಶ್ಮೀರದಲ್ಲಿ ನಾಲ್ಕು ಹಂತಗಳ ಮುನಿಸಿಪಲ್ ಚುನಾವಣೆಗಳಲ್ಲಿ ತಮ್ಮ 'ಗೆಲುವ'ನ್ನು ಬಿಜೆಪಿ ಆಚರಿಸುತ್ತಿರುವಂತೆ, ಕಣಿವೆ ಪ್ರದೇಶದ ಕುಲ್ಗಾಮ್‌ನಲ್ಲಿ ಸ್ಫೋಟವೊಂದರಲ್ಲಿ ಏಳು ನಾಗರಿಕರ ಸಾವಿನ ಸುದ್ದಿ ಬಂದಿದೆ.

ಅಕ್ಟೋಬರ್ 19ರಂದು ಪುಲ್ವಾಮ ಜಿಲ್ಲೆಯಲ್ಲಿ ಒಬ್ಬ ಗರ್ಭಿಣಿ ಕೊಲೆಯಾದಳು. ಅಕ್ಟೋಬರ್ 21ರಂದು ಕುಲ್ಗಾಮ್‌ನ ಲರೂ ಎಂಬ ಹಳ್ಳಿಯಲ್ಲಿ ಭದ್ರತಾ ಪಡೆಗಳು ಎನ್‌ಕೌಂಟರ್ ನಡೆಸಿದ ಸ್ಥಳದಲ್ಲಿ ಸ್ಫೋಟ ಸಂಭವಿಸಿ ಏಳು ಮಂದಿ ನಾಗರಿಕರು ಬಲಿಯಾಗಿದ್ದಾರೆ. ಇಪ್ಪತ್ತಕ್ಕೂ ಹೆಚ್ಚು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

ಕಾಶ್ಮೀರದಲ್ಲಿ ಈ ರೀತಿ ಹಲವಾರು ನಾಗರಿಕರು ದಿನನಿತ್ಯವೆಂಬಂತೆ ಪ್ರಾಣ ಕಳಕೊಳ್ಳುವಂತಾಗಿರುವುದು ನಿಜಕ್ಕೂ ಅತ್ಯಂತ ನೋವಿನ ಸಂಗತಿ, ಆದರೆ ದಿಲ್ಲಿಯಲ್ಲಿ ಕೂತಿರುವವರು ಮೂಕಪ್ರೇಕ್ಷಕರಂತಿದ್ದಾರೆ, ರಾಜಕೀಯವಾಗಿ ಪ್ರಶ್ನೆಗಳನ್ನು ನಿಭಾಯಿಸುವ ಯೋಚನೆಯೇ ಅವರಿಗೆ ಇದ್ದಂತಿಲ್ಲ ಎಂದು ಕುಲ್ಗಾಮ್‌ನ ಸಿಪಿಐ(ಎಂ) ಶಾಸಕ ಮತ್ತು ಪಕ್ಷದ ಹಿರಿಯ ಮುಖಂಡ ಮಹಮ್ಮದ್ ಯುಸುಫ್ ತರಿಗಾಮಿ ಖೇದ ವ್ಯಕ್ತ ಪಡಿಸಿದ್ದಾರೆ.

ಕಾಶ್ಮೀರಿಗಳ ನಡುವೆ, ಮುಖ್ಯವಾಗಿ ಯುವಜನರಲ್ಲಿ ಪರಕೀಯ ಭಾವ ಬೇರೂರುತ್ತಿದೆ. ನಾಗರಿಕರು ಎನ್‌ಕೌಂಟರ್ ಸ್ಥಳಕ್ಕೆ ಬರಬಾರದು ಎಂದು ಎಚ್ಚರಿಸಿದ್ದರೂ ಬಂದಿದ್ದರಿಂದ ಈ ಸಾವು-ನೋವುಗಳಾಗಿವೆ ಎಂದು ಭದ್ರತಾ ಸಿಬ್ಬಂದಿ ಹೇಳುತ್ತಿದ್ದಾರೆ. ಆದರೆ ಆಳಗೊಳ್ಳುತ್ತಿರುವ ಪರಕೀಯ ಭಾವ ಅವರನ್ನು, ಯುವಜನರನ್ನೂ, ವಯಸ್ಸಾದವರನ್ನೂ ಎನ್‌ಕೌಂಟರ್ ಎನ್ನಲಾಗುವ ಸ್ಥಳಗಳಿಗೆ ಧಾವಿಸುವಂತೆ ಮಾಡುತ್ತಿದೆ ಎಂದು ತರಿಗಾಮಿ ಹೇಳಿದ್ದಾರೆ. ದಿಲ್ಲಿಯ ಬಿಜೆಪಿ ಆಳ್ವಿಕೆ ಕಾಶ್ಮೀರ ಸಮಸ್ಯೆಯನ್ನು ಸರಿಯಾಗಿ ನಿಭಾಯಿಸಲು ಸಂಪೂರ್ಣ ವಿಫಲವಾಗಿರುವುದು ಯುವ ಕಾಶ್ಮೀರಿಗಳು ದಾರಿಗಾಣದಂತೆ ಮಾಡಿದೆ. ದುರದೃಷ್ಟವಶಾತ್ ದಿಲ್ಲಿಯ ರಾಜಕೀಯ ಮುಖಂಡತ್ವ ಹಿಂದಿನ ಪ್ರಮಾದಗಳಿಂದ ಪಾಠ ಕಲಿಯಲು ಸಿದ್ಧವಿಲ್ಲ ಇದರಿಂದಾಗಿ ಪರಿಸ್ಥಿತಿ ಇನ್ನಷ್ಟು ಹದಗೆಡಲಿದೆ ಎನ್ನುತ್ತಾರೆ ತರಿಗಾಮಿ.

ಈ ಘಟನೆಯ ನಂತರ ಕಾಶ್ಮೀರದಲ್ಲಿ ಹಲವೆಡೆ ಪ್ರತಿಭಟನೆಗಳು ನಡೆದಿವೆ, ನಡೆಯುತ್ತಿವೆ. ಶ್ರೀನಗರ, ಕುಲ್ಗಾಮ್, ಅನಂತನಾಗ್ ಜಿಲ್ಲೆಗಳಲ್ಲಿ ಹಲವೆಡೆಗಳಲ್ಲಿ ಕರ್ಫ್ಯೂ ರೀತಿಯ ಪ್ರತಿಬಂಧಗಳನ್ನು ಹಾಕಲಾಗಿದೆ ತಮ್ಮ ಬಂಧುಗಳನ್ನು ಕಳಕೊಂಡಿರುವ ಕುಟುಂಬಗಳೊಂದಿಗೆ ಸೌಹಾರ್ದ ವ್ಯಕ್ತಪಡಿಸುತ್ತ ಕಣಿವೆಯಲ್ಲಿ ನಾಗರಿಕರ ಕೊಲೆಗಳನ್ನು ನಿಲ್ಲಿಸಿ, ಅಕ್ಟೋಬರ್ 21 ರ ಘಟನೆಯ ಬಗ್ಗೆ ಮ್ಯಾಜಿಸ್ಟ್ರೇಟ್ ತನಿಖೆ ನಡೆಸಿ ಎಂದು ಯುಸುಫ್ ತರಿಗಾಮಿ ಆಗ್ರಹಿಸಿದ್ದಾರೆ.

"ಒಟ್ಟು ಮತಗಳು ೯, ನನಗೆ ೪, ನಾನು ಗೆದ್ದೆ"

ಹೀಗೆಂದು ಪತ್ರಕರ್ತರೊಬ್ಬರು ಕಾಶ್ಮೀರ ಕಣಿವೆಯಲ್ಲಿ ಮೊತ್ತ ಮೊದಲ ಬಾರಿಗೆ ಸ್ಥಳೀಯ ಸಂಸ್ಥೆಗಳ ಚುನಾವಣಾ ಸಮರದಲ್ಲಿ ಕೆಲವಾರು ಸೀಟುಗಳನ್ನು ಗೆದ್ದಿರುವ ಬಿಜೆಪಿಯ ಸಂಭ್ರಮವನ್ನು ವರ್ಣಿಸಿದ್ದಾರೆ.(ಕೋಷ್ಟಕ ನೋಡಿ)

ಪಕ್ಷ	ಜಮ್ಮು ವಿಭಾಗ	ಕಾಶ್ಮೀರ ವಿಭಾಗ	ಲಡಾಖ್ ವಿಭಾಗ	ಒಟ್ಟು
ಬಿಜೆಪಿ	212	103	0	315
ಕಾಂಗ್ರೆಸ್	114	132	18	264
ಪಕ್ಷೇತರರು &ಇತರರು	197	167	8	372
ಖಾಲಿ	0	191	0	191

ಭಾರೀ ಭದ್ರತೆಯ ನಡುವೆ ಮುನಿಸಿಪಲ್ ಸಂಸ್ಥೆಗಳಿಗೆ ಈ ಚುನಾವಣೆ ನಡೆಯಿತು. ಕಾಶ್ಮೀರ ಕಣಿವೆಯ ಹತ್ತು ಜಿಲ್ಲೆಗಳ 40 ಮುನಿಸಿಪಾಲಿಟಿಗಳ 624 ಸೀಟುಗಳಿಗೆ ಮತದಾನ ನಡೆಯಿತು. ರಾಜ್ಯದ ಪ್ರಮುಖ ಪಕ್ಷಗಳಾದ ಪಿಡಿಪಿ ಮತ್ತು ನ್ಯಾಶನಲ್ ಕಾನ್ಫರೆನ್ಸ್ ಈ ಚುನಾವಣೆಗಳನ್ನು ಬಹಿಷ್ಕರಿಸಿದವು. ಸಿಪಿಐ(ಎಂ) ಕೂಡ ಇದು ರಾಜ್ಯದ ಪ್ರಸಕ್ತ ಪರಿಸ್ಥಿತಿಯಲ್ಲಿ ಕೇವಲ ಪ್ರಹಸನವಾಗುತ್ತದೆ ಎಂದು ಭಾಗವಹಿಸಲಿಲ್ಲ. ಆದ್ದರಿಂದ ಮತದಾನ ನಡೆದದ್ದು 208 ಸೀಟುಗಳಿಗೆ ಮಾತ್ರ .ಉಳಿದ 416 ಸೀಟುಗಳಲ್ಲಿ ಒಬ್ಬರೇ ಅಭ್ಯರ್ಥಿಯಿದ್ದರು, ಅಥವ ಅಭ್ಯರ್ಥಿಯೇ ಇರಲಿಲ್ಲ. ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಯಿದ್ದಲ್ಲೂ ಚುನಾವಣಾ ಪ್ರಚಾರ ನಡೆಯಲೇ ಇಲ್ಲ, ಕೆಲವೆಡೆಗಳಲ್ಲಿ ಅಭ್ಯರ್ಥಿಗಳು ಯಾರು ಎಂದೂ ಮತದಾರರಿಗೆ ಗೊತ್ತಿರಲಿಲ್ಲವಂತೆ.

ಈ ಚುನಾವಣೆಯ ನಂತರವೂ 191ವಾರ್ಡುಗಳು ಚುನಾಯಿತ ಪ್ರತಿನಿಧಿಯಿಲ್ಲದೆ ಖಾಲಿ ಬಿದ್ದಿವೆ. ಕಣಿವೆಯಲ್ಲಿ ನಡೆದ ಮತದಾನ ಕೇವಲ 4.27% ಇದು 1951ರಿಂದ ನಡೆದಿರುವ ಚುನಾವಣೆಗಳಲ್ಲಿಯೇ ಹೊಸ ದಾಖಲೆ! 1989ರಲ್ಲಿ ಉಗ್ರಗಾಮಿತ್ವ ತಾರಕಕ್ಕೆ ಏರುತ್ತಿದ್ದ ಸಂದರ್ಭದಲ್ಲಿ ನಡೆದ ಚುನಾವಣೆಗಳಲ್ಲೂ 5.18% ಮತದಾನವಾಗಿತ್ತು ಎನ್ನಲಾಗಿದೆ.

ರಾಜ್ಯದಲ್ಲಿ ಈ ಮುನಿಸಿಪಲ್ ಚುನಾವಣೆಗಳಲ್ಲಿ ನಡೆದಿರುವ ಒಟ್ಟು ಮತದಾನ 35.1%. ಜಮ್ಮು ಕ್ಷೇತ್ರದಲ್ಲಿ 68%ವಾಗಿದ್ದರೆ, ಕಾಶ್ಮೀರ ಕಣಿವೆಯಲ್ಲಿ, ಮೇಲೆ ಹೇಳಿದಂತೆ 4.27%.

ರಾಜಧಾನಿ ಶ್ರೀನಗರದಲ್ಲಿ ಬಿಜೆಪಿ 72 ವರ್ಡುಗಳಲ್ಲಿ ಸ್ಪರ್ಧಿಸಿತ್ತು. ಪಿಡಿಪಿ ಮತ್ತು ನ್ಯಾಶನಲ್ ಕಾನ್ಫರೆನ್ಸ್ ಅಭ್ಯರ್ಥಿಗಳನ್ನು ಅದು ಎದುರಿಸಬೇಕಾಗಿರಲಿಲ್ಲ. ಆದರೂ ಪಡೆದದ್ದು ಕೇವಲ 4; ಕಾಂಗ್ರೆಸ್ ಕೂಡ 15 ಪಡೆದಿದೆ.

ಇದು ಕಾಶ್ಮೀರ ಕಣಿವೆಯಲ್ಲಿ ಬಿಜೆಪಿಯ 'ಅಭೂತಪೂರ್ವ ಯಶಸ್ಸಿ'ನ ನಿಜಸ್ವರೂಪವಾಗಿದ್ದರೆ, ಅದಕ್ಕೆ ಸಾಕಷ್ಟು ನೆಲೆಯಿರುವ ಜಮ್ಮು ಮತ್ತು ಲಡಾಖ್ ಪ್ರದೇಶದಲ್ಲಿ ವಾಸ್ತವವಾಗಿ ಅದರ ನೆಲೆ ಕುಗ್ಗಿರುವಂತೆ ಕಾಣುತ್ತದೆ.

ಜಮ್ಮು ಮುನಿಸಿಪಲ್ ಕಾರ್ಪೊರೇಷನ್‌ನಲ್ಲಿ ಅದಕ್ಕೆ 75ರಲ್ಲಿ 43 ಸೀಟುಗಳು ಸಿಕ್ಕು ನೆಲೆ ಉಳಿದುಕೊಂಡಿದೆ. ಕಾಂಗ್ರೆಸ್ ಕೂಡ 26 ಸ್ಥಾನಗಳನ್ನು ಪಡೆಯುವುದು ಸಾಧ್ಯವಾಗಿದೆ. ಆದರೆ ಜಮ್ಮು ಕ್ಷೇತ್ರದ ಇತರ ಅದರ ಗಟ್ಟಿನೆಲೆಗಳಾದ ಸಂಬಾ, ಕಠುವ ಉಧಮ್‌ಪುರ್, ಚೆನಾಬ್ ಕಣಿವೆ ಪ್ರದೇಶ(ದೋಡ), ರಾಜೌರಿ ನತ್ತು ರಿಯಾಸಿಯಲ್ಲಿ ಅದರ ಮತಗಳಿಕೆ ಪ್ರಮಾಣ ಇಳಿದಿದೆ.

2014ರಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಗೆ ಜಮ್ಮು ನಗರದ ಮೂರು ಕ್ಷೇತ್ರಗಳಲ್ಲಿ 1,48,081 ಮತಗಳು ಸಿಕ್ಕಿದ್ದವು. ಈ ಮುನಿಸಿಪಲ್ ಚುನಾವಣೆಗಳಲ್ಲಿ ಸಿಕ್ಕಿರುವ ಒಟ್ಟು ಮತಗಳು ಕೇವಲ 72,503, ಅಂದರೆ 2014ರ ಮತಗಳ 49%ದಷ್ಟು ಮಾತ್ರ. ಸುಮಾರು 51% ಮಂದಿ ದೂರ ಸರಿದಿದ್ದಾರೆ.

ಲಡಾಖ್ ಪ್ರದೇಶದಲ್ಲೂ ಬಿಜೆಪಿಗೆ ಹಿನ್ನಡೆ ಕಂಡಿದೆ. 2014ರಲ್ಲಿ ಇಲ್ಲಿನ ಲೋಕಸಭಾ ಸೀಟನ್ನು ಗೆದ್ದಿರುವ ಬಿಜೆಪಿ ಈ ಮುನಿಸಿಪಲ್ ಚುನಾವಣೆಗಳಲ್ಲಿ ಲೆಹ್ ಮುನಿಸಿಪಾಲಿಟಿಯ ಎಲ್ಲ 13 ಸೀಟುಗಳಲ್ಲಿ ಸೋತಿದೆ(ಎಲ್ಲವನ್ನೂ ಕಾಂಗ್ರೆಸ್ ಪಡೆದಿದೆ); ಕಾರ್ಗಿಲ್ ಮುನಿಸಿಪಾಲಿಟಿಯಲ್ಲಿ 5ನ್ನು ಕಾಂಗ್ರೆಸ್, 8ನ್ನು ಪಕ್ಷೇತರರು ಪಡೆದಿದ್ದಾರೆ.

ಐಕ್ಯತೆಯ ಪ್ರತಿಮೆ, ಗುಜರಾತ್ ಮಾದರಿ ಮತ್ತು ವಲಸೆ ಕಾರ್ಮಿಕರ ಮೇಲೆ ಹಲ್ಲೆಗಳು

ಅಕ್ಟೋಬರ್ 31 ರಂದು ಭಾರತದ ಮೊದಲ ಗೃಹಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲರ ದೇಶದಲ್ಲೇ ಅತಿ ಎತ್ತರದ ಪ್ರತಿಮೆಯನ್ನು ಪ್ರಧಾನ ಮಂತ್ರಿಗಳು ಉದ್ಘಾಟಿಸಲಿದ್ದಾರೆ. ಇದನ್ನು ಐಕ್ಯತೆಯ ಪ್ರತಿಮೆ ಎನ್ನಲಾಗಿದೆ. ಸ್ವತಂತ್ರವಾದಾಗ ಹಲವಾರು ಸಂಸ್ಥಾನಗಳಲ್ಲಿ ಹಂಚಿ ಹೋಗಿದ್ದ ಭಾರತವನ್ನು ಒಂದು ಒಕ್ಕೂಟವಾಗಿ ಏಕೀಕರಿಸುವಲ್ಲಿ ಸರ್ದಾರ್ ಪಟೇಲ್ ಮಹತ್ವದ ಪಾತ್ರ ವಹಿಸಿದ್ದರು ಎಂಬ ಕಾರಣಕ್ಕೆ ಈ ಹೆಸರು ಇಡಲಾಗಿದೆ. ಆದರೆ ದೇಶದ ಈ ಐಕ್ಯತೆಯ ಈ ಪ್ರತಿಮೆಯ ಉದ್ಘಾಟನೆಗೆ ಸಿದ್ಧತೆ ನಡೆಯುತ್ತಿರುವಾಗಲೇ ನೂರಾರು -ಸಾವಿರಾರು ಉತ್ತರಪ್ರದೇಶ, ಬಿಹಾರ ಮತ್ತು ಮಧ್ಯಪ್ರದೇಶದ ಕಾರ್ಮಿಕರನ್ನು ರಾಜ್ಯ ಬಿಟ್ಟೋಡುವಂತೆ ಮಾಡಿರುವುದು, ಜತೆಗೆ ಈ ಮೂರೂ ರಾಜ್ಯಗಳು ಕೇಂದ್ರದಲ್ಲಿ ಆಳುವ ಪಕ್ಷದ ಆಳ್ವಿಕೆಯಲ್ಲಿರುವುದು ಇಡೀ ದೇಶದ ಗಮನ ಸೆಳೆದಿದೆ.

ಇನ್ನೂ ತಮಾಷೆಯಾಗಿರುವುದು ಗುಜರಾತಿನ ಮತ್ತು ಉತ್ತರಪ್ರದೇಶದ ಮುಖ್ಯಮಂತ್ರಿಗಳ ಹೇಳಿಕೆಗಳು. ಗುಜರಾತಿನ ಮುಖ್ಯಮಂತ್ರಿಗಳು 400 ಜನಗಳನ್ನು ಬಂಧಿಸಲಾಗಿದೆ, ಪರಿಸ್ಥಿತಿ ಹತೋಟಿಯಲ್ಲಿದೆ ಎಂದು ಹೇಳುತ್ತಿದ್ದಾಗಲೇ, ಅತ್ತ ಉತ್ತರಪ್ರದೇಶದ ಮುಖ್ಯಮಂತ್ರಿಗಳು ಗುಜರಾತಿನಲ್ಲಿ ಅಂತಹ ಘಟನೆಯೇನೂ ನಡೆದೇ ಇಲ್ಲ,ಎಲ್ಲವೂ ಚೆನ್ನಾಗಿದೆ ಎಂದು ತಮಗೆ ಗುಜರಾತಿನ ಮುಖ್ಯಮಂತ್ರಿಗಳು ಹೇಳಿದ್ದಾರೆ ಎಂದು ತಿಳಿಸಿದ್ದಾರೆ.

ಈ ಎಲ್ಲ ವೈರುಧ್ಯಗಳಿಗೂ ಗುಜರಾತ್ ಮಾದರಿಯ 'ಅಭಿವೃದ್ಧಿ'ಗೂ ನಿಕಟ ಸಂಬಂಧವಿದೆ ಎನ್ನುತ್ತಾರೆ ಪರಿಣಿತರು.ಬೆಲ್ಲರನ್ನೂ ಒಳಗೊಳ್ಳುವ ಮಾದರಿ ಇದು ಎಂದು ಬಿಜೆಪಿ ಹೇಳಿಕೊಂಡರೂ, ಅಲ್ಲಿನ ಬಡವರ ಮತ್ತು ಸಾಮಾನ್ಯ ಕಾರ್ಮಿಕ ವರ್ಗದ ಜೀವನ ಮಟ್ಟವಾಗಲೀ, ಕೃಷಿ ಕೂಲಿಯಾಗಲಿ, ಕಾರ್ಮಿಕರ ಕನಿಷ್ಟ ಕೂಲಿಯಾಗಲೀ 'ಅಭಿವೃದ್ಧಿ'ಯಲ್ಲಿ ಹೋಲಿಸಬಹುದಾದ ಬೇರೆ ರಾಜ್ಯಗಳಿಗಿಂತ ಬಹಳ ಕೆಳಗಿದೆ ಎಂಬುದು ಈಗ ಹೆಚ್ಚೆಚ್ಚು ಸ್ಪಷ್ಟವಾಗಿ ಕಾಣುತ್ತಿದೆ ಎನ್ನುತ್ತಾರೆ ಈ ಪರಿಣಿತರು.

ಈ ರಾಜ್ಯದ ಕೈಗಾರಿಕೀಕರಣ ಬಹುಪಾಲು ಹೆಚ್ಚು ಬಂಡವಾಳದ ಉದ್ದಿಮೆಗಳ ಮೂಲಕ ಮತ್ತು ಚಮಚಾ ಬಂಡವಾಳಶಾಹಿಯನ್ನು ಪ್ರೋತ್ಸಾಹಿಸುವ ಮೂಲಕವೇ ಆಗಿರುವುದು. ಆದ್ದರಿಂದ ಈ ಮಾದರಿಯಲ್ಲಿ ವಲಸೆ ಕಾರ್ಮಿಕರು ಕೂಲಿ/ಸಂಬಳಗಳನ್ನು ಇಳಿಸುವ ಒಂದು ಮೀಸಲು ಪಡೆಯಾಗಿ ಚಮಚಾ ಬಂಡವಾಳಶಾಹಿ ಉದ್ದಿಮೆದಾರರಿಗೆ ಅಗತ್ಯವಾಗಿದ್ದಾರೆ. ಅದೇ ವೇಳೆಗೆ ಬಂಡವಾಳ ಹೆಚ್ಚಾಗಿ ಬೇಕಾಗಿರುವ ಈ ಮಾದರಿಯ ಕೈಗಾರಿಕೀಕರಣ ಹೆಚ್ಚೇನೂ ಉದ್ಯೋಗಾವಕಾಶಗಳನ್ನು ಕಲ್ಪಿಸಲಾರದು. ಇದರಿಂದ ಉಂಟಾಗುವ ಗುಜರಾತೀ ಯುವಜನರ ಅಸಂತೃಪ್ತಿಯನ್ನು ನಿಭಾಯಿಸಲು ಸಂಘ ಪರಿವಾರಕ್ಕೆ ಮತ್ತು ಇತರ ಬಲಪಂಥೀಯ ಶಕ್ತಿಗಳಿಗೂ ಇರುವುದು ಅವರ ಸಂಕುಚಿತ ತತ್ವಗಳೇ. ಅಂದರೆ "ಹೊರಗಿನವರ" ಮೇಲೆ ಗುರಿಯಿಡುವುದು

ಗುಜರಾತ್ ಸರಕಾರದ ಇರುಸು-ಮುರುಸಿಗೆ ಕಾರಣ ಈ ದ್ವಂದ್ವವೇ ಎಂಬ ತೀರ್ಮಾನಕ್ಕೆ ಈ ಪರಿಣಿತರು ಬರುತ್ತಾರೆ. ಅಂದರೆ ಈ ಸರಕಾರ ಒಂದೆಡೆಯಲ್ಲಿ 'ಗುಜರಾತಿ ಅಸ್ಮಿತೆ' ಇನ್ನೊಂದೆಡೆಯಲ್ಲಿ ಕಡಿಮೆ ವೆಚ್ಚದ ಕಾರ್ಮಿಕರ ಪಡೆ ಬೇಕೆನ್ನುವ ಉದ್ಯಮಿಗಳ ಒತ್ತಡ ಇದರ ನಡುವೆ ಕಟ್ಟರುವ ಹಗ್ಗದಲ್ಲಿ ನಡೆಯಬೇಕಾದ ಪರಿಸ್ಥಿತಿಯಲ್ಲಿದೆ. ಆದ್ದರಿಂದ ಈ ದ್ವಂದ್ವ 'ಗುಜರಾತ್ ಮಾದರಿ'ಯಲ್ಲೇ ಅಡಕವಾಗಿರುವಂತದ್ದು. ಎಷ್ಟೇ ಎತ್ತರದ 'ಐಕ್ಯತೆಯ ಪ್ರತಿಮೆ'ಗಳು ಅದನ್ನು ಮರೆಮಾಚಲಾರವು.

ಹರಿಯಾಣ ಸಾರಿಗೆ ಖಾಸಗೀಕರಣ ವಿರೋಧಿಸಿದ ಸಾರಿಗೆ ಕಾರ್ಮಿಕರ ಮೇಲೆ ದಮನಚಕ್ರ-ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಖಂಡನೆ

ಜನಗಳ ಅನುಕೂಲಕ್ಕೆ ಹೆಚ್ಚು ಬಸ್ಸುಗಳನ್ನು ಹಾಕಿ, ಅದರಿಂದ ರಾಜ್ಯದ ಯುವಜನರಿಗೆ ಒಂದು ಘನತೆಯ ಉದ್ಯೋಗವೂ ಸಿಗುತ್ತದೆ ಎಂದು ಆಗ್ರಹಿಸುತ್ತಿದ್ದ ಹರಿಯಾಣ ಸಾರಿಗೆ ನೌಕರರ ಮೇಲೆ ಬಿಜೆಪಿ ಸರಕಾರ ದಮನಚಕ್ರ ಹರಿಯ ಬಿಟ್ಟಿದೆ. ಹೆಚ್ಚು ಬಸ್ಸುಗಳ ಬದಲು ಖಾಸಗಿಯವರಿಗೆ ಹೆಚ್ಚು ಪರ್ಮಿಟುಗಳನ್ನು ಕೊಡಲು ನಿರ್ಧರಿಸಿದೆ.

ಇದಕ್ಕೆ ಸಾರಿಗೆ ನೌಕರರ ಪ್ರತಿಭಟನೆಗಳನ್ನು ನಿರ್ಲಕ್ಷಿಸುತ್ತಲೇ ಬಂದಾಗ ಸಾರಿಗೆ ನೌಕರರು ಅಕ್ಟೋಬರ್ 16 ಮತ್ತು 17ರಂದು ಎರಡು ದಿನಗಳ ಮುಷ್ಕರ ಕಾರ್ಯಾಚರಣೆಗಿಳಿದರು. ಇದಕ್ಕೆ ಬೇರೆ ಜನವಿಭಾಗಗಳಿಮದ ಬೆಂಬಲ, ಸೌಹಾರ್ದವೂ ದೊರೆಯಿತು. ಇದರಿಂದ ಕುಪಿತಗೊಂಡ ಹರಿಯಾಣ ಸರಕಾರ ದಮನಕ್ರಮಗಳಿಗೆ ಇಳಿಯಿತು. ಸಾರಿಗೆ ನೌಕರರ ಮೇಲೆ ತುರ್ತು ಪರಿಸ್ಥಿತಿಯ ಕುಖ್ಯಾತಿಯ ಎಸ್ಮಾ ಪ್ರಯೋಗ,ಬಂಧನ, ಮುಷ್ಕರ ನಿರತರ ವಜಾ, ಖಾಸಗಿ ಬಸ್‌ಗಳವರು ಕಡಿಮೆ ದರಗಳಲ್ಲಿ ಬಸ್ ಓಡಿಸುತ್ತಾರೆ ಎಂಬಿತ್ಯಾದಿ ಸುಳ್ಳುಗಳ ಪ್ರಚಾರ ಇತ್ಯಾದಿಗಳ ಮೂಲಕ ಮುಷ್ಕರ ಮುರಿಯುವ ಪ್ರಯತ್ನಗಳನ್ನು ನಡೆಸಿದಾಗ ಕ್ರುದ್ಧರಾದ ನೌಕರರು ಮುಷ್ಕರವನ್ನು ಎರಡನೇ ದಿನದ ನಂತರವೂ ಮುಂದುವರೆಸಿ ಮತ್ತೆ ಅಕ್ಟೋಬರ್ 18 ಮತ್ತು 19ರಂದು ಕೂಡ ನಡೆಸಿದ್ದಾರೆ. ಈ ಮೂಲಕ ಇಂತಹ ದಮನಗಳಿಗೆ ಜಗ್ಗುವುದಿಲ್ಲ ಎಂದು ಸಾರಿದ್ದಾರೆ.

ಈ ಹಿನ್ನೆಲೆಯಲ್ಲಿ ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಹರಿಯಾಣದ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ, ತಕ್ಷಣವೇ ಮಧ್ಯಪ್ರವೇಶಿಸಬೇಕೆಂದು ಅವರನ್ನು ಆಗ್ರಹಿಸಿದ್ದಾರೆ. ವಿವಿಧ ಕಾನೂನುಗಳ ಅಡಿಯಲ್ಲಿ ಬಂಧಿಸಿರುವ ನೌಕರರನ್ನು ಬಿಡುಗಡೆ ಮಾಡಬೇಕು, ಎಲ್ಲ ಶಿಕ್ಷಾ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು ಆದಷ್ಟು ಬೇಗನೇ ಒಂದು ಗೌರವಯುತ ಇತ್ಯರ್ಥಕ್ಕೆ ಬರಲು ಸಮಾಲೋಚನೆಗಳನ್ನು ನಡೆಸಬೇಕು ಎಂದೂ ಈ ಸಂಘಟನೆಗಳು ಆಗ್ರಹಿಸಿವೆ.

ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟವೂ ದಮನಕ್ರಮಗಳನ್ನು ಖಂಡಿಸುತ್ತ ಎಲ್ಲ ಬಂಧಿತ ನೌಕರರನ್ನು ಕೂಡಲೇ ಬಿಡುಗಡೆ ಮಾಡಬೇಕು ಮತ್ತು ವಜಾ ಆಗಿರುವ ನೌಕರರನ್ನು ಮತ್ತೆ ಕೆಲಸಕ್ಕೆ ತಗೊಳ್ಳಬೇಕು ಎಂದು ಆಗ್ರಹಿಸಿದೆ.

ಅಕ್ಟೋಬರ್ 22 ರಂದು ರಾಜ್ಯಾದ್ಯಂತ ಶಿಕ್ಷಕರು ಸಾರಿಗೆ ಕಾರ್ಮಿಕರಿಗೆ ಬೆಂಬಲವಾಗಿ ಪ್ರತಿಭಟನೆ ನಡೆಸಿದರು.



ಜಗದ ಸುತ್ತು

ನಾಗರಾಜ ನಂಜುಂಡಯ್ಯ

ಪತ್ರಕರ್ತ ಜಮಾಲ್ ಖಶೋಘಿ ಹತ್ಯೆ ಸೌದಿ ರಾಜಕುಮಾರನ ಕೈವಾಡದ ಒಳಸಂಚು?

ಪ್ರಾಥಮಿಕ ತನಿಖೆಯಿಂದ ಸೌದಿ ದೂತಾವಾಸದಲ್ಲಿಯೇ ಕೊಲ್ಲಲ್ಪಟ್ಟಿರುವುದನ್ನು ಇದೀಗ ದೃಢ ಪಡಿಸಲಾಗಿದೆ. ಪಬ್ಲಿಕ್ ಪ್ರಾಸಿಕ್ಯೂಷನ್ ರ ತನಿಖಾ ವರದಿಯ ಅನ್ವಯ ಜಮಾಲ್ ದೂತವಾಸಕ್ಕೆ ಆಗಮಿಸಿದಾಗ, ಅಲ್ಲಿ ಮೊದಲೆ ಹಾಜರಿದ್ದ ವ್ಯಕ್ತಿಗಳ ನಡುವೆ ಚರ್ಚೆಗಳು ಒಂದು ಬಗೆಯ ಜಗಳಕ್ಕೆ ಕಾರಣವಾಗಿದೆ ಮತ್ತು ಕಾದಾಟವೂ ಸಹ ನಡೆದಿದೆ, ಇವೇ ಕೊಲೆಗೆ ಕಾರಣವಾಗಿರುತ್ತವೆ ಎಂದು ಸೌದಿ ಮಾಧ್ಯಮಗಳು ವರದಿ ಮಾಡಿವೆ.

ಕಳೆದ ಅಕ್ಟೋಬರ್ 2 ರಿಂದ ಕಣ್ಮರೆಯಾಗಿದ್ದ ಸೌದಿ ಅರೇಬಿಯಾದ ಪತ್ರಕರ್ತ ಜಮಾಲ್ ಖಶೋಘಿ, ಇಸ್ತಾನ್ ಬುಲ್ ನಲ್ಲಿರುವ ಸೌದಿ ದೂತಾವಾಸದಲ್ಲಿ ಅಂದೇ ಹತ್ಯೆ ಆಗಿರುವುದನ್ನು ಟರ್ಕಿಯ ವಿಚಾರಣಾ ಅಧಿಕಾರಿಗಳು ದೃಢಪಡಿಸಿದ್ದಾರೆ. ಮೊದಲು ಇದನ್ನು ನಿರಾಕರಿಸಿದ್ದ ಸೌದಿ ಅರೇಬಿಯಾದ ಆಡಳಿತದವರು ಇದೀಗ ಒಪ್ಪಿಕೊಂಡಿದ್ದಾರೆ. ಟರ್ಕಿಯು ನಡೆಸಿದ ಆರಂಭಿಕ ತನಿಖಾ ವರದಿಯ ಪ್ರಕಾರ, ಸೌದಿ ಅರೇಬಿಯಾ ದಿಂದ ಟರ್ಕಿಗೆ ಜೆಟ್ ವಿಮಾನದಿಂದ ಬಂದು ಇಳಿದಿದ್ದ ಸುಮಾರು 15 ಮಂದಿಯಲ್ಲಿ ಕನಿಷ್ಠ 8 ಮಂದಿ ಸೌದಿ ಸೈನ್ಯದ ಸದಸ್ಯರು ಎಂದು ತಿಳಿಸಿದೆ. ಈ ಹತ್ಯೆಕ್ಕೆ ಸಂಬಂಧಿಸಿದಂತೆ ಈಗಾಗಲೇ 18 ಜನರನ್ನು ಬಂಧಿಸಲಾಗಿದೆ.

ಸೌದಿ ರಾಜಕುಮಾರನ ಆಪ್ತರು ಹತ್ಯೆಯ ಸುತ್ತಾ?

ಸೌದಿ ಅರೇಬಿಯಾದ ರಾಜಕುಮಾರ ಮೊಹಮ್ಮದ್ ಬಿನ್‌ಸಲ್ಮಾನ್‌ಗೆ ಆಪ್ತರಾದ 5 ಹಿರಿಯ ಅಧಿಕಾರಿಗಳನ್ನು ಹತ್ಯೆಗೆ ಸಂಬಂಧಿಸಿದಂತೆ ಕಳೆದ ಶನಿವಾರದಂದು ಈಗಾಗಲೇ ವಜಾ ಮಾಡಲಾಗಿದೆ. ವಜಾಗೊಳಿಸಿದ ಅಧಿಕಾರಿಗಳಲ್ಲಿ ಒಬ್ಬರು ರಾಜಕುಮಾರ ಸಲ್ಮಾನ್‌ಗೆ ವಿಶ್ವಾಸಾರ್ಹ ಸಲಹೆಗಾರರಾದ ಸೌದ್–ಅಲ್–ಖಹ್ತಾನಿ ಮತ್ತು ಇನ್ನೊಬ್ಬರು ಸಾಮಾನ್ಯ ಗುಪ್ತಚರ ಜನರಲ್ ಅಹ್ಮದ್ ಅಲ್–ಅಸ್ಸರಿ ರಾಜಕುಮಾರನ ಬಲಗೈ ಬಂಟರೆಂದು ಪರಿಗಣಿಸಲಾಗಿದೆ. ರಾಜಮನೆತನದ ನಿಕಟ ವೃತ್ತ ದಿಂದ ಬಂದವರ ಹೆಸರು ಈ ಹತ್ಯೆಯ ಸುತ್ತಲಿದೆ. ಅದರಲ್ಲೂ ರಾಜಕುಮಾರನ ಪಾತ್ರದ ಬಗ್ಗೆ ಸಂಶಯದ ಭೂತ ಆವರಿಸಿ ಕೊಂಡಂತಿದೆ.

ಆರಂಭಿಕವಾಗಿ ಖಶೋಘಿ ಯವರ ಹತ್ಯೆಯು ಇಸ್ತಾನ್ ಬುಲ್‌ದ ಸೌದಿ ದೂತಾವಾಸದಲ್ಲಿ ನಡೆದಿದೆ ಎಂಬುದನ್ನು ಎರಡು ವಾರಗಳ ಕಾಲ ಸೌದಿ ಸರಕಾರ ನಿರಾಕರಣೆ ಮಾಡಿತ್ತು. ಖಶೋಘಿ ತನ್ನ ವಿಚ್ಛೇದನ ಕ್ಕಾಗಿ ದಾಖಲೆ ಪತ್ರಗಳನ್ನು ಸಂಗ್ರಹಿಸಲು ಬಂದಿದ್ದ, ಅವನು ಆಗಮಿಸಿದ ಆವರಣದ ಬಾಗಿಲಿನಿಂದಲೇ ವಾಪಸ್ಸು ಹೊರಟು ಹೋದನೆಂದು ಮೊದಲು ಹೇಳಿಕೆ ನೀಡಿತ್ತು ಆ ನಂತರ ಹಿಂಬಾಗಿಲಿನಿಂದ ಆಚೆ ಹೋಗಿದ್ದಾನೆ ಎಂಬ ಮತ್ತೊಂದು ಹೇಳಿಕೆಯನ್ನು ಸೌದಿ ಸರಕಾರ ನೀಡಿದ್ದು, ಎಲ್ಲಾ ಅನುಮಾನಕ್ಕೆ ಆಸ್ಪದ ಕೊಟ್ಟಿದೆ. ಟರ್ಕಿಯ ಅಧಿಕಾರಿಗಳು ಸಿಸಿಟಿವಿಯ ಮೂಲಕ ಸೆರೆ ಹಿಡಿದಿದ್ದ ವಿಡಿಯೋ/ಆಡಿಯೋ ಕ್ಲಿಪ್‌ಗಳು ಸೋರಿಕೆಯಾದಾಗ ಕೊಲೆಯಾಗಿರುವ ಶಂಕೆ ಹಬ್ಬಿತು. ಈ ಆಡಿಯೋ ಗಳ ಆಧಾರದಲ್ಲಿ ಸೌದಿ ಸರಕಾರ ನಡೆಸಿದ ಪ್ರಾಥಮಿಕ ತನಿಖೆಯಿಂದ ಸೌದಿ ದೂತಾವಾಸದಲ್ಲಿ ಯೇ ಕೊಲ್ಲಲ್ಪಟ್ಟಿರುವುದನ್ನು ಇದೀಗ ದೃಡ ಪಡಿಸಲಾಗಿದೆ. ಪಬ್ಲಿಕ್ ಪ್ರಾಸಿಕ್ಯೂಷನ್ ರ ತನಿಖಾ ವರದಿಯ ಅನ್ವಯ ಜಮಾಲ್ ದೂತವಾಸಕ್ಕೆ ಆಗಮಿಸಿದಾಗ, ಅಲ್ಲಿ ಮೊದಲೆ ಹಾಜರಿದ್ದ ವ್ಯಕ್ತಿಗಳ ನಡುವೆ ಚರ್ಚೆಗಳು ಒಂದು ಬಗೆಯ ಜಗಳಕ್ಕೆ ಕಾರಣವಾಗಿದೆ ಮತ್ತು ಕಾದಾಟವೂ ಸಹ ನಡೆದಿದೆ, ಇವೇ ಕೊಲೆಗೆ ಕಾರಣವಾಗಿರುತ್ತವೆ ಎಂದು ಸೌದಿ ಮಾಧ್ಯಮಗಳು ವರದಿ ಮಾಡಿವೆ.

ಟರ್ಕಿಯ ಅಧಿಕಾರಿಗಳ ಪ್ರಕಾರ, ಸೌದಿಯಿಂದ ಟರ್ಕಿಗೆ ಬಂದಿದ್ದ 15 ಜನರು ಸೌದಿಯ ದೂತಾವಾಸದಲ್ಲಿ ಹಾಜರಿದ್ದರು. ಖಶೋಘಿ ಒಳಗೆ ಆಗಮಿಸಿದಾಗ, ಅವರಲ್ಲಿ 8 ಜನರು ಸೌದಿ ರಾಯಲ್ ಮಿಲಿಟರಿ ಸದಸ್ಯರು ಇದ್ದರು ಎಂದು ಗುರುತಿಸಲಾಗಿದೆ. ಇವರಲ್ಕಿ ಪ್ರಮುಖವಾಗಿ, ಡಾ. ಸಲಾಹ್ ಮಹಮ್ಮದ್, ಇವರು ಸೌದಿ ಅರೇಬಿಯಾ ದ ಪೋರೆನ್ಸಿಕ್ ಸೆಕ್ಯೂರಿಟಿ ಡಿಪಾರ್ಟ್ಮೆಂಟ್ ನ ಮುಖ್ಯಸ್ಥ ರು ಈ ತಂಡದಲ್ಲಿ ಇದ್ದದು, ಹಾಗೂ ಕೊಲ್ಲಲ್ಪಟ್ಟ ಜಮಾಲ್ರ ದೇಹವನ್ನು ಪತ್ತೆ ಸಿಗದ ಹಾಗೆ ಮಾಡಲು ಸಹಕರಿಸಿದ್ದಾರೆ. ಇದರಿಂದಾಗಿ, ಇದೊಂದು ಆಕಸ್ಮಿಕ ಸಾವಲ್ಲ, ಬದಲಾಗಿ, ಮುಂಚಿತವಾಗಿಯೇ ಆಯೋಜಿಸಲ್ಪಟ್ಟ ಕಾರ್ಯಾಚರಣೆ ಎಂಬುದಾಗಿ ಅನುಮಾನವು, ಈಗಾಗಲೇ ರಾಯಭಾರ ಕಚೇರಿ ಸುತ್ತಾ ಭುಗಿಲೆದ್ದು ಒಂದು ಸಂಘರ್ಷವೇ ನಡೆಯುತ್ತಿದೆ. ಪತ್ರಕರ್ತನ ದೇಹವು ಇನ್ನೂ ಸಿಕ್ಕಿಲ್ಲ. ಸೌದಿ ಸರಕಾರ ಈ ಸಾವಿನ ಮೂಲ ಕಾರಣ ಗಳನ್ನು ಇನ್ನೂ ವಿವರಿಸಲು ವಿಫಲವಾಗಿದೆ.

ಟರ್ಕಿಯ ಕಥನ

ಇಸ್ತಾನ್ ಬುಲ್ ನಲ್ಲಿರುವ ಸೌದಿ ದೂತಾವಾಸದ ವಿಷಯವನ್ನು ಟರ್ಕಿಯ ಸರಕಾರ ಈ ಪತ್ರಕರ್ತ ನ ಮೂಲಕ ಸೋರಿಕೆ ಮಾಡಿರುವುದರಿಂದ, ಸೌದಿಯಿಂದ ಬಂದ ತಂಡವು ಖಶೋಘಿ ಯನ್ನು ಕೊಂದಿತು. ಕೊಂದ ನಂತರ ಅವನ ದೇಹವನ್ನು ಹಲವಾರು ತುಂಡುಗಳಾಗಿ ಕತ್ತರಿಸಿತು ಎಂಬ ಆಡಿಯೋ/ವಿಡಿಯೋ ದಾಖಲೆಗಳನ್ನು



ಹೊಂದಿರುವ ಟರ್ಕಿಯು, ಸಿಐಎಗೆ ಒದಗಿಸಿದ್ದಾರೆ ಎಂದು ಅಮೆರಿಕ ದ ಅಧಿಕಾರಿಗಳು ತಿಳಿಸಿದ್ದಾರೆ. ಕೊಲೆಯ ದಿನ ಸೌದಿ ಅರೇಬಿಯಾ ದಿಂದ, ರಾಜಮನೆತನದ ಎರಡು ಜೆಟ್ ಗಳ ಮೂಲಕ ಇಸ್ತಾನ್ ಬುಲ್ ಗೆ ಆಗಮಿಸಿರುವುದನ್ನು ಸಿಸಿಟಿವಿ ದೃಶ್ಯಗಳಲ್ಲಿ ಲಭ್ಯವಿರುವ ವರದಿ ತಿಳಿಸಿದೆ. ಇದರಿಂದ ಇದೊಂದು ಪೂರ್ವ ನಿಯೋಜಿತ ಸಂಚು, ಮತ್ತು ಇಂತಹ ಅತ್ಯಾಧುನಿಕ ಕಾರ್ಯಚರಣೆಯನ್ನು ಸೌದಿ ರಾಜಕುಮಾರ ತನ್ನ ಅಧಿಕಾರಿಗಳನ್ನು ಬಳಸಿಕೊಂಡು ಈ ಹತ್ಯೆಯನ್ನು ನಡೆಸಿರುವುದು ಹಾಗೂ ಈ ರಾಜಕುಮಾರ ಬಿನ್ ಸಲ್ಮಾನ್ ಭಾಗವಹಿಸುವಿಕೆಯ ಬಗ್ಗೆ ದೃಡವಾದ ಅನುಮಾನಗಳು ಉಂಟಾಗುತ್ತವೆ ಎಂಬ ಅಭಿಪ್ರಾಯಗಳು ಮೂಡಿವೆ. ಕಳೆದ ವರ್ಷ ನವೆಂಬರ್ ನಲ್ಕಿ, ಈ ಯುವ ರಾಜಕುಮಾರ ತನ್ನ ಕುಟುಂಬದ ಮತ್ತೊಬ್ಬ ರಾಜಕುಮಾರ (ಕೀರಿಟಕ್ಕಾಗಿ ಇವನ ಪ್ರತಿ ಸ್ಪರ್ಧಿ) ನನ್ನು ಮನೆಯಲ್ಲಿಯೇ ಬಂಧಿಸಲ್ಪಟ್ಟಿದ್ದು; ಲೆಬನಾನ್ ಪ್ರಧಾನಿ ರಿಯಾದ್ ನಲ್ಲಿ ವಿಮಾನ ಇಳಿಯುವ ಸಂದರ್ಭದಲ್ಲಿ ಅಪಹರಿಸಿದ್ದು; ಇರಾನ್ ವಿರುದ್ದ ಸೌದಿ ಪ್ರಜಾಪ್ರಭುತ್ವ ದ ಯುದ್ಧದ ಭಾಗವಾಗಿ ಹೆಜ್ಬೊಲ್ಲಾಹ್ದ ವನ್ನು ದುರ್ಬಲ ಗೊಳಿಸುವಂತೆ ಆದೇಶ ನೀಡಿದ್ದು; ಇವೆಲ್ಲಾ ರಾಜಕುಮಾರ ಈ ಸಂಚು ನಡೆಸಿರುವ ಅನುಮಾನಗಳು ಬಲವಾಗಿವೆ.

ವಿವಿಧ ಪ್ರತಿಕ್ರಿಯೆಗಳು

ಈ ಕೊಲೆಯ ಕುರಿತಂತೆ ವಿವಿಧ ದೇಶಗಳಿಂದ ವಿವಿಧ ಪ್ರತಿಕ್ರಿಯೆಗಳು ಮೂಡಿ ಬಂದಿವೆ. ಹೆಚ್ಚಿನ ದೇಶಗಳು ಸೌದಿಯ ಈ ಕ್ರಮವನ್ನು ಖಂಡಿಸಿವೆ. ಕೆಲವು ದೇಶಗಳಂತು ಸೌದಿ ರಾಜನ ಜತೆ ಸಂಬಂದಗಳನ್ನು ಕಡಿತಗೊಳಿಸಲು ಸಿದ್ದರಿದ್ದರೆ, ಮತ್ತಷ್ಟು ದೇಶಗಳು ನಿರಾಕರಿಸಿವೆ ಪ್ರಮುಖವಾಗಿ, ಪಶ್ಚಿಮದ ಮೂರು ದೊಡ್ಡ ಶಕ್ತಿಗಳಾದ, ಅಮೆರಿಕಾ, ಫ್ರಾನ್ಸ್ ಮತ್ತು ಬ್ರಿಟನ್ ತಮ್ಮ ಮತ್ತು ತೈಲ–ಸಮೃದ್ದ ದೇಶವಾದ ಸೌದಿಯೊಂದಿಗಿನ ಸಂಬಂಧಗಳನ್ನು ಈ ಕೊಲೆಯ ನಂತರವು ಮುಂದುವರೆಸಲು ನಿರ್ದರಿಸಿವೆ. ಇನ್ನು ಸರಿಯಾದ ತನಿಖೆ ಸೌದಿ ಅರೇಬಿಯಾ ದಿಂದ ನಡೆದಿಲ್ಲದಿರುವುದರಿಂದ, ಈಗಲೆ ಸಂಬಂಧಗಳ ಕಡಿತದ ಬಗ್ಗೆ ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ ವೆಂಬ ಅಭಿಪ್ರಾಯಕ್ಕೆ ಬಂದಿವೆ.

ಕೊಲೆಯಾಗಿರುವ ಪತ್ರಕರ್ತ ಜಮಾಲ್ ರನ್ನು ಕಳೆದ ವರ್ಷ ಅಮೆರಿಕಾದಲ್ಲಿ ದೇಶಭ್ರಷ್ಟ ರೆಂದು ಘೋಷಣೆ ಮಾಡಲಾಗಿತ್ತು. ಹಾಗೆಯೇ ರಾಜಕುಮಾರ ಬಿನ್ ಸಲ್ಮಾನ್ ರೊಂದಿಗೆ ಭಿನ್ನತೆ ಉಂಟಾಗಿತ್ತು. ಅಕ್ಟೋಬರ್ 2 ರಂದು ಇಸ್ತಾನ್ ಬುಲ್‌ನ ಸೌದಿ ದೂತವಾಸಕ್ಕೆ ಬೇಟಿಕೊಟ್ಟಿದಾಗ ಈ ವಾಷಿಂಗ್ಟನ್ ಪೋಸ್ಟ್ ಅಂಕಣಕಾರ ಕಣ್ಮರೆಯಾಗಿದ್ದನು.

ರಾಕ್ಷಸೀ ಕಾರ್ಯಾಚಾರಣೆ

ಇಲ್ಲಿಯವರೆಗೆ ಹತ್ಯೆಯ ನಿಜವಾದ ಕಾರಣಗಳನ್ನು ಸೌದಿ ರಾಜಕುಮಾರ ಹೊರಗೆಡವಿಲ್ಲ. ಆದರೆ, ಇದೊಂದು "ದೊಡ್ಡ ಮತ್ತು ಭಾರೀ ತಪ್ಪು ಕ್ರಮ" ಎಂದು ಸೌದಿಯ ವಿದೇಶಾಂಗ ಸಚಿವ ಅಡಿಲ್ ಅಲ್–ಜುಬಿರ್ ಪ್ರತಿಕ್ರಿಯಿಸಿದ್ದಾರೆ. ಆದರೆ ರಾಜರ ಕೈವಾಡದ ಯಾವುದೇ ಸುಳಿವು ಸಿಕ್ಕಿಲ್ಲವೆನ್ನುತ್ತಾರೆ. ಆದರೆ ಲಭ್ಯ ವರದಿಯ ಪ್ರಕಾರ ಇದೊಂದು ರಾಕ್ಷಸೀ ಕಾರ್ಯಾಚರಣೆಯ ಕೆಲಸವೆಂಬ ಅಭಿಪ್ರಾಯಗಳು ರಾಜಮನೆತನದ ಸುತ್ತಾ ಸುಳಿದಾಡುತ್ತಾ ಇವೆ. ಸಂಚನ್ನು ಮುಚ್ಚಿಡಲು ಪ್ರಯತ್ನಗಳು ನಡೆಯುತ್ತಿವೆ ಎಂಬ ಸುದ್ದಿ ಗಾಢವಾಗಿದೆ.

ಸೌದಿಯೊಂದಿಗೆ ಮುಂದಿನ ಸಂಬಂಧಗಳು ಹೇಗೆ?

ಎಫ್.ಐ.ಐ. (ಫ್ಯೂಚರ್ ಇನ್ವೆಸ್ಟ್ ಮೆಂಟ್ ಇನಿಶಿಯೇಟಿವ್) ಸಮ್ಮೇಳನ ಅಕ್ಟೋಬರ್ 23, ಸೌದಿಯ ರಾಜಧಾನಿ ರಿಯಾದ್ ನಲ್ಲಿ ನಡೆಯಿತು. ಜಮಾಲ್ ಹತ್ಯೆಯ ಹಿನ್ನೆಲೆಯಲ್ಲಿ ಹಲವು ದಿಗ್ಗಜ ರಾಷ್ಟ ಗಳು ಭಾಗವಹಿಸದಿರುವುದು ಮೇಲ್ನೋಟಕ್ಕೆ ಕಂಡು ಬಂದರೂ ವಾಸ್ತವವಾಗಿ, ಈ ತೈಲ–ಸಮೃದ್ಧ ಸೌದಿ ಅರೇಬಿಯಾ ದೇಶದೊಂದಿಗೆ ತಮ್ಮ ವ್ಯಾಪಾರ ಸಂಬಂಧಗಳನ್ನು ಕಳಚಿಕೊಳ್ಳಲು ಯಾರು ಇಷ್ಟ ಪಡುತ್ತಿಲ್ಲ. ಏಕೆಂದರೆ, ಸೌದಿ ಅರೇಬಿಯಾ ದೊಂದಿಗೆ ಅಮೆರಿಕದ ಪೆಟ್ರೊ ಡಾಲರ್ ವ್ಯಾಪಾರ–ವಹಿವಾಟು ಹೆಚ್ಚಾಗಿ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಅಮೆರಿಕದ ಸ್ನೇಹಿತ ದೇಶ ಸೌದಿ ಅರೇಬಿಯಾ ಜತೆ ಯಾರು ಕೂಡ ವ್ಯಾಪಾರ ಸಂಬಂಧವನ್ನು ಕಡಿತಗೊಳಿಸಿಕೊಳ್ಳಲು ಇಚ್ಚಿಸುವುದಿಲ್ಲ.

ಅಮೆರಿಕಾದ ಖಜಾನೆ ಕಾರ್ಯದರ್ಶಿ ಸ್ಟೀವನ್ ಮನ್ಚಿನ್ ರವರು ಹತ್ಯೆಯ ತನಿಖೆ ಪೂರ್ಣವಾಗಿ ಮುಗಿದು ಸತ್ಯ ಹೊರಬರುವರೆವಿಗೂ, ರಾಜಕುಮಾರ ಮಹಮ್ಮದ್ ಮೇಲೆ ಸಂದೇಹ ಪಡುವ ಪ್ರಶ್ನೆಯೇ ಇಲ್ಲ. ಹಾಗಾಗಿ ಯಾವುದೇ ರೀತಿಯ ಸಂಭವನೀಯ ನಿರ್ಬಂಧಗಳ ಬಗ್ಗೆ ಈಗಲೇ ಪ್ರತಿಕ್ರಿಯೆ ನೀಡುವುದು ಸೂಕ್ತವಲ್ಲ ಎಂದಿದ್ದಾರೆ. ಅದ್ಯಕ್ಷ ಟ್ರಂಪ್ ಕೂಡಾ ತನ್ನ ಅಭಿಪ್ರಾಯ ವ್ಯಕ್ತಪಡಿಸಿ, ಸೌದಿಯ ಕಾರ್ಯ ನಿರ್ವಹಣೆ ತೃಪ್ತಿ ತಂದಿಲ್ಲವಾದರೂ, ರಾಜಕುಮಾರನ ಮೇಲಿನ ವಿಶ್ವಾಸಾರ್ಹತೆ ನಮಗೆ ಕಡಿಮೆಯಾಗಿಲ್ಲ. ನಮ್ಮ ದೇಶದ ಪ್ರಮುಖ ವ್ಯಾಪಾರ–ವಹಿವಾಟುವಿನೊಂದಿಗೆ ಸೌದಿಯ ಸಹಕಾರವನ್ನು ನಾವು ಮುಂದುವರಿಸುವ ಬಯಕೆ ಹೊಂದಿದ್ದೇವೆ ಎಂಬ ಹೇಳಿಕೆ ನೀಡಿದ್ದಾರೆ. ಜತೆಗೆ, ಇರಾನ್ ವಿರುದ್ದದ ಭಯೋತ್ಪಾದಕ ಹಣಕಾಸು ಮತ್ತು ಈ ವಿಷಯದಲ್ಲಿ ವಾಷಿಂಗ್ಟನ್‌ನ ಯೋಜನೆ ಗಳನ್ನು ಜಾರಿಗೊಳಿಸಲು ಎರಡೂ ದೇಶಗಳು ಜಂಟೀ ಪ್ರಯತ್ನ ಗಳನ್ನು ನಡೆಸುವ ಆಶಯವಿದೆ. ಎಫ್.ಐ.ಐ. ಸಮ್ಮೇಳನಕ್ಕೆ ಬರಲು ಪರಿಸ್ಥಿತಿ ಸೂಕ್ತವಾಗಿರಲಿಲ್ಲ, ಮುಂದೆ ನವೆಂಬರ್‌ನಲ್ಲಿ ಬೇಟಿಯಾಗುವ ಇರಾದೆ ಯನ್ನು ವ್ಯಕ್ತ ಪಡಿಸಿದ್ದಾರೆ.

ಬ್ರಿಟನಿನ ಬ್ರೆಕ್ಸಿಟ್ ಕಾರ್ಯದರ್ಶಿ ಡೊಮಿನಿಲ್ ರಾಬ್ ರವರು ಹತ್ಯೆಯ, ಸತ್ಯಶೋದನಾ ತನಿಖಾ ವರದಿ ಬರುವವರೆಗೂ, ಸೌದಿಯೊಂದಿಗಿನ ಎಲ್ಲಾ ಸಂಬಂಧಗಳು ಮುಂದುವರೆಯುತ್ತವೆ ಎಂದಿದ್ದಾರೆ. ಇದರ ಹೊರತಾಗಿಯೂ ಬ್ರಿಟನ್ ನ ಐದು ವಿರೋಧ ಪಕ್ಷದವರು ಸೇರಿ, ವಿದೇಶಾಂಗ ಸಚಿವರಾದ ಜೆರೆಮಿ ಹಂಟ್ರಿಗೆ ಪತ್ರ ಬರೆದು ಸೌದಿ ಯೊಂದಿಗೆ ಶಸ್ತ್ರಾಸ್ತ್ರ ಮಾರಾಟವನ್ನು ರದ್ದು ಗೊಳಿಸುವಂತೆ ಒತ್ತಾಯಿಸಿದ್ದಾರೆ. ಇಲ್ಲಿನ ಲೇಬರ್ ಪಕ್ಷವು ಒಂದು ಹೆಜ್ಜೆ ಮುಂದೆ ಹೋಗಿ, ಸೌದಿ ಅರೇಬಿಯಾದ ಸರಕಾರ ಮಾನವ ಹಕ್ಕುಗಳನ್ನು ಹೀಗೆಯೇ ಉಲಂಘನೆ ಮಾಡುತ್ತಿದ್ದರೆ ಸಹಿಸುಕೊಂಡು ಸುಮ್ಮನಿರಲು ಸಾಧ್ಯವಿಲ್ಲ ಎಂದು ಬಲವಾದ ಎಚ್ಚರಿಕೆ ನೀಡಿದೆ. ಆದರೆ ಜರ್ಮನಿಯು ಮಾತ್ರ ಸೌದಿಯೊಂದಿಗಿದ್ದ ಶಸ್ತ್ರಾಸ್ತ್ರ ಮಾರಾಟಗಳನ್ನು ಸ್ಥಗಿತ ಗೊಳಿಸಿರುವುದು ಅಮೆರಿಕಾಕ್ಕೆ ಅಚ್ಚರಿ ಮೂಡಿಸಿದೆ.

ಮದ್ಯೆ ಪ್ರಾಚ್ಯ ರಾಷ್ಟಗಳಾದ ಈಜಿಪ್ಟ್, ಒಮಾನ್, ಬಹ್ರೇನ್ ಮತ್ತು ಯು.ಎ.ಇ. (ಅಮೆರಿಕ ಪರ ಉಗ್ರ ಬಲಪಂಥೀಯ ಆಡಳಿತಗಳು) ಸೌದಿ ನೀಡಿರುವ ಹೇಳಿಕೆಗಳಿಗೆ ಸಮ್ಮತಿ ಸೂಚಿಸಿದ್ದರೂ ಸಹಾ, ಹತ್ಯೆಯ ತನಿಖೆಯಲ್ಲಿ ತಪ್ಪುವೆಸಗಬಾರದೆಂದು ತಿಳಿಸಿದ್ದಾರೆ. ಅವರಿಗೆ ಸೌದಿ ರಾಜಕುಮಾರನ ಚರಿತ್ರೆ ಗೊತ್ತಿರುವುದರಿಂದ ಈ ರೀತಿಯ ಪರೋಕ್ಷ ಹೇಳಿಕೆಯನ್ನು ನೀಡುವುದು ಅನಿವಾರ್ಯವಾಗಿದೆ.

ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಪ್ರತಿಕ್ರಿಯೆ ನೀಡಿ, ತಮ್ಮ ದೇಶದ 21 ಕೋಟಿ ಜನರು ಪಾಕಿಸ್ತಾನದ ಇತಿಹಾಸದಲ್ಲಿಯೇ ಕಂಡರಿಯದಂತ ಕೆಟ್ಟ ಸಾಲದ ಬಿಕ್ಕಟ್ಟಿನಿಂದ ಹೊರ ಬರಬೇಕಾಗಿದೆ. ನಮ್ಮ ವಿದೇಶಿ ವಿನಿಮಯ ಕೆಟ್ಟ ಮಟ್ಟದಲಿದೆ. ಆದ್ದರಿಂದ ನಾವು ಸ್ನೇಹಪರ ದೇಶಗಳಿಂದ ಹಾಗೂ ಐಎಂಎಫ್ ನಿಂದ ಸಾಲವನ್ನು ಪಡೆಯದಿದ್ದರೆ, ಆನಂತರ ಆ ಸಾಲವನ್ನು ಪೂರೈಸಲು ಅಥವಾ ಅಮದುಗಳಿಗೆ ಪಾವತಿಸಲು ವಿದೇಶಿ ವಿನಿಮಯದ ಅಗತ್ಯವಿದೆ. ಆದ್ದರಿಂದ ಸೌದಿಯೊಂದಿಗೆ ಸಂಬಂದ ಮುಂದುವರೆಸಲು ಬಯಸಿತ್ತೇವೆ. ಆದರೆ, ಪತ್ರಕರ್ತ ಜಮಾಲ್‌ರ ಹತ್ಯೆ ಕುರಿತಂತೆ ಕಾಳಜಿ ವ್ಯಕ್ತ ಪಡಿಸುತ್ತ, ಸಾವಿಗೆ ಕಾರಣರಾದವರಿಗೆ ಶಿಕ್ಷೆ ಆಗಲೆಬೇಕೆಂದು ಆಗ್ರಹಿಸಿದ್ದಾರೆ. ವಿಶ್ವದ ಅತಿ ದೊಡ್ಡ ಮುಸ್ಲಿಂ ದೇಶ ಆಗ್ನೇಯ ಏಷ್ಯಾದ ಇಂಡೊನೇಷ್ಯವು ಹತ್ಯೆಯ ತನಿಖೆ ಪಾರದರ್ಶಕ ಮತ್ತು ಸಂಪೂರ್ಣ ವಾಗಿರಬೇಕು ಎಂದಿದೆ.

ಒಟ್ಟಾರೆಯಾಗಿ, ಪತ್ರಕರ್ತ ಜಮಾಲ್ ಹತ್ಯೆಯ ವಿರುದ್ದ ಕಳೆದ ಎರಡು ವಾರಗಳಿಂದ ಸತತವಾಗಿ ಪ್ರತಿಭಟನೆಗಳು ನಡೆದಿವೆ. ವಿಶ್ವದ ಬೇರೆ ಬೇರೆ ದೇಶಗಳು ತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತ ಪಡಿಸಿವೆ. ತೀವ್ರವಾದ ಮಾನವ ಹಕ್ಕುಗಳ ಉಲ್ಲಂಘನೆ, ಯೆಮೆನ್ ಯುದ್ದದ ಅಪರಾದಗಳು ಮತ್ತು ಹಲವರನ್ನು ಮರಣದಂಡನೆಗೆ ಗುರಿ ಪಡೆದಿರುವುದು – ಹೀಗೆ ವಿಪರೀತ ಟೀಕೆಗೆ ಒಳಗಾಗಿರುವ ಸೌದಿ ರಾಜಕುಮಾರನ ಬಗ್ಗೆ ಎದ್ದಿರುವ ವಿವಾದಗಳು. ಇವೆಲ್ಲವುಗಳಿಗೆ ಮುಂದಿನ ದಿನಗಳಲ್ಲಿ ಸೂಕ್ತ ಉತ್ತರ ಸಿಗಬಲ್ಲದೆ ಎಂದು ಕಾದು ನೋಡಬೇಕಾಗಿದೆ? ಪತ್ರಕರ್ತ ಜಮಾಲ್ ಪ್ರಕರಣದಲ್ಲಿ ಇತ್ತೀಚಿನ ನವೀಕೃತ ಮಾಹಿತಿಯ ಪ್ರಕಾರ, ಜಮಾಲ್ ಖಶೋಘಿ ಸತ್ತ ನಂತರ" ದೇಹವೊಂದು ಅವನ ಬಟ್ಟೆ ದರಿಸಿ, ವಾಕಿಂಗ್ ಮಾಡಿಕೊಂಡು ಬಂದ ಚಿತ್ರವನ್ನು ಸಿ.ಎನ್.ಎನ್ ಇತ್ತೀಚೆಗೆ ಪ್ರಸಾರ ಮಾಡಿದೆ. ಸತ್ಯವನ್ನು ಮರೆಮಾಚುವ ಮತ್ತೊಂದು ಕಥನವನ್ನು ಸೌದಿ ಸಾಮ್ರಾಜ್ಯದ ರಾಜಕುಮಾರನ ಪರ ನಡೆಸಲಾಗುತ್ತಿದೆಯೇ?

●

JANASHAKTHI KANNADA VARA PATRIKE OCTOBER 29-NOVEMBER 4, 2018 Price: Rs. 10/- Date of Publication: 26 OCTOBER 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

‘ಮುಕ್ಕಾಲು ಭಾಗ ಕಾಫಿ ಬೆಳೆಯುವ ಶೇ.99 ಸಣ್ಣ ಬೆಳೆಗಾರರು ಕಷ್ಟದಲ್ಲಿದ್ದಾರೆ”

ಎಚ್.ಆರ್. ನವೀನ್ ಕುಮಾರ್



ಬಹುತೇಕರ ದಿನಚರಿ ಆರಂಭವಾಗುವುದು, ಸ್ನೇಹ ಬೆಳೆಸಲು ಸೇತುವೆಯಾಗಿ ಕೆಲಸ ನಿರ್ವಹಿಸುವಲ್ಲಿ ಕಾಫಿಯ ಪಾತ್ರ ಮಹತ್ತರವಾದದ್ದು. ಇಂತಹ ಕಾಫಿ ನಮ್ಮೆಲ್ಲರ ಕೈಗೆ ಬರುವುದರ ಹಿಂದೆ ಒಂದು ದೊಡ್ಡ ಶ್ರಮವೇ ಅಡಗಿದೆ. ಇಂತಹ ಕಾಫಿಯನ್ನು ನಮಗೆ ಬೆಳೆದು ಕೊಡುವ ಬೆಳೆಗಾರರ ಅಖಿಲ ಭಾರತ ಸಮಾವೇಶವೊಂದು ಅಕ್ಟೋಬರ್ 22 ರಂದು ಬೆಂಗಳೂರಿನಲ್ಲಿ ನಡೆಯಿತು. ಕರ್ನಾಟಕ, ಕೇರಳ, ಮತ್ತು ತಮಿಳುನಾಡು ರಾಜ್ಯಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಅಖಿಲ ಭಾರತ ಕಿನಾನ್ ಸಭಾದ ನೇತೃತ್ವದಲ್ಲಿ ನಡೆದ ಈ ಸಮಾವೇಶವನ್ನು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಬೆಳೆಗಾರರ ಒಕ್ಕೂಟ ಸಂಘಟಿಸಿದ್ದವು.

ಸಮಾವೇಶವನ್ನು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಮತ್ತು ಮಾಜಿ ಸಂಸದರಾದ ಹನ್ನನ್ ಮುಲ್ಲರವರು ಉದ್ಘಾಟಿಸಿ ಮಾತನಾಡುತ್ತಾ ದೇಶದ ರೈತ ಸಮುದಾಯ ಎದುರಿಸುತ್ತಿರುವ ಸಂಕಷ್ಟಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ದೃಷ್ಟಿಯಿಂದ ಬೆಳೆ ಆಧಾರಿತವಾಗಿ ರೈತರನ್ನು ಸಂಘಟಿಸುವ ಮತ್ತು ವಿವರವಾಗಿ ಬೆಳೆಗಾರರ ಸಮಸ್ಯೆಗಳನ್ನು ಅಧ್ಯಯನ ಮಾಡಿ ಸರ್ಕಾರದ ಗಮನ ಸೆಳೆಯುವ ಮತ್ತು ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಸಂಘಟನೆಯನ್ನು ವಿಸ್ತರಿಸಿ ಬಲಿಷ್ಟಗೊಳಿಸುವ ಕಿಸಾನ್ ಸಭಾದ ಅಖಿಲ ಭಾರತ ಸಮ್ಮೇಳನದ ತೀರ್ಮಾನದ ಭಾಗವಾಗಿ ಈ ಸಮಾವೇಶವನ್ನು ನಡೆಸಲಾಗುತ್ತಿದೆ. ಈಗಾಗಲೇ ಕಬ್ಬು ಬೆಳೆಗಾರರು, ರಬ್ಬರ್ ಬೆಳೆಗಾರರು ಮತ್ತು ಸೆಣಬು ಬೆಳೆಗಾರರ ಸಮಾವೇಶಗಳನ್ನು ಅಖಿಲ ಭಾರತ ಮಟ್ಟದಲ್ಲಿ ಯಶಸ್ವಿಯಾಗಿ ಸಂಘಟಿಸಿ ಈಗ ಬೆಂಗಳೂರಿನಲ್ಲಿ ಕಾಫಿ ಬೆಳೆಗಾರ ಸಮಾವೇಶವನ್ನು



ನಡೆಸಲಾಗುತ್ತಿದೆ ಎಂದರು.

ಜಾಗತಿಕ ಕಾಫಿ ಉತ್ಪಾದನೆಯಲ್ಲಿ ಭಾರತದ ಪಾಲು ಶೇ 4.5 ರಷ್ಟಿದ್ದರೂ ದೇಶದ ಪ್ರಮುಖ ಮೂರು ರಾಜ್ಯಗಳಲ್ಲೇ ಶೇ 92 ರಷ್ಟು ಕಾಫಿ ಉತ್ಪಾಧನೆಯಾಗುತ್ತದೆ. (ಕರ್ನಾಟಕ ಶೇ 53, ಕೇರಳ ಶೇ 28, ತಮಿಳುನಾಡು ಶೇ 11) ಉಳಿದಂತೆ ಅಂದ್ರಪ್ರದೇಶ, ಒರಿಸ್ಸಾ, ತ್ರಿಪುರ ಮತ್ತು ಅಸ್ಸಾಂ ರಾಜ್ಯಗಳಲ್ಲಿಯೂ ಸ್ವಲ್ಪ ಪ್ರಮಾಣದಲ್ಲಿ ಕಾಫಿಯನ್ನು ಬೆಳೆಯಲಾಗುತ್ತದೆ. ಇದರಲ್ಲಿ ಶೇ 70 ರಷ್ಟು ಕಾಫಿ ಉತ್ಪನ್ನವನ್ನು ರಫ್ತು ಮಾಡಲಾಗುತ್ತದೆ. ಭಾರತದಲ್ಲಿ ನೆರಳಿನಲ್ಲಿ ಕಾಫಿಯನ್ನು ಬೆಳೆಯುವುದರಿಂದ ಜಗತ್ತಿನಲ್ಲಿ ಭಾರತದ ಕಾಫಿ ಉತ್ತಮ ಗುಣಮಟ್ಟದ್ದಾಗಿದೆ. ಅದೇ ರೀತಿ ಬೆಳೆಗಾರರು ಸಾಕಷ್ಟು ಸಮಸ್ಯೆಗಳನ್ನು ಅನುಸರಿಸುತ್ತಿದ್ದು ಈ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸಮಾವೇಶದಲ್ಲಿ ಲಿಖಿತ ವರದಿಯೊಂದನ್ನು ಅಖಿಲ ಭಾರತ ಕಿಸಾನ್ ಸಭಾದ ಹಣಕಾಸು ಕಾರ್ಯದರ್ಶಿಗಳಾದ ಪಿ. ಕೃಷ್ಣ ಪ್ರಸಾದ್ ಮಂಡಿಸಿದರು. ಈ ವರದಿಯ ಮೇಲೆ ಮೂರು ರಾಜ್ಯಗಳಿಂದ ಭಾಗವಹಿಸಿದ್ದ ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಈ ಚರ್ಚೆಯಲ್ಲಿ ಬಂದ ಪ್ರಮುಖ ಅಂಶಗಳೆಂದರೆ, ಭಾರತದಲ್ಲಿ ಶೇ 99 ರಷ್ಟು ಕಾಫಿ ಬೆಳೆಗಾರರು 10 ಎಕರೆಗಳಿಗಿಂತ ಕಡಿಮೆ ಭೂಮಿಯನ್ನು ಹೊಂದಿರುವ ಸಣ್ಣ ಬೆಳೆಗಾರರಾಗಿದ್ದಾರೆ. ಇವರು ದೇಶದ ಒಟ್ಟು ಕಾಫಿ ಉತ್ಪಾದನೆಯಲ್ಲಿ ಶೇ.75 ರಷ್ಟು ಕೊಡುಗೆಯನ್ನು ನೀಡುತ್ತಿದ್ದಾರೆ. ಇಂತಹ ಸಣ್ಣ ಬೆಳೆಗಾರರು ಇಂದು ದೊಡ್ಡ ಪ್ರಮಾಣದ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಮುಖ್ಯವಾಗಿ ಸಣ್ಣ ಬೆಳೆಗಾರರು ಬೆಳೆದ ಕಾಫಿಗೆ ಸರಿಯಾದ ಮಾರುಕಟ್ಟೆಯನ್ನ ಒದಗಿಸಿ ನ್ಯಾಯಯುತವಾದ ಬೆಲೆಯನ್ನು ನೀಡುವ ವ್ಯವಸ್ಥೆ ನಿರ್ಮಾಣವಾಗಿಲ್ಲ. ಸಣ್ಣ ಬೆಳೆಗಾರರು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧೆ ಮಾಡಲಾಗದಿರುವುದರಿಂದ ಬಹುತೇಕ ಲಾಭ ಮಧ್ಯವರ್ತಿಗಳಿಗೆ ಮತ್ತು ದೊಡ್ಡ

ಪುಟ 11 ಕ್ಕೆ

ಕಾಯಂ ಉದ್ಯೋಗದ ಪರಿಕಲ್ಪನೆಯ ರಾಷ್ಟ್ರೀಯ ಉದ್ಯೋಗ ನೀತಿ ಬೇಕು: ಬರಗೂರು

ಶ್ರಮಕ್ಕೆ ಪ್ರತಿಫಲವಾಗಿರುವ ಅನ್ನ, ಮೂಲಸೌಕರ್ಯ ಹಾಗೂ ಕಲ್ಯಾಣ ಕಾರ್ಯ ರೂಪಿಸುವ ಆರ್ಥಿಕ ನೀತಿ ಬೇಕು. ಆದರೆ, ಸದ್ಯದ ಪರಿಸ್ಥಿತಿಯಲ್ಲಿ, ಹಣದ ಆರ್ಥಿಕ ನೀತಿ ಚಾಲ್ತಿಯಲ್ಲಿದ್ದು, ಹಣ ದುಪ್ಪಟ್ಟು ಮಾಡುವ ಕಾಲಚಕ್ರದಲ್ಲಿ ಸಿಲುಕಿದ್ದೇವೆ. ಹಿರಿಯ ಸಾತಿ ನಾಡೋಜ ಡಾ.ಬರಗೂರು ರಾಮಚಂದ್ರಪ್ಪ ಅವರು ಆತಂಕ ವ್ಯಕ್ತಪಡಿಸಿದರು.

ಆನಂದ ರಾವ್ ವೃತ್ತದ ಕೆಇಬಿ ಸಭಾಂಗಣದಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಆಯೋಜಿಸಿದ್ದ, ಖಾಯಮೇತರ ಕೆಲಸಗಳು– ಉದ್ಯೋಗದ ಹಕ್ಕು ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದ ಅವರು ದೇಶದ ಅಭಿವೃದ್ಧಿಗೆ 'ಅನ್ನ ಮೂಲ ಆರ್ಥಿಕ' ನೀತಿ ತ್ವರಿತವಾಗಿ ರೂಪಿಸುವ ಅಗತ್ಯವನ್ನು ಪ್ರತಿಪಾದಿಸಿದರು. ಅದೇ ರೀತಿ, ನಿರುದ್ಯೋಗ ಕಡಿಮೆ ಮಾಡುವ, ಕಾಯಂ ಉದ್ಯೋಗಿಗಳ ಪ್ರಮಾಣ ಹೆಚ್ಚಿಸುವ ಪರಿಕಲ್ಪನೆ ಒಳಗೊಂಡ ರಾಷ್ಟ್ರೀಯ ಉದ್ಯೋಗ ನೀತಿ ಬೇಕಾಗಿದೆ ಎಂದು ಅವರು ಹೇಳಿದರು.

ಖಾಸಗೀಕರಣ ಮತ್ತು ಖಾಸಗಿ ಆಸ್ತಿ ಹಕ್ಕು ಗಳಿಗೆ ಸಂಧಾನದಲ್ಲಿ ಒತ್ತು ನೀಡಬಾರದೆಂದು ಡಾ. ಬಿ.ಆರ್. ಅಂಬೇಡ್ಕರ್, ಜವಹರ್ ನೆಹರು ವಿರೋಧಿಸಿದ್ದರು. ಆದರೆ, ಇನ್ನಿತರರು ಮನ್ನಣೆ ನೀಡಿದ ಪರಿಣಾಮ, ನಾವು ಖಾಸಗೀಕರಣ ವ್ಯಾಪ್ತಿ ಹೆಚ್ಚಿಸಿಕೊಂಡು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗಿದೆ ಎಂದು ಅವರು ಹೇಳಿದರು.



ಸಣ್ಣ ಕೈಗಾರಿಕೆ ನಾಶ: ಕೇಂದ್ರ ಸರ್ಕಾರವು ದಿಢೀರ್ ಗರಿಷ್ಠ ಮುಖಬೆಲೆಯ ನೋಟು ನಿಷೇಧಿಸಿದಿಂದ ದೇಶದಲ್ಲೆಡೆ, ಬರೋಬ್ಬರಿ, 2.30 ಲಕ್ಷ ಸಣ್ಣ ಕೈಗಾರಿಕೆಗಳು ನಾಶವಾಗಿದ್ದು, 70 ಲಕ್ಷ ಉದ್ಯೋಗ ಕಣ್ಮರೆಯ್ಯಾತು. ಇದಕ್ಕೆ ಬೃಹತ್ ಬಂಡವಾಳಶಾಗಳು ಒಂದು ಕಾರಣವಾಗಿರುವುದು ಆರ್ಬಿಐ ಬಿಡುಗಡೆ ಮಾಡಿರುವ ವರದಿಯಲ್ಲಿ ಬಯಲಾಗಿದೆ ಎಂದು ನುಡಿದರು.

ಶಿಕ್ಷಣ ಕ್ಷೇತ್ರದಲ್ಲಿಯೇ ದೇಶ ವ್ಯಾಪ್ತಿ 50ಲಕ್ಷ ಉದ್ಯೋಗ ಖಾಲಿ ಇದೆ. ಹಾಗಾಗಿ, ಕೇಂದ್ರ–ರಾಜ್ಯ ಸರ್ಕಾರಗಳೆರಡು, ಉದ್ಯೋಗ ನೀತಿ ರಚಿಸಬೇಕು. ಈ ನಿಟ್ಟಿನಲ್ಲಿ ಎಲ್ಲಾ ವಲಯದ ಅಸಂಘಟಿತ ಕಾರ್ಮಿಕರು ಹೋರಾಟ ನಡೆಸಬೇಕಾದ ಅಗತ್ಯತೆ ಇದೆ. ಇತ್ತೀಚಿನ ಕಾಲಘಟ್ಟದಲ್ಲಿ ಮಾನವ ಶಕ್ತಿ ಕಡಿಮೆಗೊಳಿಸುವ ತಂತ್ರಜ್ಞಾನ ಬಳಕೆಗೆ ನಾವು ಮುಂದಾಗಿದ್ದೇವೆ. ಇದರ ಅರ್ಥ ನಾವು, ತಂತ್ರಜ್ಞಾನ, ಆಧುನಿಕತೆಯ ವಿರೋಧಿ ಅಲ್ಲ. ಇನ್ನೂ, ಖಾಸಗೀಕರಣಗಳಿಂದಲೇ ದೇಶ



ಪ್ರಗತಿ ಸಾಧಿಸಲಿದೆ ಎನ್ನುವ ವಾದ ತಪ್ಪು ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಸಿಐಟಿಯು ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮೀ 2001ರ ಐ.ಎಲ್.ಒ ವರದಿ ಅನ್ವಯ, ಜಗತ್ತಿನ ಮೂರರ ಒಂದರಷ್ಟು ಭಾಗ, ಶ್ರಮಿಕರು, ಯಾವುದೇ ಉದ್ಯೋಗ ಇಲ್ಲದೆ, ನಿರುದ್ಯೋಗ ಸಮಸ್ಯೆ ಎದುರಿಸಲಿದ್ದಾರೆ ಎಂದು ಎಚ್ಚರಿಕೆ ನೀಡಿತ್ತು. ಈಗ 40% ಶ್ರಮಶಕ್ತಿಗೆ ವರ್ಷಪೂರ್ತಿ ಕೆಲಸ ದೊರಕುತ್ತಿಲ್ಲ. 36% ರಷ್ಟು ಕಾರ್ಮಿಕರು ಸಾಂದರ್ಭಿಕ ಅಥವಾ ಗುತ್ತಿಗೆ ಕಾರ್ಮಿಕರಾಗಿದ್ದಾರೆ. ಆದರೆ, ಸರ್ಕಾರಗಳು ಇದುವರೆಗೂ ಎಚ್ಚೆತ್ತುಕೊಂಡಿಲ್ಲ ಎಂದು ಹೇಳಿದರು.

1991ರ ವರೆಗೆ ಗುತ್ತಿಗೆ ನೌಕರರ ಸಂಖ್ಯೆ ಕಡಿಮೆಯಿತ್ತು. ಜಾಗತೀಕರಣದ ನೀತಿಗಳು

ಪುಟ 11 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**